ಸೋಮವಾರ, ಸೆಪ್ಟೆಂಬರ್ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 249 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಆರನೇ ತರಗತಿಯಿಂದ ಶಾಲೆ ಆರಂಭವಾಗಿದ್ದು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವ ಮೊದಲು ಮುನ್ನೆಚ್ಚರಿಕೆ ವಹಿಸಬೇಕಾದ ಅವಶ್ಯಕತೆ ಇದೆ.



'ಈ ವರ್ಷ 5 ಸಾವಿರ ಶಿಕ್ಷಕರ ನೇಮಕ'

ಬೆಂಗಳೂರು: 'ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಐದು ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.


ಬಸವರಾಜ ಬೊಮ್ಮಾಯಿ

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಶಿಕ್ಷಕರ ಕೊರತೆ ನೀಗಿಸುವ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮಾಡಿದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ, ಈ ಘೋಷಣೆ ಮಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮ, ಮೆರವಣಿಗೆ ನಿಷೇಧ • ಮಾರ್ಗಸೂಚಿ ಕಡ್ಡಾಯ

5 ದಿನ ಗಣೇಶೋತ್ಸವಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಹಲವು ಷರತ್ತುಗಳೊಂದಿಗೆ ಐದು ದಿನಗಳ ಕಾಲ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಗಣೇಶೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮೆರವಣಿಗೆಗೆ ನಿಷೇಧ ಹೇರಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾನುವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿಸಿದ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ಕಂದಾಯ ಸಚಿವ ಆರ್. ಅಶೋಕ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ತಜ್ಞರ ಸಮಿತಿಯ ಸದಸ್ಯರು ಸಭೆಯಲ್ಲಿದ್ದರು. ಎಲ್ಲರ ಅಭಿಪ್ರಾಯ ಆಲಿಸಿದ ಮುಖ್ಯಮಂತ್ರಿ, ಗರಿಷ್ಠ ಐದು ದಿನಗಳವರೆಗೆ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಅನುಮತಿ ನೀಡುವ ತೀರ್ಮಾನ ಕೈಗೊಂಡರು.

ಕೋವಿಡ್ ಮೂರನೇ ಅಲೆ ಸೃಷ್ಟಿಯಾಗುವ ಸಾಧ್ಯತೆ ಇದೆ ಎಂಬ ತಜ್ಞರ ಎಚ್ಚರಿಕೆಯಿಂದಾಗಿ ಗಣೇಶೋತ್ಸವ ಕುರಿತು ಸರ್ಕಾರ ಯಾವುದೇ ನಿರ್ಧಾರಕ್ಕೆ ಬಂದಿರಲಿಲ್ಲ. ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇರಿದಂತೆ ಹಲವರು ಗಣೇಶೋತ್ಸವ ಆಚರಣೆಗೆ ಅವಕಾಶ ನೀಡುವಂತೆ ಒತ್ತಡ ಹೇರಲಾರಂಭಿಸಿದ್ದರು. ಕೆಲ ಹಿಂದೂ ಪರ ಸಂಘಟನೆಗಳು ಈ ಬೇಡಿಕೆ ಇಟ್ಟಿದ್ದವು.

6ನೇ ಪುಟ ನೋಡಿ

ಲಸಿಕೆ ಕಡ್ಡಾಯ

ಸಾರ್ವಜನಿಕ ಗಣೇಶೋತ್ಸವ ಆಚರಣೆಯ ಸಂಘಟಕರು ಕಡ್ಡಾಯವಾಗಿ ಕೋವಿಡ್ ಲಸಿಕೆ ಪಡೆದಿರಬೇಕು. 'ಕೋವಿಡ್ ನೆಗೆಟಿವ್' ಪ್ರಮಾಣಪತ್ರ ಹೊಂದಿರುವುದೂ ಕಡ್ಡಾಯ ಎಂದು ಕಂದಾಯ ಇಲಾಖೆಯ ಆದೇಶದಲ್ಲಿ ತಿಳಿಸಲಾಗಿದೆ.

ಗಣೇಶೋತ್ಸವ ಆಚರಣೆಯ ಸ್ಥಳಗಳಲ್ಲಿ ಸ್ಥಳೀಯವಾಗಿ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮ ಆಯೋಜಿಸಬೇಕು. ದೇವಸ್ಥಾನವೂ ಸೇರಿದಂತೆ ಗಣೇಶೋತ್ಸವ ಆಚರಿಸುವ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ನಿತ್ಯ ಸ್ಯಾನಿಟೈಸೇಷನ್ ಮಾಡಬೇಕು. ಸ್ಯಾನಿಟೈಸರ್ ಮತ್ತು ದೇಹದ ಉಷ್ಣಾಂಶ ತಪಾಸಣೆಗೆ ವ್ಯವಸ್ಥೆ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ.

ಪ್ರಮುಖ ಷರತ್ತುಗಳು

- ಗರಿಷ್ಠ ನಾಲ್ಕು ಅಡಿ ಎತ್ತರದ ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ ಮಾತ್ರ ಅನುಮತಿ
- ಒಮ್ಮೆಗೆ 20ಕ್ಕಿಂತ ಹೆಚ್ಚು ಜನರು ಸೇರುವಂತಿಲ್ಲ
- ದರ್ಶನದ ವೇಳೆ ಆರು ಅಡಿ ಅಂತರ ಕಾಯ್ದುಕೊಳ್ಳಲು ಗುರುತುಗಳನ್ನು ಹಾಕಬೇಕು



- ಸಾರ್ವಜನಿಕ ಗಣೇಶೋತ್ಸವದಲ್ಲಿ ಪಾಲ್ಗೊಳ್ಳುವ ಎಲ್ಲರೂ ಮಾಸ್ಕ್ ಧರಿಸುವುದು ಕಡ್ಡಾಯ
- ಸಾಂಸ್ಕೃತಿಕ, ಸಂಗೀತ, ನೃತ್ಯ ಹಾಗೂ ಡಿ.ಜೆ ಸಂಗೀತ ಕಾರ್ಯಕ್ರಮಗಳಿಗೆ ಅವಕಾಶವಿಲ್ಲ
- ಗಣೇಶ ವಿಗ್ರಹಗಳನ್ನು ತರುವಾಗ ಮತ್ತು ವಿಸರ್ಜನೆ ವೇಳೆ ಮೆರವಣಿಗೆ ನಡೆಸುವಂತಿಲ್ಲ
- ಮನೆಗಳಲ್ಲಿ ಪ್ರತಿಷ್ಠಾಪಿಸಿದ ವಿಗ್ರಹ, ಮೂರ್ತಿಗಳನ್ನು ಮನೆಗಳಲ್ಲೇ ವಿಸರ್ಜಿಸಬೇಕು
- ಸಾರ್ವಜನಿಕವಾಗಿ ಪ್ರತಿಷ್ಠಾಪಿಸಿದ ವಿಗ್ರಹಗಳನ್ನು ಹೊಂಡ, 'ಮೊಬೈಲ್ ಟ್ಯಾಂಕ್' ಅಥವಾ ಕೃತಕ ವಿಸರ್ಜನಾ ಟ್ಯಾಂಕರ್‌ಗಳಲ್ಲಿ ವಿಸರ್ಜಿಸಬೇಕು
- ವಾಹನ ಮತ್ತು ಜನರ ಸಂಚಾರಕ್ಕೆ ಅಡ್ಡಿಪಡಿಸುವಂತಿಲ್ಲ
- ಶಾಂತಿ ಮತ್ತು ಸೌಹಾರ್ದಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ಉಂಟುಮಾಡಬಾರದು

> ರಾತ್ರಿ ಕರ್ಫ್ಯೂವನ್ನು ಯಥಾವತ್ತಾಗಿ ಮುಂದುವರಿಸಲು ನಿರ್ಧರಿಸಲಾಗಿದೆ. ರಾತ್ರಿ 9 ರಿಂದ ಬೆಳಿಗ್ಗೆ 5 ರವರೆಗೆ ರಾತ್ರಿ ಕರ್ಫ್ಯೂ ಮುಂದುವರಿಯಲಿದೆ
> **ಆರ್. ಅಶೋಕ,** ಕಂದಾಯ ಸಚಿವ

ಇತಿಹಾಸ ಬರೆದ ಭಾರತ

ಟೋಕಿಯೊ: ಭಾರತದ ಅಥ್ಲೀಟ್‌ಗಳು ಈ ಸಲದ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗಳಿಕೆಯಲ್ಲಿ ಸರ್ವಶ್ರೇಷ್ಠ ದಾಖಲೆ ಮಾಡಿದ್ದಾರೆ. ಇದೇ ಮೊದಲ ಬಾರಿಗೆ 24ನೇ ಸ್ಥಾನ ಗಳಿಸಿದೆ. ಕೂಟದ ಕೊನೆದಿನ ಪುರುಷರ ಬ್ಯಾಡ್ಮಿಂಟನ್‌ನಲ್ಲಿ ಒಂದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಒಲಿದವು.

19 ಭಾರತ ಗಳಿಸಿದ ಪದಕಗಳು
5 ಚಿನ್ನ
8 ಬೆಳ್ಳಿ
6 ಕಂಚು
4 2016ರಲ್ಲಿ ಗಳಿಸಿದ್ದ ಪದಕಗಳ ದಾಖಲೆ



ಚಿನ್ನದ ಹುಡುಗ ಕೃಷ್ಣ ನಾಗಾರ್

ಬ್ಯಾಡ್ಮಿಂಟನ್ (ಎಸ್‌ಎಚ್ 6)		
ಫೈನಲ್	ಚೂನ್ ಮನ್ ಕಾಯ್ (ಹಾಂಕಾಂಗ್)	
21-17	16-21	21-17



ಕನ್ನಡಿಗನ ಬೆಳ್ಳಿ ಮಿಂಚು ಸುಹಾಸ್ ಯತಿರಾಜ್

ಬ್ಯಾಡ್ಮಿಂಟನ್ (ಎಸ್‌ಎಚ್ 4)		
ಫೈನಲ್	ಲೂಕಾಸ್ ಮಜುರ್ (ಚಿನ್ನ), (ಫ್ರಾನ್ಸ್)	
21-15	17-21	15-21

ಇನ್ನಷ್ಟು ಸುದ್ದಿಗಳು 11

ಗ್ರಾ.ಪಂ ನೌಕರರಿಗೆ ಬಡ್ತಿ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್–2) ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ (ಎಸ್‌ಡಿಎಎ) ಹುದ್ದೆಗಳಿಗೆ ಗ್ರಾಮ ಪಂಚಾಯಿತಿ ನೌಕರರ ವೃಂದದಿಂದ ನೇರ ನೇಮಕಾತಿ ಮಾಡಿಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕೋವಿಡ್ ಕಾರಣದಿಂದ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿಯಲಾಗಿತ್ತು. ಇದೀಗ ತಡೆಯನ್ನು ತೆರವುಗೊಳಿಸಲಾಗಿದೆ. ಆ ಮೂಲಕ, ಹಲವು ವರ್ಷಗಳಿಂದ ಪದೋನ್ನತಿಗೆ ಕಾಯುತ್ತಿರುವ ಗ್ರಾಮ ಪಂಚಾಯಿತಿಯ ವಿವಿಧ ವೃಂದಗಳ ಸಿಬ್ಬಂದಿಗೆ ಅನುಕೂಲ ಆಗಲಿದೆ.

4ನೇ ಪುಟ ನೋಡಿ

ಯಾವ ಹುದ್ದೆ ಎಷ್ಟು?

ಹುದ್ದೆ	ಒಟ್ಟು ಖಾಲಿ	ಗ್ರಾ.ಪಂ. ನೌಕರರಿಂದ ಭರ್ತಿ
ಗ್ರಾ. ಪಂ. ಕಾರ್ಯದರ್ಶಿ (ಗ್ರೇಡ್–2)	1,143	800
ದ್ವಿತೀಯ ದರ್ಜೆ ಲೆಕ್ಕ ಸಹಾಯಕ	316	158

> ನೇರ ನೇಮಕಾತಿ ನಿಯಮಕ್ಕೆ ತಿದ್ದುಪಡಿ ತಂದು ಗ್ರಾ.ಪಂ ನೌಕರರು ಗ್ರಾ.ಪಂ ಕಾರ್ಯದರ್ಶಿಗಳಾಗಲು ಅವಕಾಶ ಕಲ್ಪಿಸಲಾಗಿದೆ
> **ಬಸವರಾಜ ಬೊಮ್ಮಾಯಿ** ಮುಖ್ಯಮಂತ್ರಿ

ಕೇರಳ: ನಿಫಾಗೆ ಬಾಲಕ ಬಲಿ

ತಿರುವನಂತಪುರ: ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ನಿಫಾ ವೈರಾಣು ಸೋಂಕಿನಿಂದ 12 ವರ್ಷದ ಬಾಲಕ ಭಾನುವಾರ ಮೃತಪಟ್ಟಿದ್ದಾನೆ. ಬಾಲಕನಲ್ಲಿ ಮಿದುಳು ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದವು. ಹಾಗಿದ್ದರೂ ಆತನನ್ನು ನಿಫಾ ಪರೀಕ್ಷೆಗೆ ಒಳಪಡಿಸಿರಲಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಈ ಬಗ್ಗೆ ತನಿಖೆ ನಡೆಸುವುದಾಗಿ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಬಾಲಕನ ಸಂಪರ್ಕಕ್ಕೆ ಬಂದಿದ್ದ ಆಸ್ಪತ್ರೆಯ ಇಬ್ಬರು ಸಿಬ್ಬಂದಿಯಲ್ಲಿ ನಿಫಾ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿವೆ. ಬಾಲಕನ ಮನೆಯ ಸುತ್ತಲಿನ ಮೂರು ಕಿ.ಮೀ. ಪ್ರದೇಶವನ್ನು ಕಂಟೈನ್‌ಮೆಂಟ್ ವಲಯ ಎಂದು ಗುರುತಿಸಲಾಗಿದೆ.

6

ಒಳ ಪುಟ


ಬಿಜೆಪಿ ಸೋಲಿಸಲು ರೈತರ ಶಪಥ 6

ರಾಜ್ಯ ಕೋವಿಡ್ ಅಂಕಿ–ಅಂಶ

29,55,164 ▲ ಒಟ್ಟು ಸೋಂಕಿತರು (29,54,047 ನಿನ್ನೆಯ ವಿವರ)
17,501 ▼ ಸಕ್ರಿಯ ಪ್ರಕರಣಗಳು
29,00,228 ▲ ಗುಣಮುಖರಾದವರು
37,409 ▲ ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	1,117	▲
ಗುಣಮುಖ	1,354	▼
ಸಾವು	08	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅನಿರ್ದಿಷ್ಟಾವಧಿ ಮುಷ್ಕರ: ಬಿಬಿಎಂಪಿ ನೌಕರರ ಸಂಘ ಎಚ್ಚರಿಕೆ

39 ಹೊಸ ಹುದ್ದೆ ಸೃಷ್ಟಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ನಗರ ಯೋಜನಾ ವಿಭಾಗದಲ್ಲಿ 39 ಹೊಸ ಹುದ್ದೆಗಳನ್ನು ಸೃಷ್ಟಿಸುವುದಕ್ಕೆ ಸಂಸ್ಥೆಯ ನೌಕರರಿಂದಲೇ ವಿರೋಧ ವ್ಯಕ್ತವಾಗಿದೆ. 'ಈ ಹುದ್ದೆಗಳ ಅಗತ್ಯವೇ ಇಲ್ಲ. ಇದರಿಂದ ಬಿಬಿಎಂಪಿಯ ಆರ್ಥಿಕ ಹೊರೆ ಹೆಚ್ಚಲಿದೆ' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಅಸಮಾಧಾನ ವ್ಯಕ್ತಪಡಿಸಿದೆ.

ಹೊಸತಾಗಿ 39 ಹುದ್ದೆ ಸೃಷ್ಟಿಸುವ ಮೂಲಕ ನಗರ ಯೋಜನಾ ವಿಭಾಗವನ್ನು ಬಲವರ್ಧನೆ ಮಾಡಿದರೆ ಪಾಲಿಕೆಯ ಯೋಜನೆಗಳಲ್ಲಿ ಹಿಂದಿನ ಮತ್ತು ವರ್ತಮಾನದ ಉಲ್ಲಂಘನೆಗಳನ್ನು ಸರಿಪಡಿಸಲು ಅನುಕೂಲವಾಗುತ್ತದೆ. ಶುಲ್ಕ ಹಾಗೂ ದಂಡ ವಿಧಿಸುವಿಕೆ ಹೆಚ್ಚಿಸುವ ಮೂಲಕ ಪಾಲಿಕೆ ಆದಾಯ ಜಾಸ್ತಿ ಮಾಡುವ ಸಂಪೂರ್ಣ ಹೊಣೆ ಯೋಜನಾ ವಿಭಾಗದ್ದಾಗಿರುತ್ತದೆ ಎಂದು ಆಡಳಿತ ಇಲಾಖೆ ಪ್ರಸ್ತಾವನೆಯಲ್ಲಿ ತಿಳಿಸಿತ್ತು. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿಯೋಜನೆ ಮೂಲಕ ಈ ಹುದ್ದೆಗಳನ್ನು ಸೃಷ್ಟಿಸುವ ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಇದೇ ಸೆ.1ರಂದು ಅನುಮೋದನೆ ನೀಡಿದ್ದರು.

ಈ ಪ್ರಸ್ತಾವ ಕೈಬಿಡದೇ ಹೋದರೆ ಇದೇ 7ರಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳುವುದಾಗಿ ಬಿಬಿಎಂಪಿ ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಎಚ್ಚರಿಕೆ ನೀಡಿದೆ.

'ಹೊಸ ವೃಂದ ಮತ್ತು ನೇಮಕಾತಿ ನಿಯಾಮಾವಳಿ ಪ್ರಕಾರ ಬಿಬಿಎಂಪಿಯಲ್ಲಿ 5,219 ಹೆಚ್ಚುವರಿ ಹುದ್ದೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಆದರೂ, ಇದುವರೆಗೂ ಯಾವುದೇ ಹುದ್ದೆಗೂ ಸರ್ಕಾರ ಮಂಜೂರಾತಿ ನೀಡಿಲ್ಲ. ಎಂಜಿನಿಯರ್, ಕಂದಾಯ ನಿರೀಕ್ಷಕ, ಆರೋಗ್ಯಾಧಿಕಾರಿ ಸೇರಿ ಒಟ್ಟು 4,452 ಹುದ್ದೆಗಳನ್ನು ಸೃಷ್ಟಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ಆದರೆ, ನಗರ ಯೋಜನೆ ವಿಭಾಗದಲ್ಲಿ ಏಕಾಏಕಿ 39 ಹೊಸ ಹುದ್ದೆಗಳನ್ನು ಸೃಷ್ಟಿಸಲು ಆರ್ಥಿಕ ಇಲಾಖೆಯವರು ಮಂಜೂರಾತಿ ನೀಡಿದ್ದು ಅವೈಜ್ಞಾನಿಕ ಕ್ರಮ' ಎಂದು ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಟೀಕಿಸಿದರು.

'ಈ 39 ಹೊಸ ಹುದ್ದೆಗಳಿಂದಾಗಿ ಬಿಬಿಎಂಪಿಗೆ ತಿಂಗಳಿಗೆ ಏನಿಲ್ಲವೆಂದರೂ ₹ 1 ಕೋಟಿಗೂ ಅಧಿಕ ಹೊರೆ ಬೀಳಲಿದೆ. ಮೊದಲೇ ಆರ್ಥಿಕ ಸಂಕಷ್ಟದಲ್ಲಿರುವ ಬಿಬಿಎಂಪಿ ಈ ಹೊರೆಯನ್ನು ಹೊರುವುದಾದರೂ ಹೇಗೆ' ಎಂದು ಅವರು ಪ್ರಶ್ನಿಸಿದರು.

'ಬಿಬಿಎಂಪಿಯಲ್ಲಿ 1,066 ಗ್ರೂಪ್ ಡಿ ನೌಕರರು, 409 ಪ್ರಥಮ ದರ್ಜೆ ಸಹಾಯಕರು, 350 ದ್ವಿತೀಯ ದರ್ಜೆ ಸಹಾಯಕರು, 145 ವ್ಯವಸ್ಥಾಪಕರು, ನರ್ಸರಿ ಮತ್ತು ಅಂಗನವಾಡಿ ಶಿಕ್ಷಕಿಯರ 196 ಹುದ್ದೆಗಳು, 248 ಶುಶ್ರೂಷಕರು, 435 ಕಿರಿಯ ಆರೋಗ್ಯ ಸಹಾಯಕಿಯರು, 104 ಕಿರಿಯ ಆರೋಗ್ಯ ಪರಿವೀಕ್ಷಕರು, 184 ಆಯಾಗಳು, 245 ಚಾಲಕರು, 25 ಚಿತಾಗಾರ ನಿರ್ವಾಹಕರು ಸೇರಿದಂತೆ ಒಟ್ಟು 4,660 ಹೊಸ ಹುದ್ದೆಗಳನ್ನು ಸೃಷ್ಟಿಸುವ ಪ್ರಸ್ತಾವನೆಯನ್ನು ಬಿಬಿಎಂಪಿ ಸರ್ಕಾರದ ಮುಂದಿಟ್ಟಿತ್ತು. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಜನರಿಗೆ ಉತ್ತಮ ಸೇವೆ ಒದಗಿಸಲು ಅನಿವಾರ್ಯವಾಗಿರುವ ಈ ಹುದ್ದೆಗಳನ್ನು ಸೃಜಿಸುವ ಬದಲು ನಗರ ಯೋಜನೆ ವಿಭಾಗಕ್ಕೆ ಮಾತ್ರ ಹೊಸ ಹುದ್ದೆಗಳನ್ನು ಸೃಜಿಸುವುದು ಸಮಂಜಸವಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ನಗರ ಯೋಜನೆ: ಹೊಸ ಹುದ್ದೆಗಳ ವಿವರ

ಹುದ್ದೆ	ಸಂಖ್ಯೆ
ಜಂಟಿ ನಿರ್ದೇಶಕರು	09
ಉಪ ನಿರ್ದೇಶಕರು	03
ಸಹಾಯಕ ನಿರ್ದೇಶಕರು	21
ನಗರ ಯೋಜಕರು	06

ಲೇಖಕಿಯರಿಂದ ಕಥಾ ಸಂಕಲನ ಆಹ್ವಾನ

ಬೆಂಗಳೂರು: 'ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ'ವು ಕನ್ನಡ ಅಧ್ಯಾಪಕಿ ಸರಳಾ ರಂಗನಾಥ್ ರಾವ್ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಲೇಖಕಿಯರಿಂದ ಸಣ್ಣ ಕಥೆಗಳ ಕಥಾ ಸಂಕಲನ ಆಹ್ವಾನಿಸಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. 2020ರ ಜ.1ರಿಂದ ಡಿ.31 ರೊಳಗೆ ಪ್ರಕಟವಾದ ಸಣ್ಣ ಕಥೆಗಳ ಕಥಾ ಸಂಕಲನವನ್ನು ಲೇಖಕಿಯರು ಕಳುಹಿಸಬಹುದು. ಕೃತಿಯ ಮೂರು ಪ್ರತಿಗಳನ್ನು ಸೆ.30ರೊಳಗೆ ಜಿ.ಎನ್. ರಂಗನಾಥ ರಾವ್, ಕಾರ್ಯಾಧ್ಯಕ್ಷರು, ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ, ಸ್ನೇಹ, 3ನೇ ಮುಖ್ಯರಸ್ತೆ, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560095 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಕಾರ್ಯದರ್ಶಿ ತೀರ್ಥ ಜಿ.ಆರ್.ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ ದೂ.: 25701165 ಅಥವಾ 6362473151

ಸುದ್ದಿ 2 ನಿಮಿಷ

ಕನ್ನಡ ಕಡೆಗಣನೆ: ಶಿಸ್ತುಕ್ರಮಕ್ಕೆ ನಾಗಾಭರಣ ಒತ್ತಾಯ

ಬೆಂಗಳೂರು: 'ಮಲ್ಲೇಶ್ವರ ಕೌಶಲ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಉದ್ಯೋಗ ಮೇಳದಲ್ಲಿ ಕನ್ನಡ ಕಡೆಗಣಿಸಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದ್ದು, ಸಂಬಂಧಪಟ್ಟ ಅಧಿಕಾರಿಯ ಮೇಲೆ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕರ್ನಾಟಕ ಕೌಶಲ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. 'ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯಾಗಿ ಎಲ್ಲ ಹಂತದಲ್ಲೂ ಜಾರಿಗೆ ತರಲಾಗಿದೆ. ಸರ್ಕಾರದ ಈ ಹಿಂದಿನ ಆದೇಶದ ಅನ್ವಯ ಸರ್ಕಾರಿ ಇಲಾಖೆ ಹಾಗೂ ಕಚೇರಿಗಳಲ್ಲಿ ಕನ್ನಡ ಭಾಷೆಯ ಬಳಕೆಯಲ್ಲಾಗುವ ಅಡೆತಡೆಗಳಿಗೆ ಆಯಾ ಇಲಾಖೆಯ ಮುಖ್ಯಸ್ಥರು ಜವಾಬ್ದಾರರು. ಕೌಶಲ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದ ವೇದಿಕೆಯ ಪರದೆ ಮೇಲೆ ಆಂಗ್ಲ ಭಾಷೆಯನ್ನು ಬಳಕೆ ಮಾಡಲಾಗಿದೆ. ಕನ್ನಡವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ



ಯಲಹಂಕ: ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ವಾರ್ಷಿಕ ಕ್ರೀಡಾಕೂಟಕ್ಕೆ ಅಂತರರಾಷ್ಟ್ರೀಯ ವಾಲಿಬಾಲ್ ಆಟಗಾರ ಅನುಪ್ ಡಿ.ಕೋಸ್ಟ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಕ್ರೀಡೆಗಳಿಂದ ಜೀವನದಲ್ಲಿ ಶಿಸ್ತು ಬೆಳವಣಿಗೆಯಾಗುವ ಮೂಲಕ ಜೀವನಶೈಲಿ ಪರಿವರ್ತನೆಯಾಗಿ ಉತ್ತಮ ಆರೋಗ್ಯ ವೃದ್ಧಿಯಾಗಲು ಸಹಕಾರಿಯಾಗುತ್ತದೆ. ಸರ್ಕಾರಗಳು ಕ್ರೀಡೆಯನ್ನು ಪಠ್ಯೇತರ ಚಟುವಟಿಕೆಯಾಗಿ ಪರಿಗಣಿಸದೆ ಶಿಕ್ಷಣಕ್ಕೆ ನೀಡಿದಷ್ಟು ಮಹತ್ವವನ್ನು ಕ್ರೀಡೆಗಳಿಗೂ ನೀಡಬೇಕು. ಇದರಿಂದ ಭವಿಷ್ಯದಲ್ಲಿ ಉತ್ತಮ ಕ್ರೀಡಾಪಟುಗಳು ಹೊರಹೊಮ್ಮಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಪ್ರಾಂಶುಪಾಲ ಡಾ.ಟಿ.ಎನ್.ಶ್ರೀನಿವಾಸ ಮಾತನಾಡಿ, 'ಕ್ರೀಡಾಕೂಟದಲ್ಲಿ 400 ವಿದ್ಯಾರ್ಥಿಗಳು ಹಾಗೂ 180 ಉಪನ್ಯಾಸಕರು ಪಾಲ್ಗೊಂಡಿದ್ದಾರೆ' ಎಂದರು.

ಟೂತ್‌ಪೇಸ್ಟ್ ಪೊಟ್ಟಣದಲ್ಲಿ ಡ್ರಗ್ಸ್ ಸಾಗಿಸುತ್ತಿದ್ದವ ಸೆರೆ

ಬೆಂಗಳೂರು: ತನಿಖಾ ಸಂಸ್ಥೆಗಳ ದಾರಿ ತಪ್ಪಿಸುವ ಸಲುವಾಗಿ ಟೂತ್‌ಪೇಸ್ಟ್ ಪೊಟ್ಟಣ ಹಾಗೂ ಸೌಂದರ್ಯ ವರ್ಧಕ ಜೆಲ್‌ನ ಡಬ್ಬಿಗಳಲ್ಲಿ ಮಾದಕ ವಸ್ತು ಸಾಗಿಸುತ್ತಿದ್ದ ಪೆಡ್ಲರ್‌ನನ್ನು ಸಿಸಿಬಿ ಹಾಗೂ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಆರೋಪಿಯು ನೈಜೀರಿಯಾ ಪ್ರಜೆ ಎಂಬುದು ಗೊತ್ತಾಗಿದೆ. ಆತನಿಂದ ₹1 ಕೋಟಿ ಮೌಲ್ಯದ 500 ಗ್ರಾಂ ಎಂ.ಡಿ.ಎಂ.ಎ.ಕ್ರಿಸ್ಟೆಲ್ ಹಾಗೂ 400 ಎಂ.ಡಿ.ಎಂ.ಎ.ಎಕ್ಸ್‌ಟೆಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ. ಕೃತ್ಯಕ್ಕೆ ಬಳಸುತ್ತಿದ್ದ ಮೊಬೈಲ್ ಹಾಗೂ ತೂಕದ ಯಂತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ.

'ಪ್ರವಾಸಿ ವೀಸಾ ಅಡಿಯಲ್ಲಿ ಭಾರತಕ್ಕೆ ಬಂದಿರುವ ಆರೋಪಿಯು ಕಮ್ಮನಹಳ್ಳಿಯ ಸೇಂಟ್ ಥಾಮಸ್ ಟೌನ್‌ನ 3ನೇ ತಿರುವಿನಲ್ಲಿರುವ ಕಟ್ಟಡವೊಂದರಲ್ಲಿ ವಾಸವಿದ್ದ. ಈತ ಮಾದಕ ವಸ್ತು ಮಾರಾಟ ಜಾಲದಲ್ಲಿ ಸಕ್ರಿಯವಾಗಿರುವ ಕುರಿತು ಖಚಿತ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ಅಧಿಕಾರಿಗಳ ತಂಡವು ಕಾನ್ವೆಂಟ್ ಅಡ್ಡರಸ್ತೆಯಲ್ಲಿರುವ ಕಟ್ಟಡದ ಮೇಲೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿತ್ತು'.

'ಮುಂಬೈನಲ್ಲಿರುವ ತನ್ನ ಸ್ನೇಹಿತನಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದ ಆರೋಪಿ, ಅವುಗಳನ್ನು ಟೂತ್‌ಪೇಸ್ಟ್ ಪೊಟ್ಟಣ ಹಾಗೂ ಸೌಂದರ್ಯವರ್ಧಕ ಜೆಲ್‌ನ ಡಬ್ಬಿಗಳಲ್ಲಿ ತುಂಬಿಕೊಂಡು ನಗರಕ್ಕೆ ತರುತ್ತಿದ್ದ. ಅದನ್ನು ಕಾಲೇಜು ವಿದ್ಯಾರ್ಥಿಗಳು ಹಾಗೂ ಐ.ಟಿ.ಕಂಪನಿಯ ಉದ್ಯೋಗಿಗಳಿಗೆ ಮಾರುತ್ತಿದ್ದ. ಈತನ ವಿರುದ್ಧ ಮುಂಬೈನ ಸಾಂತಾಕ್ರೂಸ್ ಪೊಲೀಸ್ ಠಾಣೆಯಲ್ಲೂ ಪ್ರಕರಣ ದಾಖಲಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಆರೋಪಿಯ ವಿರುದ್ಧ ಎನ್.ಡಿ.ಪಿ.ಎಸ್ ಕಾಯ್ದೆಯ ಅಡಿಯಲ್ಲಿ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿಸಿ ಆತನಿಂದ ಮತ್ತಷ್ಟು ಮಾಹಿತಿಗಳನ್ನು ಕಲೆಹಾಕಲಾಗುತ್ತದೆ' ಎಂದು ತಿಳಿಸಿದ್ದಾರೆ.

'ಗೌರಿ ನೆನಹು' ಕಾರ್ಯಕ್ರಮದಲ್ಲಿ ಕವಿತಾ ಲಂಕೇಶ್

'ಸರ್ಕಾರದ ವಿರುದ್ಧ ಬರೆಯಲಾಗದ ಸ್ಥಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸ್ಥಿತಿ ಹಿಂದಿಗಿಂತಲೂ ಹೆಚ್ಚು ಹದಗೆಟ್ಟಿದೆ. ಈಗ ಪತ್ರಕರ್ತರ ಮೇಲೆ ಹಲ್ಲೆಗಳಾಗುತ್ತಿವೆ. ಸರ್ಕಾರದ ವಿರುದ್ಧ ಬರೆಯಲಾಗದ ಸ್ಥಿತಿ ನಿರ್ಮಾಣವಾಗಿದೆ. ಈ ಹೊತ್ತಿನಲ್ಲಿ ಅಪ್ಪ (ಪಿ.ಲಂಕೇಶ್) ಮತ್ತು ಗೌರಿ ಲಂಕೇಶ್ ಇದ್ದಿದ್ದರೆ ಏನು ಮಾಡುತ್ತಿದ್ದರು ಎಂಬ ಯೋಚನೆ ಆಗಾಗ ಮೂಡುತ್ತಿರುತ್ತದೆ' ಎಂದು ಗೌರಿ ಅವರ ಸಹೋದರಿ ಕವಿತಾ ಲಂಕೇಶ್ ತಿಳಿಸಿದರು.

ಗೌರಿ ಲಂಕೇಶ್ ಹತ್ಯೆಯಾಗಿ ನಾಲ್ಕು ವರ್ಷ ಆಗಿರುವ ಹಿನ್ನೆಲೆಯಲ್ಲಿ ಗೌರಿ ಮೆಮೋರಿಯಲ್ ಟ್ರಸ್ಟ್ ಹಮ್ಮಿಕೊಂಡಿದ್ದ 'ಗೌರಿ ನೆನಹು' ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

'ಗೌರಿ ಹತ್ಯೆಯ ಕರಾಳ ನೆನಪು ಇನ್ನೂ ಮನಸ್ಸಿನಿಂದ ಮಾಸಿಲ್ಲ. ಆಕೆಯ ಹೋರಾಟವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಖುಷಿಯ ವಿಚಾರ' ಎಂದರು.

ಲೇಖಕಿ ಬಿ.ಟಿ.ಲಲಿತಾ ನಾಯ್ಕ್, 'ಅನ್ಯಾಯ ಖಂಡಿಸುವವರಿಗೆ ಗುಂಡೇಟು ಬೀಳುತ್ತಿರುವುದು ದೊಡ್ಡ ದುರಂತ. ಅದು ಹಿಂದೆಯೂ ಇತ್ತು. ಮುಂದೆಯೂ ಇರಲಿದೆ. ಇದಕ್ಕೆಲ್ಲ ಅಂಜಬಾರದು. ಅನ್ಯಾಯ ಹಾಗೂ ದೌರ್ಜನ್ಯದ ವಿರುದ್ಧ ಸಿಡಿದೇಳುವ ಸಂಕಲ್ಪವನ್ನು ಎಲ್ಲರೂ ಮಾಡಬೇಕು' ಎಂದು ತಿಳಿಸಿದರು.

'ಲಂಕೇಶ್ ಹಾಗೂ ಗೌರಿ ಲಂಕೇಶ್ ತಮ್ಮ ಬರಹಗಳ ಮೂಲಕ ಧಾರ್ಮಿಕ ಸಂಘಟನೆಗಳ ರಾಜಕೀಯವನ್ನು ಬಯಲು ಮಾಡುತ್ತಿದ್ದರು. ಈಗ ಜಾತೀಯತೆ, ಕೋಮುದೌರ್ಜನ್ಯ ಹೆಚ್ಚುತ್ತಿದೆ. ಇಂತಹ ಸಂದಿಗ್ಧತೆಯಲ್ಲೂ ದಿಟ್ಟತನದಿಂದ ನಾವೆಲ್ಲಾ ಹೋರಾಟ ನಡೆಸಬೇಕು. ಆ ಮೂಲಕ ಗೌರಿ ಆಶಯವನ್ನು ಸಾಕಾರಗೊಳಿಸಬೇಕು' ಎಂದು ಹೇಳಿದರು.

ಗೌರಿ ಮೆಮೋರಿಯಲ್ ಟ್ರಸ್ಟ್ ಸದಸ್ಯ ನೂರ್ ಶ್ರೀಧರ್, 'ಗೌರಿ ಎಲ್ಲರ ಹೃದಯದಲ್ಲಿ ಸ್ಥಾನ ಪಡೆದಿದ್ದರು. ದುಷ್ಕರ್ಮಿಗಳು ಹಾರಿಸಿದ ಗುಂಡು ಕೇವಲ ಗೌರಿ ಅವರ ಎದೆಗಷ್ಟೇ ಅಲ್ಲ, ಸಹೃದಯರ ಮನಸ್ಸನ್ನೂ ಘಾಸಿಗೊಳಿಸಿತ್ತು. ಅದು ಗೌರಿ ಘರ್ಜನೆಯಾಯಿತು. ಭಯದ ಬದಲು ಮತ್ತಷ್ಟು ವಿಶ್ವಾಸ, ಹೋರಾಟದ ಸಂಕಲ್ಪಕ್ಕೆ ನಾಂದಿಯಾಯಿತು' ಎಂದು ತಿಳಿಸಿದರು.

ಗೌರಿ ಅವರ ತಾಯಿ ಇಂದಿರಾ ಲಂಕೇಶ್, ಗೌರಿ ಮೆಮೋರಿಯಲ್ ಟ್ರಸ್ಟ್‌ನ ಕಾರ್ಯದರ್ಶಿ ದೀಪು, ಕೆ.ಎಲ್. ಅಶೋಕ್, ಚಿಂತಕ ಶಿವಸುಂದರ್, ಹೋರಾಟಗಾರರಾದ ಸಿರಿಮನೆ ನಾಗರಾಜು, ವಾಸು, ಮಲ್ಲಿಗೆ ಸಿರಿಮನೆ, ಪ್ರೊ.ನಗರಿ ಬಾಬಯ್ಯ, ಮಲ್ಲೂ ಕುಂಬಾರ್, ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಸರೋವರ್ ಬೆಂಕಿಕೆರೆ, ಹೇಮಂತ್, ಕರ್ನಾಟಕ ಜನಶಕ್ತಿ ಮತ್ತು ಮಹಿಳಾ ಮುನ್ನಡೆ ಕಾರ್ಯಕರ್ತೆ ಚೆನ್ನಮ್ಮ ಇದ್ದರು.



ಗೌರಿ ಅವರ ಭಾವಚಿತ್ರಕ್ಕೆ ಇಂದಿರಾ ಲಂಕೇಶ್ ಪುಷ್ಪ ನಮನ ಸಲ್ಲಿಸಿದರು. ಕವಿತಾ ಲಂಕೇಶ್ ಹಾಗೂ ಲೇಖಕಿ ಬಿ.ಟಿ.ಲಲಿತಾ ನಾಯ್ಕ್ ಇದ್ದರು.

ಬಾಲಕಿ ಮೇಲೆ ಅತ್ಯಾಚಾರ

ಭಟ್ಕಳ: ಹದಿನಾರು ವರ್ಷದ ಬಾಲಕಿಯೊಬ್ಬಳನ್ನು ಪುಸಲಾಯಿಸಿ ಅತ್ಯಾಚಾರ ಎಸಗಿದ ಕುರಿತು ಮುರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

'ಘಟನೆ ಕುರಿತು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಆರೋಪಿ ಬೆದರಿಕೆ ಹಾಕಿದ್ದಾನೆ' ಎಂದು ಬಾಲಕಿಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಆರೋಪಿಗಾಗಿ ಶೋಧ ನಡೆದಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಬಿಬಿಎಂಪಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವ ಬಿ.ಸಿ. ನಾಗೇಶ್ ಅವರು ಶಿಕ್ಷಕರಾದ ಮಂಜುನಾಥ ಡಿ.ಎಸ್, ಪೂರ್ಣಿಮಾ, ಮಮತಾ ಎ.ಎನ್ ಹಾಗೂ ಪರಶುರಾಮ ಆರ್. ಅವರಿಗೆ 'ಉತ್ತಮ ಶಿಕ್ಷಕ ಪ್ರಶಸ್ತಿ' ಪ್ರದಾನ ಮಾಡಿದರು. ಬಿಬಿಎಂಪಿ ಸಹಾಯಕ ಆಯುಕ್ತ (ಶಿಕ್ಷಣ) ಉಮೇಶ್ ಡಿ.ಎಸ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ವಿಶೇಷ ಆಯುಕ್ತ (ಶಿಕ್ಷಣ) ರೆಡ್ಡಿ ಶಂಕರ್ ಬಾಬು ಇದ್ದರು –ಪ್ರಜಾವಾಣಿ ಚಿತ್ರ



ಉನ್ನತ ಶಿಕ್ಷಣ ಇಲಾಖೆ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ (ಧಾರವಾಡ) ನಿರ್ದೇಶಕ ಪ್ರೊ.ಎಸ್.ಎಂ. ಶಿವಪ್ರಸಾದ್ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಬಿ. ತಿಮ್ಮೇಗೌಡ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ ನಿಂತವರು) ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಕಾಲೇಜು ಶಿಕ್ಷಣ ಆಯುಕ್ತ ಪಿ. ಪ್ರದೀಪ, ವಿಧಾನಪರಿಷತ್ ಸದಸ್ಯ ಎ. ದೇವೇಗೌಡ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಕುಲಪತಿ ಲಿಂಗರಾಜು ಗಾಂಧಿ ಇದ್ದರು.



ನಗರದಲ್ಲಿ ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪ್ರೌಢಶಾಲೆ ನಿವೃತ್ತ ಶಿಕ್ಷಕಿ ಗಾಯತ್ರಿ ರಾಮಣ್ಣ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ, ಲೇಖಕಿ ವಿಜಯಾ ಸುಬ್ಬರಾಜು, ಸದ್ಭಾವನ ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಮೂರ್ತಿ, ಲೇಖಕ ಕಾ.ವೆಂ. ಶ್ರೀನಿವಾಸಮೂರ್ತಿ ಇದ್ದರು

ಉನ್ನತ ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳು, ಸಂಘ–ಸಂಸ್ಥೆಗಳಿಂದ ಶಿಕ್ಷಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ

ಅರಿವಿನ ದಾರಿ ತೋರಿದ ಗುರುವಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಡುವೆಯೂ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಗಲಿರುಳು ಶ್ರಮಿಸಿದ ಶಿಕ್ಷಕರ ಕಾರ್ಯವೈಖರಿಯನ್ನು ಗುರುತಿಸಿ, ಗೌರವಿಸಲಾಯಿತು. ತಿದ್ದಿ ಬುದ್ಧಿ ಹೇಳಿದ ಗುರುಗಳಿಗೆ ಮಕ್ಕಳು ಶುಭಕೋರುವ ಮೂಲಕ ಶಿಕ್ಷಕರ ಸಂಭ್ರಮವನ್ನು ಇಮ್ಮಡಿಸಿದರು.

ವಿವಿಧ ಸಂಘಟನೆಗಳು ಕೋವಿಡ್ ನಿರ್ಬಂಧಗಳೊಂದಿಗೆ ಶಿಕ್ಷಕರ ದಿನಾಚರಣೆಯನ್ನು ಭಾನುವಾರ ಸರಳವಾಗಿ ಆಚರಿಸಿದವು. ಉನ್ನತ ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳು, ಸಂಘ–ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಕ್ಷಕರನ್ನು ಸನ್ಮಾನಿಸಿದವು.

ಉನ್ನತ ಶಿಕ್ಷಣ ಇಲಾಖೆಯು ಸೆಂಟ್ರಲ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಹೊಸ ಶಿಕ್ಷಣ ನೀತಿಯಲ್ಲಿನ ಅಂಶಗಳು ದೇಶವನ್ನು ಮತ್ತಷ್ಟು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಲಿದೆ. 2030ರ ವೇಳೆಗೆ ರಾಜ್ಯದಲ್ಲಿ ಸಂಪೂರ್ಣವಾಗಿ ಈ ನೀತಿಯು ಜಾರಿಯಾಗಬೇಕು ಎಂಬ ಗುರಿಯನ್ನು ಸರ್ಕಾರ ಹೊಂದಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ವಿಚಾರದಲ್ಲಿ ಸರ್ಕಾರ ಆತುರ ತೋರುತ್ತಿಲ್ಲ. ಈ ನೀತಿಯನ್ನು ರೂಪಿಸಿ 5 ವರ್ಷಗಳಾಗಿವೆ. ಜಾರಿ ವಿಚಾರದಲ್ಲಿ ಕರ್ನಾಟಕವೇ ದೇಶಕ್ಕೆ ಮೊದಲಾಗಬೇಕು ಎಂಬ ಉದ್ದೇಶ ನಮಗಿರಲಿಲ್ಲ' ಎಂದರು.

ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಮಾತನಾಡಿ, 'ರಾಷ್ಟ್ರೀಯ ಶಿಕ್ಷಣ ನೀತಿ-2020 ದೇಶಕ್ಕೆ ಅಗತ್ಯವಾಗಿದೆ. ರಾಷ್ಟ್ರದ ಮರುನಿರ್ಮಾಣಕ್ಕೆ ಈ ನೀತಿಯನ್ನು ಯಾವ ಭಿನ್ನಮತಕ್ಕೂ ಅವಕಾಶ ನೀಡದೆ ಜಾರಿ ಮಾಡಬೇಕು. ಎನ್ಇಪಿ ಎಂದರೆ ಭಾರತವನ್ನು ಭಾರತದ ಮೂಲಕವೇ ನೋಡಿಕೊಳ್ಳುವುದು ಹಾಗೂ ಭಾರತದ ಮೂಲಕವೇ ಭಾರತವನ್ನು ಮರುರೂಪಿಸುವುದು' ಎಂದು ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್, 'ಹೊಸ ಶಿಕ್ಷಣ ನೀತಿಯ ಬಗ್ಗೆ ಹಲವು ರೀತಿಯ ಗೊಂದಲಗಳಿದ್ದು, ಈ ನೀತಿಯ ಬಗ್ಗೆ ಸದನದಲ್ಲಿ ಚರ್ಚೆ ಆಗಬೇಕು' ಎಂದರು.

ಇದೇ ವೇಳೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ ಹಾಗೂ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಪ್ರೊ.ಎಸ್.ಎಂ. ಶಿವಪ್ರಸಾದ್ ಅವರನ್ನು ಗೌರವಿಸಲಾಯಿತು.

ಶಿಕ್ಷಕರಿಗೆ ಸನ್ಮಾನ: ಬಿಬಿಎಂಪಿಯು ಪುರಭವನದಲ್ಲಿ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಉತ್ತಮ ಶಿಕ್ಷಕರಿಗೆ ಸನ್ಮಾನ ಮಾಡಲಾಯಿತು. ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿಯಲ್ಲಿ ಅಧಿಕ ಅಂಕ ಪಡೆದ 12 ವಿದ್ಯಾರ್ಥಿಗಳಿಗೆ ₹ 25 ಸಾವಿರದಿಂದ ₹ 50 ಸಾವಿರದವರೆಗೆ ನಗದು ಬಹುಮಾನವನ್ನು ವಿತರಿಸಲಾಯಿತು.

ಶಿಕ್ಷಕರಿಗೆ ಸನ್ಮಾನ ಮಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಮಕ್ಕಳು ಬೆಳೆಯ ಬೇಕಾದರೆ ಮಕ್ಕಳ ಮುಂದೆ ಮಾದರಿ ವ್ಯಕ್ತಿಗಳನ್ನು ಸೃಷ್ಟಿಸಬೇಕು. ನಮ್ಮ ದೇಶದಲ್ಲಿ ಗುರು ಪರಂಪರೆಗೆ ವಿಶೇಷವಾದ ಮಹತ್ವವಿದೆ. ಮೊದಲಿನಿಂದಲೂ ಗುರುಪೂರ್ಣಿಮೆಯ ಮೂಲಕ ಗುರುವನ್ನು ಗೌರವಿಸುತ್ತಾ ಬಂದಿದ್ದೇವೆ' ಎಂದರು.

ಕರ್ನಾಟಕದ ಮಾಜಿ ಕುಲಪತಿಗಳ ವೇದಿಕೆಯು ತನ್ನ ಕಚೇರಿಯಲ್ಲಿ ಶಿಕ್ಷಕರ ದಿನವನ್ನು ಆಚರಿಸಿತು. ಶಿಕ್ಷಕರಾದ ಡಾ.ಎಸ್. ಕಾಂತ, ಡಾ.ಎಂ. ಮುನಿಯಮ್ಮ ಮತ್ತು ಡಾ.ಎಸ್. ಬಿಸಲಯ್ಯ ಅವರಿಗೆ 2021ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕೆನರಾ ಬ್ಯಾಂಕ್ ತರಬೇತಿ ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸ್ಥೆಯ ವಿದ್ಯಾರ್ಥಿ ಒಕ್ಕೂಟ 'ಪ್ರಗತಿ' ಹೊರತಂದ 'ಗಾದೆಗಳ ಗುಡಾಣ' ಇ-ಪುಸ್ತಕವನ್ನು ಹಾಸ್ಯ ಲೇಖಕ ಎಂ.ಎಸ್. ನರಸಿಂಹಮೂರ್ತಿ ಲೋಕಾರ್ಪಣೆ ಮಾಡಿದರು.

'ಜೀವನದಲ್ಲಿ ಉತ್ತಮವಾದ ಗುರು ಮತ್ತು ನಿರ್ದಿಷ್ಟವಾದ ಗುರಿಯಿದ್ದರೆ ಮಹತ್ತರ ಸಾಧನೆಯನ್ನು ಮಾಡಬಹುದು. ಜ್ಞಾನ ಸಂಪಾದಿಸಿದರೆ ಏನನ್ನಾದರೂ ಸಾಧಿಸಬಹುದು. ಛಲವಿದ್ದರೆ ಗುರಿ ತಲುಪಲು ಸಾಧ್ಯ' ಎಂದು ಎಂ.ಎಸ್. ನರಸಿಂಹಮೂರ್ತಿ ತಿಳಿಸಿದರು.

ಕನ್ನಡ ಸಂಘರ್ಷ ಸಮಿತಿಯು ಎಚ್.ಆರ್. ಲಕ್ಷ್ಮಮ್ಮ ಮತ್ತು ಎ.ಬಿ. ಮಾರೇಗೌಡ ಸ್ಮರಣಾರ್ಥ ಶಿಕ್ಷಕರ ದಿನಾಚರಣೆ ಆಚರಿಸಿತು. ನಿವೃತ್ತ ಶಿಕ್ಷಕಿ ಗಾಯತ್ರಿ ರಾಮಣ್ಣ ಅವರನ್ನು ಸನ್ಮಾನಿಸಲಾಯಿತು.



ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಿಕ್ಷಕರ ದಿನಾಚರಣೆ ವೇದಿಕೆಯು ಆಡನ್ ಶಾಲೆಯಲ್ಲಿ ಆಚರಿಸಿದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಶಿಕ್ಷಕರಾದ ಕೆ.ಎಂ. ಚನ್ನಪ್ಪ, ಎಸ್.ಎಂ. ಚಂದ್ರಹಾಸ್, ಸಿ.ಎಸ್. ಬನಶಂಕರಯ್ಯ, ಎಸ್.ಯು. ರಾಥೋಡ್ ಹಾಗೂ ಬಿ.ವಿ. ನಾಗರಾಜು ಅವರನ್ನು ಸನ್ಮಾನಿಸಲಾಯಿತು. ಹರಿ ಕುಮಾರ್, ಬಿ.ಎಂ. ಪಟೇಲ್ ಪಾಂಡು, ಗುರುರಾಜ ಕರಜಗಿ ಹಾಗೂ ಯು.ಬಿ. ವೆಂಕಟೇಶ್ ಇದ್ದರು.

'ವಿಪಕ್ಷಗಳಿಗೆ ಸದನದಲ್ಲಿ ಉತ್ತರ'

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ವಿರೋಧ ಪಕ್ಷಗಳು ಗೊಂದಲ ಮೂಡಿಸುತ್ತಿವೆ. ಸದನದಲ್ಲಿ ಕೂಡ ಪ್ರಸ್ತಾಪ ಮಾಡುವುದಾಗಿ ಹೇಳಿವೆ. ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿ, ಗೊಂದಲವನ್ನು ನಿವಾರಿಸಲಾಗುತ್ತದೆ. ವಿರೋಧ ಪಕ್ಷದ ನಾಯಕರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯಲಾಗುತ್ತದೆ. ನೂತನ ನೀತಿಯಲ್ಲಿ ಬಹುಭಾಷೆ ಆಯ್ಕೆಗೆ ಆದ್ಯತೆ ನೀಡಲಾಗಿದೆ. ಅಂತರರಾಷ್ಟ್ರೀಯ ಭಾಷೆಗಳ ಕಲಿಕೆಗೂ ಅವಕಾಶ ದೊರೆಯಲಿದೆ' ಎಂದು ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇಶದಲ್ಲಿ ಹಿಂದಿ ಹೇರಿಕೆ ಮಾಡಿರುವುದು ಕಾಂಗ್ರೆಸ್ ಪಕ್ಷ. ಬಿಜೆಪಿ ಹಿಂದಿ ಹೇರಿಕೆ ಮಾಡಿಲ್ಲ. ನಮ್ಮ ಪಕ್ಷವು ಈ ದೇಶದಲ್ಲಿ ಯಾರು ಬೇಕಾದರೂ ಯಾವುದೇ ಭಾಷೆಯನ್ನು ಕಲಿಯುವ ಸ್ವಾತಂತ್ರ್ಯ ನೀಡಿದೆ' ಎಂದರು.

'ಶಿಕ್ಷಕರು ಅಧ್ಯಯನಶೀಲರಾಗಿರಬೇಕು'

'ಶಾಲೆಗೆ ಬರುವ ಮಕ್ಕಳಿಗೆ ಆತ್ಮೀಯತೆಯಿಂದ ಪಾಠ-ಪ್ರವಚನ ಮಾಡುವ ಶಿಕ್ಷಕರಿಗೆ ಸಮಾಜದಲ್ಲಿ ದೊಡ್ಡ ಗೌರವವಿದೆ. ದೇಶದಲ್ಲಿ ಗುರು-ಶಿಷ್ಯರ ಸಂಬಂಧದ ದೊಡ್ಡ ಪರಂಪರೆಯೇ ಇದೆ. ವಿಶ್ವಾಮಿತ್ರ-ರಾಮ, ಕೃಷ್ಣ-ಅರ್ಜುನರು ಇದಕ್ಕೆ ಉದಾಹರಣೆ. ಗುರು ಎನ್ನಿಸಿಕೊಳ್ಳುವ ಶಿಕ್ಷಕರು ಸದಾ ಅಧ್ಯಯನಶೀಲ ಮತ್ತು ಚಾರಿತ್ರ್ಯ ಉಳ್ಳವರಾಗಿರಬೇಕು' ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ತಿಳಿಸಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಿಕ್ಷಕರ ದಿನಾಚರಣೆ ವೇದಿಕೆಯ ಆಶ್ರಯದಲ್ಲಿ ಹೊಸಕೆರೆಹಳ್ಳಿ ಕ್ರಾಸ್‌ನ ಬಳಿ ಇರುವ ಆಡನ್ ಶಾಲೆಯ ಆವರಣದಲ್ಲಿ ಏರ್ಪಡಿಸಿದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, 'ಜ್ಞಾನದ ಯುಗದಲ್ಲಿ ಯಾವುದೋ ಪುಣ್ಯದ ಮೂಲಕ ಪ್ರಾಪ್ತವಾಗುವ ಯೋಗದಿಂದ ಮನುಷ್ಯನಿಗೆ ಒಳ್ಳೆಯ ಸ್ಥಾನ-ಮಾನಗಳು ಲಭಿಸುತ್ತವೆ. ಅಂಥ ಯೋಗ ಹೊಂದುವ ಯೋಗ್ಯತೆಗಳನ್ನು ಎಲ್ಲರೂ ಬೆಳೆಸಿಕೊಳ್ಳಬೇಕು' ಎಂದರು.



ನಗರದ ಜಯಮಹಲ್ ಪ್ಯಾಲೆಸ್ ಹೋಟೆಲ್ ಆವರಣದಲ್ಲಿ ನಡೆಯುತ್ತಿರುವ 'ದಸ್ತಕರ್ ಬಜಾರ್' ಕರಕುಶಲ ವಸ್ತುಗಳ ಮೇಳದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ಉತ್ಪನ್ನಗಳನ್ನು ನೋಡುತ್ತಿರುವ ಗ್ರಾಹಕರು– ಪ್ರಜಾವಾಣಿ ಚಿತ್ರ

ದೇಶದ ಕಲಾವೈಭವ ಅನಾವರಣ

ಬೆಂಗಳೂರು: ದೇಶದ 29 ರಾಜ್ಯಗಳ ಸಂಸ್ಕೃತಿ-ಕಲೆಯನ್ನು ಬಿಂಬಿಸುವ ಕಲಾಕೃತಿಗಳು, ಕರ್ನಾಟಕದ ಕುಶಲ ಕರ್ಮಿಗಳ ಪ್ರತಿಭೆಗೆ ಕನ್ನಡಿ ಹಿಡಿಯುವ ಉತ್ಪನ್ನಗಳು, ಗ್ರಾಮೀಣ ಉದ್ಯೋಗ ಸೃಷ್ಟಿಯ ಸಾಕಾರ ರೂಪದಂತಿರುವ ಮಳಿಗೆಗಳು.

ನಗರದ ಜಯಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಕರಕುಶಲ ವಸ್ತುಪ್ರದರ್ಶನದಲ್ಲಿ ಕಂಡು ಬಂದ ನೋಟವಿದು.

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು (ವಿಟಿಪಿಸಿ) ದಸ್ತಕರ್ ಸ್ವಯಂಸೇವಾ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿರುವ ಈ ಮೇಳವು ಸೆ.1ರಿಂದ ಆರಂಭವಾಗಿದ್ದು, 7ರವರೆಗೆ ನಡೆಯಲಿದೆ.

ಒಂದೇ ಸೂರಿನಡಿ ದೇಶದ ಎಲ್ಲ ರಾಜ್ಯಗಳ ಕರಕುಶಲ ವಸ್ತುಗಳನ್ನು, ಕಲಾಕೃತಿಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ಸಾರ್ವಜನಿಕರಿಗೆ ಸಿಗುತ್ತಿದೆ. ಆಭರಣಗಳು, ಲೋಹದ ಕಲಾಕೃತಿಗಳು, ಚರ್ಮದ ಉತ್ಪನ್ನಗಳು, ಸೇರಿದಂತೆ ಹಲವು ದೇಸಿ ಉತ್ಪನ್ನಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ.

ಭೌಗೋಳಿಕ ಸನ್ನದು (ಜಿಐ) ಮಾನ್ಯತೆ ಹೊಂದಿರುವ ರಾಜ್ಯದ ಉತ್ಪನ್ನಗಳ ಮಳಿಗೆಗಳೂ ಇಲ್ಲಿವೆ. ಸಂಡೂರಿನ ಬಂಜಾರ ಕಸೂತಿ ಕಲೆಯ ಉತ್ಪನ್ನಗಳು, ಬಿದರಿ ಕಲೆ, ಚನ್ನಪಟ್ಟಣದ ಬೊಂಬೆ ಮತ್ತು ಆಟಿಕೆ, ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳು ಹಾಗೂ ಇನ್ನಿತರ ಉತ್ಪನ್ನಗಳು ಗ್ರಾಹಕರ ಗಮನ ಸೆಳೆಯುತ್ತಿವೆ.

ರಾಜ್ಯಸರ್ಕಾರವು ಕರ್ನಾಟಕದ ಕಲಾವಿದರು, ಕರಕುಶಲ ಕರ್ಮಿಗಳಿಗೆ ಉಚಿತವಾಗಿ ಮಳಿಗೆ ನೀಡಿ ಪ್ರೋತ್ಸಾಹಿಸುತ್ತಿದೆ.

'ಪ್ರತಿಯೊಂದು ರಾಜ್ಯವೂ ತನ್ನದೇ ಆದ ಕಲೆ ಮತ್ತು ಸಂಸ್ಕೃತಿ ಹೊಂದಿರುತ್ತದೆ. ಅದಕ್ಕೆ ತಕ್ಕ ಕಲಾಕೃತಿಗಳು, ಕರಕುಶಲ ಉತ್ಪನ್ನಗಳನ್ನು ತಯಾರಿಸಲಾಗಿರುತ್ತದೆ. 29ಕ್ಕೂ ಹೆಚ್ಚು ರಾಜ್ಯಗಳ ಇಂತಹ ಕಲಾಕೃತಿಗಳು ಒಂದೇ ಕಡೆ ಸಿಗುತ್ತಿರುವುದು ಖುಷಿ' ಎಂದು ಗ್ರಾಹಕಿ ಗೌರಿ ಹೇಳಿದರು.

'ಬೇರೆ ರಾಜ್ಯದ ಮಳಿಗೆಯವರು ವಾರಕ್ಕೆ ₹25 ಸಾವಿರದಿಂದ ₹40 ಸಾವಿರದವರೆಗೆ ಬಾಡಿಗೆ ನೀಡಬೇಕು. ರಾಜ್ಯಸರ್ಕಾರವು ನಮಗೆ ಉಚಿತವಾಗಿ ಮಳಿಗೆ ನೀಡಿದೆ. ಕೋವಿಡ್ ಬಿಕ್ಕಟ್ಟಿನಿಂದ ಎರಡು ವರ್ಷಗಳಲ್ಲಿ ಯಾವುದೇ ಮೇಳ ನಡೆದಿರಲಿಲ್ಲ. ಈಗ ಬೆಂಗಳೂರಿನಲ್ಲಿ ವಸ್ತುಪ್ರದರ್ಶನ ಹಮ್ಮಿಕೊಂಡಿರುವುದು ಅನುಕೂಲವಾಗಿದೆ.' ಎಂದು ಮೈಸೂರಿನ ಕರಕುಶಲಕರ್ಮಿ ಕೆ. ರಾಘವೇಂದ್ರ ಹೇಳಿದರು.

ಬೆಳಿಗ್ಗೆ 11ರಿಂದ ರಾತ್ರಿ 8ರವರೆಗೆ ಮೇಳ ತೆರೆದಿರುತ್ತದೆ. ₹50 ಪ್ರವೇಶ ಶುಲ್ಕವಿದೆ.

ಕೋವಿಡ್: 29 ಲಕ್ಷ ಮಂದಿ ಗುಣಮುಖ


ಬೆಂಗಳೂರು: ರಾಜ್ಯದ ಕೊರೊನಾ ಸೋಂಕಿತರಲ್ಲಿ 1,354 ಮಂದಿ ಭಾನುವಾರ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29 ಲಕ್ಷ ದಾಟಿದೆ.


ಹೊಸದಾಗಿ 1,117 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.55 ಲಕ್ಷಕ್ಕೆ ಏರಿಕೆ ಕಂಡಿದೆ. ಒಂದು ದಿನದಲ್ಲಿ 1.56 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.71ರಷ್ಟು ವರದಿಯಾಗಿದೆ.

11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಹಾವೇರಿ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 183, ಕೊಡಗಿನಲ್ಲಿ 62 ಹಾಗೂ ಮೈಸೂರಿನಲ್ಲಿ 59 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 358 ಹಾಗೂ ಉಡುಪಿಯಲ್ಲಿ 130 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100 ರ ಗಡಿಯೊಳಗೆ ಇವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 17,501ಕ್ಕೆ ಇಳಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 8 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 5 ಮಂದಿ, ಬೆಳಗಾವಿ, ದಕ್ಷಿಣ ಕನ್ನಡ ಹಾಗೂ ಮೈಸೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 0.71 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,409ಕ್ಕೆ ತಲುಪಿದೆ.





ಕೋವಿಡ್: ಶೇ 2ಕ್ಕಿಂತ ಹೆಚ್ಚಿದರೆ ಚಟುವಟಿಕೆ ನಿರ್ಬಂಧ



ಸುಧಾಕರ್

ಚಿಕ್ಕಬಳ್ಳಾಪುರ: ಕೋವಿಡ್ ಸೋಂಕಿನ ಪ್ರಮಾಣ ಶೇ 2ಕ್ಕಿಂತ ಹೆಚ್ಚುವ ಜಿಲ್ಲೆಗಳಲ್ಲಿ ತಕ್ಷಣವೇ ಚಟುವಟಿಕೆಗಳನ್ನು ನಿರ್ಬಂಧಿಸಬೇಕಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರ ನೇತೃತ್ವದಲ್ಲಿ ನಡೆದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿಯೂ ಈ ವಿಚಾರವನ್ನು ತಿಳಿಸಿದ್ದೇನೆ' ಎಂದರು.

ಈಗ ಶಿಕ್ಷಣ, ವ್ಯಾಪಾರ ಸೇರಿ ಎಲ್ಲ ಚಟುವಟಿಕೆಗೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಸೋಂಕು ಹೆಚ್ಚಿದರೆ ಆ ಜಿಲ್ಲೆಗಳಲ್ಲಿ ಚಟುವಟಿಕೆಗಳನ್ನು ನಿರ್ಬಂಧಿಸಬೇಕಾಗುತ್ತದೆ. ಇದರಿಂದ ಸಂಭವನೀಯ ಕೋವಿಡ್ 3ನೇ ಅಲೆ ತಡೆಯಲು ಸಾಧ್ಯ. ಮೂರನೇ ಅಲೆ ತಡೆಗೆ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಶಾಲೆಗಳಲ್ಲಿ 6ರಿಂದ 8ರವರೆಗೆ ತರಗತಿ ಇಂದಿನಿಂದ

ಬೆಂಗಳೂರು: ರಾಜ್ಯದಾದ್ಯಂತ ಶಾಲೆಗಳಲ್ಲಿ 6ರಿಂದ 8ರವರೆಗಿನ ಭೌತಿಕ ತರಗತಿ ಸೋಮವಾರದಿಂದ (ಸೆ. 6) ಆರಂಭಗೊಳ್ಳಲಿದೆ.

ಕೋವಿಡ್ ಮುನ್ನೆಚ್ಚರಿಕೆ ಕ್ರಮ ವಹಿಸಿಕೊಂಡು, ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಪಾಲಿಸಿ ತರಗತಿಗಳನ್ನು ಆರಂಭಿಸುವಂತೆ ಶಾಲೆಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಖಾಸಗಿ ಶಾಲೆಯ ಶಿಕ್ಷಕಿಯೊಬ್ಬರು ಪ್ರತಿಕ್ರಿಯಿಸಿ, 'ಶಾಲೆ ಆರಂಭಿಸುವ ಬಗ್ಗೆ ಪೋಷಕರ ಸಭೆ ನಡೆಸಿದ್ದೇವೆ. ಆದರೆ, ಹೆಚ್ಚಿನ ಪೋಷಕರು ಮಕ್ಕಳಿಗೆ ಆನ್‌ಲೈನ್ ಶಿಕ್ಷಣ ಮುಂದುವರಿಸುವ ಬಗ್ಗೆ ಒಲವು ವ್ಯಕ್ತಪಡಿಸಿದ್ದಾರೆ' ಎಂದರು.

ಶಾಲೆಗಳಲ್ಲಿ ಭೌತಿಕ ತರಗತಿಗಳು ಆರಂಭವಾಗುತ್ತಿರುವ ಕಾರಣ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಬೆಂಗಳೂರಿನ ಜೆ.ಬಿ. ನಗರದಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ (ಕೆಪಿಎಸ್) ಸೋಮವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ.

ಕಾಂಗ್ರೆಸ್‌ಗೆ ಸ್ವದೇಶಿ ಚಿಂತನೆ ಇಲ್ಲ: ಕಟೀಲ್

ಪ್ರಜಾವಾಣಿ ವಾರ್ತೆ



ಮೈಸೂರು: 'ರಾಷ್ಟ್ರೀಯ ಶಿಕ್ಷಣ ನೀತಿ ವಿರೋಧಿಸುತ್ತಿರುವ ಕಾಂಗ್ರೆಸ್‌ಗೆ ಸ್ವದೇಶಿ ಚಿಂತನೆ ಎಂಬುದೇ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭಾನುವಾರ ಇಲ್ಲಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ದೇಶದ ಇತಿಹಾಸವನ್ನು ಕಾಂಗ್ರೆಸ್ ತಿರುಚಿದೆ. ಮೆಕಾಲೆಯ ಶಿಕ್ಷಣ ಪದ್ಧತಿಯನ್ನು ಮುಂದುವರಿಸಿದ ಪರಿಣಾಮ ಸ್ವಾಭಿಮಾನದ ದೇಶ ಕಟ್ಟಲು ಕಾಂಗ್ರೆಸ್‌ಗೆ ಆಗಲಿಲ್ಲ. ವಿದೇಶಿ ಚಿಂತನೆಯಲ್ಲೇ ಬೆಳೆದು ಬಂದ ಆ ಪಕ್ಷಕ್ಕೆ ಮಾನಸಿಕವಾಗಿ ಸ್ವದೇಶಿ ಚಿಂತನೆ ಇಲ್ಲ' ಎಂದರು.

'ದೇಶದ ಒಳಿತಿಗೆ ಪ್ರಧಾನಿ ನರೇಂದ್ರ ಮೋದಿ ತೆಗೆದುಕೊಂಡ ಎಲ್ಲಾ ನೀತಿಗಳನ್ನು ವಿರೋಧಿಸುವುದೇ ಕಾಂಗ್ರೆಸ್‌ನ ಕೆಲಸವಾಗಿದೆ. ಸರ್ಜಿಕಲ್ ಸ್ಟ್ರೈಕ್ ಅನ್ನೇ ಪ್ರಶ್ನಿಸಿದೆ. ಚೀನಾದ ಆಕ್ರಮಣ ಆದಾಗಲೂ ಕೇಂದ್ರ ಸರ್ಕಾರವನ್ನು ಬೆಂಬಲಿಸಲಿಲ್ಲ' ಎಂದು ದೂರಿದರು.

'ಹಿಂದಿನ ಸರ್ಕಾರಗಳು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿವೆ. ಮೋದಿ ಸರ್ಕಾರ ಬೆಲೆ ಏರಿಕೆಯನ್ನು ನಿಯಂತ್ರಿಸುತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮಿನ್ಸ್ಕ್ ಸ್ಕ್ವೇರ್‌ನಲ್ಲಿ ಹೊಂಡ; ವಾಹನ ಸಂಚಾರ ಪ್ರಯಾಸಕರ • ದ್ವಿಚಕ್ರ ವಾಹನ ಸವಾರರ ತಿಣುಕಾಟ

ಸ್ಮಾರ್ಟ್ ಆಗದ ಮಹಾನಗರ ಗರಗಸದಂತಹ ರಸ್ತೆ



ಮಿನ್ಸ್ಕ್ ಸ್ಕ್ವೇರ್‌ನಲ್ಲಿ ರಸ್ತೆ ನಡುವೆ ಬಿದ್ದಿರುವ ಹೊಂಡ –ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಫ್ ಟಿ.

36
ಸ್ಮಾರ್ಟ್ ಸಿಟಿ ಯೋಜನೆಯಡಿ ಟೆಂಡರ್‌ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ರಸ್ತೆಗಳ ಸಂಖ್ಯೆ

29.53 ಕಿ.ಮೀ
ಅಭಿವೃದ್ಧಿಗೊಳ್ಳಲಿರುವ ರಸ್ತೆಗಳ ಒಟ್ಟು ಉದ್ದ

₹481.65 ಕೋಟಿ
ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ



• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಗರದ ಬ್ರ್ಯಾಂಡ್ ಮೌಲ್ಯ ಹೆಚ್ಚಿಸಲು ಅನುಷ್ಠಾನಗೊಳ್ಳುತ್ತಿರುವ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ಕೆಲವೆಡೆ ಪೂರ್ಣಗೊಂಡಿದೆ. ಪಾದಚಾರಿ ಮಾರ್ಗಗಳು ವಿಶಾಲಗೊಂಡಿವೆಯಾದರೂ, ವಾಹನ ಸಂಚಾರಕ್ಕೆ ಇರುವ ರಸ್ತೆಗಳು ಮಾತ್ರ ಗರಗಸದಂತಾಗಿವೆ. ಕಾಮಗಾರಿ ಬಳಿಕವೂ 'ಸ್ಮಾರ್ಟ್' ಆಗದ ರಸ್ತೆಗಳಲ್ಲಿ ವಾಹನ ಸಂಚಾರ ಪ್ರಯಾಸಕರವಾಗಿದೆ.

ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಸದಾ ಗಿಜಿಗುಡುವ 36 ರಸ್ತೆಗಳಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಈಗಾಗಲೇ ಕಾಮಗಾರಿ ಪೂರ್ಣಗೊಂಡಿರುವ ರಸ್ತೆಗಳನ್ನು ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜುಲೈ 23ರಂದು ಪರಿಶೀಲನೆ ನಡೆಸಿದ್ದರು. ಕಾಮಗಾರಿ ನಿರ್ವಹಣೆ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದರು.

ಆದರೆ, ಅದೇ ರಸ್ತೆಗಳಲ್ಲಿ ಮತ್ತೊಮ್ಮೆ ಸಾಗಿದರೆ ಕಾಮಗಾರಿಯ ಅಸಲಿಯತ್ತು ಏನೆಂಬುದು ಮನದಟ್ಟಾಗುತ್ತದೆ. ಉದಾಹರಣೆಗೆ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಕಡೆಯಿಂದ ರಾಜಭವನ ಕಡೆಗಿನ ರಸ್ತೆಯಲ್ಲಿ ಸಾಗಿದರೆ ಗರಗಸದ ಮೇಲೆ ವಾಹನ ಚಾಲನೆ ಮಾಡಿದ ಅನುಭವವಾಗುತ್ತದೆ. ಈವರೆಗೆ ಕಾಮಗಾರಿ ನಡೆಯುತ್ತಿದ್ದರಿಂದ ಆಗುತ್ತಿದ್ದ ತೊಂದರೆಯನ್ನು ವಾಹನ ಸವಾರರು ಸಹಿಸಿಕೊಂಡಿದ್ದರು. ರಾಜಭವನದ ಮುಂದೆ ವಿಶಾಲವಾದ ಪಾದಚಾರಿ ಮಾರ್ಗ ನಿರ್ಮಾಣವಾಗಿದೆ. ಆದರೆ, ರಸ್ತೆ ಮಾತ್ರ ಮೊದಲಿಗಿಂತಲೂ ಹಾಳಾಗಿದೆ. ಮಿನ್ಸ್ಕ್ ಸ್ಕ್ವೇರ್ ಬಳಿಯಂತೂ ದೊಡ್ಡ ಹೊಂಡವೇ ಬಿದ್ದಿದೆ.

ಕಬ್ಬನ್ ರಸ್ತೆ ಮತ್ತು ಕುಂಬ್ಳೆ ವೃತ್ತದ ಕಡೆಯಿಂದ ಬರುವ ಕ್ವೀನ್ಸ್ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳು ಮಿನ್ಸ್ ಸ್ಕ್ವೇರ್ ಬಳಿ ಇರುವ ಹೊಂಡಕ್ಕೆ ಇಳಿದು ಸಾಗುತ್ತಿವೆ. ಹೊಂಡ ಕಣ್ಣೆದುರಿಗೆ ಬಂದ ಕೂಡಲೇ ಧುತ್ತೆಂದು ಬ್ರೇಕ್ ಒತ್ತಿದರೆ ಹಿಂದಿನಿಂದ ವೇಗವಾಗಿ ಬರುವ ವಾಹನಗಳು ಡಿಕ್ಕಿ ಹೊಡೆಯುವ ಭಯ ಚಾಲಕರದು. ಗುಂಡಿಯೊಳಗೆ ಬಿದ್ದು ಎದ್ದು ಮುಂದೆ ಸಾಗಬೇಕಾಗುತ್ತದೆಯೇನೋ ಎಂಬ ಆತಂಕವನ್ನು ದ್ವಿಚಕ್ರ ವಾಹನ ಸವಾರರು ಎದುರಿಸುತ್ತಿದ್ದಾರೆ.

ಜವಾಹರ್‌ಲಾಲ್ ನೆಹರು ತಾರಾಲಯ ರಸ್ತೆಯಲ್ಲೂ ಪಾದಚಾರಿ ಮಾರ್ಗ ವಿಶಾಲವಾಗಿದೆ. ರಸ್ತೆ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿಲ್ಲ. ಇನ್ಫೆಂಟ್ರಿ ರಸ್ತೆಯಲ್ಲೂ ಇದೇ ಸ್ಥಿತಿ ಇದೆ. ಜುಮ್ಮಾ ಮಸೀದಿ ರಸ್ತೆ, ಡಿಕನ್ಸನ್ ರಸ್ತೆಯ ಸ್ಥಿತಿ ಕೂಡ ಇದಕ್ಕೆ ಹೊರತಾಗಿಲ್ಲ. ಒಮ್ಮೆ ಕಾಮಗಾರಿ ಮುಗಿಸಿದ ಬಳಿಕ ಮತ್ತೊಮ್ಮೆ ಅಗೆದು ದುರಸ್ತಿಪಡಿಸುವ ಕೆಲಸ ಅಲ್ಲಲ್ಲಿ ನಡೆಯುತ್ತಿದೆ. ಸ್ಮಾರ್ಟ್ ಸಿಟಿ ಮಾಡಲು ಹೋಗಿ ಸರ್ಕಾರ, ರಸ್ತೆಗಳ ಸ್ಥಿತಿಯನ್ನು ಇನ್ನಷ್ಟು ವಿರೂಪಗೊಳಿಸಿದೆ ಎಂದು ಸ್ಥಳೀಯರು ದೂರುತ್ತಾರೆ.

ಕಾಮಗಾರಿ ಪೂರ್ಣಗೊಳಿಸಲು ಸೆಪ್ಟೆಂಬರ್ ಗಡುವು

ಈ ಯೋಜನೆಯ ಬಹುತೇಕ ಕಾಮಗಾರಿಗಳನ್ನು ಸೆಪ್ಟೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲು ಗುರಿ ನಿಗದಿಪಡಿಸಲಾಗಿದೆ ಎಂದು ಸ್ಮಾರ್ಟ್ ಸಿಟಿ ಯೋಜನೆಯ ಮುಖ್ಯ ಎಂಜಿನಿಯರ್ ವಿನಾಯಕ ಸುಗೂರು ತಿಳಿಸಿದರು.

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಜೋಡಿಸಿರುವ ಇಂಟರ್ ಲಾಕ್‌ಗಳ ಬಣ್ಣ ಮಾಸಿರುವುದರಿಂದ ಅವುಗಳನ್ನು ದುರಸ್ತಿಪಡಿಸಲು ನಿರ್ಧರಿಸಲಾಗಿದೆ. ಮಿನ್ಸ್ಕ್ ಸ್ಕ್ವೇರ್‌ನಲ್ಲಿ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಲಾಗುವುದು. ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ನಿರ್ವಹಣೆಯಾಗುತ್ತಿರುವ ಎಲ್ಲ ರಸ್ತೆಗಳಿಗೂ ಮಳೆಗಾಲ ಮುಗಿದ ಬಳಿಕ ಡಾಂಬರು ಹಾಕಲಾಗುವುದು ಎಂದು ಅವರು ತಿಳಿಸಿದರು.

ಕಮರ್ಷಿಯಲ್ ಸ್ಟ್ರೀಟ್ ಬಣ್ಣ ಬಯಲು!

ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಕೊನೆ ಗಳಿಗೆಯಲ್ಲಿ ತರಾತುರಿಯಲ್ಲಿ ನಗರ ವೀಕ್ಷಣೆ ಕೈಗೊಂಡಿದ್ದರು. ಈ ವೇಳೆ ಕಮರ್ಷಿಯಲ್ ಸ್ಟ್ರೀಟ್‌ಗೂ ಭೇಟಿ ನೀಡಿದ್ದರು. ಬಣ್ಣ ಬಣ್ಣದ ಇಂಟರ್ ಲಾಕ್ ಜೋಡಿಸಿದ್ದ ರಸ್ತೆ ಮತ್ತು ಪಾದಚಾರಿ ಮಾರ್ಗ ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಬಣ್ಣ ಬಣ್ಣದಿಂದ ನಳನಳಿಸುತ್ತಿದ್ದ ಕರ್ಮಷಿಯಲ್ ಸ್ಟ್ರೀಟ್‌ನ ನಿಜ ಬಣ್ಣ ಉದ್ಘಾಟನೆಯಾದ ತಿಂಗಳ ಒಳಗೆ ಬಯಲಾಗಿದೆ.

ಈಗ ಈ ರಸ್ತೆಯಲ್ಲಿ ಬಣ್ಣ ಬಣ್ಣದ ಇಂಟರ್ ಲಾಕ್‌ಗಳನ್ನು ಹುಡುಕಬೇಕಾದ ಸ್ಥಿತಿ ಇದೆ. ಬಣ್ಣವೆಲ್ಲ ಮಾಸಿ ಹೋಗಿದ್ದು, ಸಿಮೆಂಟ್ ಕೂಡ ಎದ್ದು ಬರುವಂತಿದೆ. ಜೋಡಿಸುವ ಕ್ರಮವೂ ಸರಿಯಾಗಿರದ ಕಾರಣ ಅವು ಅಲುಗಾಡುತ್ತಿವೆ. ಪಾದಚಾರಿಗಳು ಬೀಳುತ್ತೇವೆಯೇನೋ ಎಂಬ ಭಯದಲ್ಲೇ ಹೆಜ್ಜೆ ಇಡಬೇಕಾದ ಸ್ಥಿತಿ ಇಲ್ಲಿದೆ. ಇನ್ನು ಪಾದಚಾರಿ ಮಾರ್ಗದ ಕತೆಯೂ ಇದಕ್ಕೆ ಹೊರತಾಗಿಲ್ಲ. ನಡೆದಾಗ ಅಲುಗಾಡುವ ಕಡೆ ಅಲ್ಲಲ್ಲಿ ಇಂಟರ್ ಲಾಕ್‌ಗಳನ್ನು ಕಿತ್ತು ರಾಶಿ ಹಾಕಲಾಗಿದೆ.

ಸ್ಮಾರ್ಟ್‌ಸಿಟಿ ಕಾಮಗಾರಿ ಎಂದರೆ 'ಹಳೇ ಕಲ್ಲು–ಹೊಸ ಬಿಲ್ಲು' ಎಂದು ಕಮರ್ಷಿಯಲ್ ಸ್ಟ್ರೀಟ್ ವ್ಯಾಪಾರಿಗಳು ವ್ಯಂಗ್ಯವಾಡುತ್ತಾರೆ. 'ನಿರ್ಮಾಣವಾದ ಕೆಲವೇ ದಿನಗಳಲ್ಲಿ ಹಾಳಾಗಿರುವ ರಸ್ತೆಯಲು ನಡೆದಾಡಲು ಸಾಧ್ಯವಾಗದ ಸ್ಥಿತಿ ಇರುವುದರಿಂದ ಗ್ರಾಹಕರೇ ಬರುತ್ತಿಲ್ಲ' ಎಂದು ಬಟ್ಟೆ ಅಂಗಡಿ ನಡೆಸುವ ವ್ಯಾಪಾರಿ ಖಲೀಮ್ ಉಲ್ಲಾ ಬೇಸರ ವ್ಯಕ್ತಪಡಿಸಿದರು.

ಚರ್ಚ್ ಸ್ಟ್ರೀಟ್ ಮಾದರಿಯಲ್ಲಿ ರಸ್ತೆ ನಿರ್ಮಿಸಲು ಹೋಗಿ ಕಳಪೆ ಕಾಮಗಾರಿಯಿಂದಾಗಿ ಮೊದಲಿಗಿಂತ ರಸ್ತೆ ಹಾಳಾಗಿದೆ ಎಂದು ದೂರಿದರು.

ರಸ್ತೆಗಿಂತ ಎತ್ತರದಲ್ಲಿವೆ ಮಳೆ ನೀರ ತೊಟ್ಟಿಗಳು

ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿ ನಿರ್ವಹಣೆಯಾಗುತ್ತಿರುವ ಎಲ್ಲ ರಸ್ತೆಗಳಲ್ಲೂ ಅಲ್ಲಲ್ಲಿ ಮಳೆ ನೀರು ನೆಲದಡಿಯಲ್ಲಿರುವ ಚರಂಡಿ ಸೇರಿಕೊಳ್ಳಲು ಸಣ್ಣ ಸಣ್ಣ ಬಾಕ್ಸ್‌ಗಳನ್ನು ನಿರ್ಮಿಸಲಾಗಿದೆ.

ರಸ್ತೆಗಿಂತ ಕೆಳಗೆ ಅಥವಾ ರಸ್ತೆಯ ಮಟ್ಟದಲ್ಲಿದ್ದರೆ ಮಳೆ ನೀರು ಹರಿದು ಹೋಗುತ್ತದೆ. ಆದರೆ, ಇವೆಲ್ಲವೂ ರಸ್ತೆಗಿಂತ ಅರ್ಧ ಅಡಿ ಎತ್ತರದಲ್ಲಿವೆ. ಅವುಗಳಲ್ಲಿ ಮಳೆನೀರು ಇಳಿದು ಹೋಗುವುದಾದರೂ ಹೇಗೆ ಎಂಬುದು ಸ್ಥಳೀಯರ ಪ್ರಶ್ನೆ.

ಇನ್ಫೆಂಟ್ರಿ ರಸ್ತೆಯಲ್ಲಿ ಸಾಗಿ ಮೈನ್ ಗಾರ್ಡ್ ಕ್ರಾಸ್ ರಸ್ತೆಗೆ ಎಡಕ್ಕೆ ತಿರುವು ಪಡೆದುಕೊಳ್ಳುವ ಜಾಗದಲ್ಲಿ ರಸ್ತೆಗಿಂತ ಅರ್ಧ ಅಡಿ ಎತ್ತರದಲ್ಲಿರುವ ಈ ತೊಟ್ಟಿ ನಿರ್ಮಾಣವಾದ ಕೆಲವೇ ದಿನಗಳಲ್ಲಿ ಪುಡಿಪುಡಿಯಾಗಿದೆ. ಕಾಮಗಾರಿ ಎಷ್ಟು ಕಳಪೆಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಬೊಟ್ಟುಮಾಡಿ ತೋರಿಸುತ್ತಾರೆ ಪಾದಚಾರಿಗಳು.



ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಪಾದಚಾರಿ ಮಾರ್ಗದ ದುಸ್ಥಿತಿ



ಮಳೆ ನೀರು ಇಳಿದು ಹೋಗಲು ಮಾಡಿರುವ ಬಾಕ್ಸ್ ರಸ್ತೆ ಮಟ್ಟಕ್ಕಿಂತ ಮೇಲಿರುವುದು



ಹೊಂಡದಲ್ಲಿ ವಾಹನ ಚಾಲನೆ ಮಾಡಲು ಕಷ್ಟ ಪಡುತ್ತಿರುವ ದ್ವಿಚಕ್ರ ವಾಹನ ಸವಾರ

ಪಕ್ಷ ಸಂಘಟನೆ: 'ಕೈ' ನಾಯಕರ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ರಾಜಕೀಯ ವಿದ್ಯಮಾನ, ಪಕ್ಷ ಸಂಘಟನೆ ಬಲ ವರ್ಧನೆ, ಮುಂಬರುವ ಚುನಾವಣೆಗಳ ಸಂಬಂಧ ವಿವಿಧ ಜಿಲ್ಲೆಗಳ ಪಕ್ಷದ ನಾಯಕರ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಭಾನುವಾರ ಸಮಾಲೋಚನೆ ನಡೆಸಿದರು.

ಬೀದರ್, ಕಲಬುರ್ಗಿ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ ನಗರ ಮತ್ತು ಗ್ರಾಮಾಂತರ, ಬೆಳಗಾವಿ ನಗರ, ಗ್ರಾಮಾಂತರ ಮತ್ತು ಚಿಕ್ಕೋಡಿ, ಹುಬ್ಬಳ್ಳಿ-ಧಾರವಾಡ, ಹಾವೇರಿ, ಗದಗ, ವಿಜಯಪುರ, ಬಾಗಲಕೋಟೆ, ಉತ್ತರ ಕನ್ನಡ ಜಿಲ್ಲೆ ಜಿಲ್ಲೆಗಳ ನಾಯಕರ ಜೊತೆ ಚರ್ಚಿಸಿದರು.

ಕಲಬುರ್ಗಿಯಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಸ್ಥಳೀಯ 181 ಕಾರ್ಯಕರ್ತರು ನೀಡಿದ ₹ 10 ಲಕ್ಷ ದೇಣಿಗೆಯ ಚೆಕ್ ಮತ್ತು ಬಳ್ಳಾರಿಯಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಬಳ್ಳಾರಿ ಮಹಾನಗರಪಾಲಿಕೆ ಚುನಾವಣೆಯ ಆಕಾಂಕ್ಷಿಗಳು ನೀಡಿದ ₹ 8.02 ಲಕ್ಷದ ದೇಣಿಗೆಯ ಚೆಕ್‌ನ್ನು ಶಿವಕುಮಾರ್ ಸ್ವೀಕರಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ, ಸಲೀಂ ಅಹಮದ್, ಶಾಸಕರಾದ ಪ್ರಿಯಾಂಕ್ ಖರ್ಗೆ, ಅಜಯ್ ಸಿಂಗ್ ಸೇರಿದಂತೆ ಆಯಾ ಜಿಲ್ಲೆಗಳ ಪ್ರಮುಖರು ಸಭೆಯಲ್ಲಿ ಇದ್ದರು.

ಕಾಂಗ್ರೆಸ್ ಸೇರ್ಪಡೆ: ಉತ್ತರ ಕನ್ನಡ ಜಿಲ್ಲೆಯ ಜೆಡಿಎಸ್ ಹಾಗೂ ಬಿಜೆಪಿಯ ಕೆಲವು ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರು ಭಾನುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಉತ್ತರ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಭೀಮಣ್ಣ ನಾಯ್ಕ್, ಪ್ರಶಾಂತ್ ದೇಶಪಾಂಡೆ ಇದ್ದರು.

ಚಂಡಮಾರುತ: ಕನ್ನಡಿಗ ಎಂಜಿನಿಯರ್ ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಅಮೆರಿಕದ ನ್ಯೂಜೆರ್ಸಿಯಲ್ಲಿ ಬುಧವಾರ ಮತ್ತು ಗುರುವಾರ ಅಪ್ಪಳಿಸಿದ ಇಡಾ ಚಂಡಮಾರುತಕ್ಕೆ ಸಿಲುಕಿ ಚಿಂತಾಮಣಿಯ ಸಾಫ್ಟ್‌ವೇರ್ ಎಂಜಿನಿಯರ್‌ವೊಬ್ಬರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಏನಿಗದಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮೆಪಲ್ಲಿ ಗ್ರಾಮದ ಧನುಷ್ ರೆಡ್ಡಿ (35) ಮೃತಪಟ್ಟವರು. ಅವರು ಗ್ರಾಮದ ವಿಜಯಲಕ್ಷ್ಮೀ ಮತ್ತು ನಾಗರಾಜು ದಂಪತಿಯ ಪುತ್ರ.

ವಿಜಯಲಕ್ಷ್ಮೀ ಅವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಾಂಶುಪಾಲೆಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದಾರೆ. ಸದ್ಯ ಬೆಂಗಳೂರಿನ ಬಾಣಸವಾಡಿಯಲ್ಲಿ ವಾಸವಾಗಿದ್ದಾರೆ.

ಧನುಷ್ ರೆಡ್ಡಿ ಕಳೆದ ಎಂಟು ವರ್ಷಗಳಿಂದ ನ್ಯೂಜೆರ್ಸಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇತ್ತೀಚೆಗೆ ತನ್ನ ತಂಗಿಯನ್ನು ಸಹ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕರೆಸಿಕೊಂಡಿದ್ದರು. ನ್ಯೂಜೆರ್ಸಿ ನಗರದಲ್ಲಿ ಚಂಡಮಾರುತದಿಂದ ಬಿರುಗಾಳಿ ಮತ್ತು ಬಾರಿ ಮಳೆಯಿಂದ ಪ್ರವಾಹ ಉಕ್ಕಿ ಹರಿಯುತ್ತಿದ್ದು, ಹಲವು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅವರಲ್ಲಿ ಚಿಂತಾಮಣಿಯ ಧನುಷ್ ರೆಡ್ಡಿ ಕೂಡ ಒಬ್ಬರಾಗಿದ್ದಾರೆ. ರಸ್ತೆ ಪಕ್ಕದ ಕಾಲುವೆಯಲ್ಲಿ ಹರಿಯುತ್ತಿದ್ದ ನೀರಿನ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದ ಮಹಿಳೆಯು ರಕ್ಷಣೆಗಾಗಿ ಕೂಗಿಕೊಂಡಿದ್ದಾರೆ. ಅವರ ರಕ್ಷಣೆಗೆ ಧಾವಿಸಿದ ಧನುಷ್ ರೆಡ್ಡಿ ಅವರೂ ಕೊಚ್ಚಿಕೊಂಡು ಹೋಗಿದ್ದಾರೆ.

ಕಾಲುವೆಗೆ ಅಡ್ಡಿವಾಗಿರುವ ಪೈಪ್‌ಗೆ ಸಿಲುಕಿಕೊಂಡು ಮಹಿಳೆಯ ಶವ ದೊರೆತರೆ, ಧನುಷ್ ರೆಡ್ಡಿಯ ಶವ ಪೈಪಿನೊಳಕ್ಕೆ ತೂರಿಕೊಂಡು ಹೋಗಿದ್ದು ಗುರುವಾರ ದೊರೆತಿದೆ. ಅವರು ಮೃತಪಟ್ಟಿರುವುದನ್ನು ಕುಟುಂಬದವರೂ ದೃಢಪಡಿಸಿದ್ದಾರೆ. ಶವವನ್ನು ಭಾರತಕ್ಕೆ ತರುವ ಪ್ರಯತ್ನ ನಡೆಯುತ್ತಿದೆ.

ಅಮೆರಿಕ: ಪ್ರವಾಹದಲ್ಲಿ ಇಬ್ಬರು ಭಾರತೀಯರ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ನ್ಯೂಜೆರ್ಸಿಯಲ್ಲಿ ಇಡಾ ಚಂಡಮಾರುತದಿಂದ ಉಂಟಾದ ಭಾರಿ ಪ್ರವಾಹದಲ್ಲಿ ಇಬ್ಬರು ಭಾರತೀಯ ಸಂಜಾತರು ಸಾವಿಗೀಡಾಗಿದ್ದಾರೆ ಎಂದು ಅಲ್ಲಿನ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಮೃತಪಟ್ಟವರನ್ನು ಚಿಂತಾಮಣಿಯ ಸಾಫ್ಟ್‌ವೇರ್ ಎಂಜಿನಿಯರ್ ಧನುಷ್ ರೆಡ್ಡಿ (35) ಹಾಗೂ ಮಾಲತಿ ಕಾಂಚೆ (45) ಎಂದು ಗುರುತಿಸಲಾಗಿದೆ.

ಅಮೆರಿಕದಲ್ಲಿ ಆಗಸ್ಟ್ 29ರಿಂದ ಇಡಾ ಚಂಡಮಾರುತ ಬೀಸುತ್ತಿದ್ದು, ಇದುವರೆಗೆ ಒಟ್ಟು 65 ಮಂದಿ ಸಾವಿಗೀಡಾಗಿದ್ದಾರೆ. ಮೃತರಲ್ಲಿ ಹೆಚ್ಚಿನವರು ನ್ಯೂಜೆರ್ಸಿ, ನ್ಯೂಯಾರ್ಕ್ ಮತ್ತು ಲೂಸಿಯಾನ ನಗರಕ್ಕೆ ಸೇರಿದವರು. 2005ರಲ್ಲಿ ಅಮೆರಿಕದಲ್ಲಿ ಬೀಸಿದ ಕತ್ರೀನಾ ಚಂಡಮಾರುತಕ್ಕಿಂತಲೂ ಇಡಾ ಚಂಡಮಾರುತವು ಭೀಕರವಾಗಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

'ಮೀಸಲಾತಿ ಗೊಂದಲಕ್ಕೆ ಸೌಹಾರ್ದ ತೆರೆ'

ಚಿತ್ರದುರ್ಗ: ಪಂಚಮಸಾಲಿ ಸಮುದಾಯದ ಮೀಸಲಾತಿ ಸೌಲಭ್ಯದ ವಿಚಾರಕ್ಕೆ ಸಂಬಂಧಿಸಿದಂತೆ ಸೃಷ್ಟಿಯಾಗಿರುವ ಗೊಂದಲವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೌಹಾರ್ದಯುತವಾಗಿ ಬಗೆಹರಿಸುವ ವಿಶ್ವಾಸವಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ತಿಳಿಸಿದರು.

ಭಾನುವಾರತಮ್ಮನ್ನುಭೇಟಿಮಾಡಿದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಮೀಸಲಾತಿಗೆ ಸಂಬಂಧಿಸಿದಂತೆ ಹೋರಾಟ ನಡೆಯುತ್ತಿದೆ. ಕೂಡಲಸಂಗಮ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಸ್ವಾಮೀಜಿ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ಮಾತುಕತೆ ನಡೆಸಿದ್ದಾರೆ. ಸಮುದಾಯ ಮತ್ತು ಸರ್ಕಾರ ಎರಡು ಕಣ್ಣುಗಳಿದ್ದಂತೆ. ಯಾವ ಕಣ್ಣು ಬೇಕು ಎಂದು ಕೇಳಿದರೆ ಏನು ಹೇಳಲಿ' ಎಂದು ಪ್ರಶ್ನಿಸಿದರು.

'ಹಲವು ವರ್ಷಗಳಿಂದ ಇರುವ ಸಮುದಾಯದ ಬೇಡಿಕೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಸರಿಯಾದ ದಿಕ್ಕಿನಲ್ಲಿ ಹೆಜ್ಜೆಗಳನ್ನು ಇಡುತ್ತಿದೆ. ಇದು ಒಂದು ದಿನದಲ್ಲಿ ಪರಿಹಾರ ಆಗಲು ಸಾಧ್ಯವಿಲ್ಲ. ಮೀಸಲಾತಿ ಸೌಲಭ್ಯದ ಹೋರಾಟದಲ್ಲಿ ಇನ್ನೊಂದು ಸಮುದಾಯಕ್ಕೂ ಅನ್ಯಾಯ ಆಗಬಾರದು' ಎಂದರು.

ಮುಖ್ಯಮಂತ್ರಿ ಬೊಮ್ಮಾಯಿ ಅವರ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸುವುದಾಗಿ ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಚಿವರು, 'ನಾನು ಪಕ್ಷದ ಶಿಸ್ತಿನ ಸಿಪಾಯಿ. ನನ್ನ ಅಭಿಪ್ರಾಯವನ್ನು ಬಹಿರಂಗವಾಗಿ ಹಂಚಿಕೊಳ್ಳಲು ಇಷ್ಟಪಡುವುದಿಲ್ಲ. ನಾಲ್ಕು ಗೋಡೆಗಳ ನಡುವೆ ವರಿಷ್ಠರಿಗೆ ನೇರವಾಗಿ ತಿಳಿಸುವೆ' ಎಂದಷ್ಟೇ ಹೇಳಿದರು.

ಮತ್ತೆ ಬಾಯ್ದೆರೆದಿವೆ ರಸ್ತೆ ಗುಂಡಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ಮತ್ತೆ ಬಾಯ್ದೆರೆದಿವೆ. ಬಿಸಿ ಡಾಂಬರು ಘಟಕ ಸ್ಥಾಪನೆಯಾದ ಬಳಿಕ ನಗರದಲ್ಲಿ ರಸ್ತೆ ಗುಂಡಿಗಳ ಸಮಸ್ಯೆ ಸಂಪೂರ್ಣ ನೀಗಲಿದೆ ಎಂಬ ಬಿಬಿಎಂಪಿಯ ಭರವಸೆ ಸಂಪೂರ್ಣ ಹುಸಿಯಾಗಿದೆ.

ರಸ್ತೆ ಗುಂಡಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಅವುಗಳನ್ನು ಮುಚ್ಚಲು ಸಾಧ್ಯವಾಗಬೇಕು ಎಂಬ ಕಾರಣಕ್ಕೆ ನಗರದ ಹೊರವಲಯದ ಕಣ್ಣೂರಿನಲ್ಲಿ ಬಿಬಿಎಂಪಿ ಬಿಸಿ ಡಾಂಬರು– ಜಲ್ಲಿ ಮಿಶ್ರಣ ಘಟಕವನ್ನು ಎರಡು ವರ್ಷಗಳ ಹಿಂದೆ ಆರಂಭಿಸಿತ್ತು. ₹ 7.5 ಕೋಟಿ ವೆಚ್ಚದಲ್ಲಿ ಸ್ಥಾಪಿಸಿರುವ ಈ ಘಟಕ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಹಾಗಾಗಿ ನಗರದ ರಸ್ತೆಗಳ ಗುಂಡಿಗಳ ದುಃಸ್ಥಿತಿ ಹಾಗೆಯೇ ಮುಂದುವರಿದಿದೆ.

ಕಣ್ಣೂರಿನ ಘಟಕವು ಗಂಟೆಗೆ 120 ಟನ್‌ನಂತೆ 10 ಗಂಟೆಗಳಲ್ಲಿ 50 ಟ್ರಕ್‌ಗಳಷ್ಟು 160 ಡಿಗ್ರಿ ಉಷ್ಣಾಂಶದ ಹಾಟ್ ಮಿಕ್ಸ್ ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದೆ. ಆದರೂ ಗುತ್ತಿಗೆದಾರರು ಷರತ್ತಿನ ಪ್ರಕಾರ ಬಿಬಿಎಂಪಿಯ ಬೇಡಿಕೆಯಷ್ಟು ಜಲ್ಲಿ– ಡಾಂಬರು ಮಿಶ್ರಣ ಪೂರೈಸುತ್ತಿಲ್ಲ. ಹಾಗಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಈ ಘಟಕ ಆರಂಭವಾದಂದಿನಿಂದಲೇ ಹಳಿ ತಪ್ಪಿದೆ.

ನಗರದ ಶೇಷಾದ್ರಿಪುರ, ಮಲ್ಲೇಶ್ವರ, ಲಗ್ಗೆರೆ, ಜೆ.ಪಿ.ನಗರ, ಬನಶಂಕರಿ, ಹಲಸೂರು ಸೇರಿದಂತೆ ವಿವಿಧ ಕಡೆ ರಸ್ತೆಗಳಲ್ಲಿ ಡಾಂಬರು ಕಿತ್ತು ಹೋಗಿ ಭಾರಿ ಗಾತ್ರದ ಗುಂಡಿಗಳು ಸೃಷ್ಟಿಯಾಗಿವೆ. ಕೋವಿಡ್ ನಿಯಂತ್ರಣಕ್ಕಾಗಿ ಜಾರಿಗೊಳಿಸಿದ ಲಾಕ್‌ಡೌನ್ ತೆರವಿನ ಬಳಿಕ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ. ಹೊಂಡ ಗುಂಡಿಗಳಿಂದ ಕೂಡಿದ ರಸ್ತೆಗಳಲ್ಲಿ ಸಂಚರಿಸುವಾಗ ಪ್ರಯಾಣಿಕರು ಹೈರಾಣಾಗುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರಂತೂ ಕೆಸರುಗಳಿಂದ ತುಂಬಿದ ಗುಂಡಿಗಳ ಮೂಲಕ ಹಾದು ಹೋಗುವಾಗ ಜೀವ ಭಯವನ್ನು ಎದುರಿಸುತ್ತಿದ್ದಾರೆ.

ಕಣ್ಣೂರಿನ ಹಾಟ್ ಮಿಕ್ಸ್ ಘಟಕವನ್ನು ಸಮರ್ಪಕವಾಗಿ ನಡೆಸದ ಕಾರಣ ಎಂ.ಎಸ್.ವೆಂಕಟೇಶ್ ಅವರಿಗೆ ನೀಡಿದ್ದ ಗುತ್ತಿಗೆಯನ್ನು ಬಿಬಿಎಂಪಿ ರದ್ದುಪಡಿಸಿ ಹೊಸತಾಗಿ ಟೆಂಡರ್ ಕರೆದಿತ್ತು.

'ಕಣ್ಣೂರಿನ ಹಾಟ್ ಮಿಕ್ಸ್ ಘಟಕದ ನಿರ್ವಹಣೆಗೆ ಹೊಸತಾಗಿ ಜೆಎಂಸಿ ಕಂಪನಿಗೆ ಟೆಂಡರ್ ನೀಡಲಾಗಿದೆ. ಈ ಸಂಸ್ಥೆಗೆ ಆಗಸ್ಟ್ ತಿಂಗಳ ಅಂತ್ಯದಲ್ಲಿ ಕಾರ್ಯಾದೇಶ ನೀಡಲಾಗಿದೆ. ರಸ್ತೆ ಗುಂಡಿ ಸಮಸ್ಯೆ ಶೀಘ್ರವೇ ಬಗೆಹರಿಯಲಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.




ಚಿಕ್ಕಲಸಂದ್ರದ ರಾಮಾಂಜನೇಯ ನಗರದ ಎಚ್‌ಎಂಎಸ್ ಲೇಔಟ್‌ನ ಎರಡನೇ ಮುಖ್ಯ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಶಿಕ್ಷಣ ನೀತಿ: ಏಕಪಕ್ಷೀಯ ತೀರ್ಮಾನ ವಿಶ್ವನಾಥ್ ವಿರೋಧ

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರಾಥಮಿಕ ಮತ್ತು ಪ್ರೌಢ-ಶಿಕ್ಷಣವನ್ನು ಒಳಗೊಳ್ಳದೆ ಏಕಪಕ್ಷೀಯವಾಗಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.



ಎಚ್.ವಿಶ್ವನಾಥ್

ಭಾನುವಾರ ಇಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಬೇರುಗಳನ್ನೇ ಕಡೆಗಣಿಸಿ ಕೊಂಬೆಗಳನ್ನು ಸುಧಾರಿಸಲು ಹೊರಟರೆ ಪ್ರಯೋಜನ ಇಲ್ಲ. ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಶಿಕ್ಷಣ ನೀತಿ ಬಗ್ಗೆ ವಿಸ್ತೃತ ಚರ್ಚೆ ರಾಜ್ಯದೆಲ್ಲೆಡೆ ನಡೆಯಬೇಕಿತ್ತು' ಎಂದರು.

ಶಾಸಕ ತನ್ವೀರ್ ಸೇಠ್, 'ಉನ್ನತ ಶಿಕ್ಷಣ ಸಚಿವರು ತರಾತುರಿಯಲ್ಲಿ ಶಿಕ್ಷಣ ನೀತಿ ಜಾರಿ ಮಾಡಲು ಹೊರಟಿರುವುದು ಸರಿಯಲ್ಲ. ಅವಸರವೇ ಅಪಘಾತಕ್ಕೆ ಕಾರಣ ಎಂಬ ಮಾತನ್ನು ಮರೆಯಬಾರದು' ಎಂದು ಹೇಳಿದರು.

ಸ್ಥಳೀಯ ನಿವಾಸಿಗಳಿಗೆ ಕಿರಿಕಿರಿ

ರಸ್ತೆ ಮೇಲೆ ಹರಿಯುತ್ತಿರುವ ಚರಂಡಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರಿನ ಭೈರವೇಶ್ವರ ಬಡಾವಣೆಯ ಎರಡನೇ ಮುಖ್ಯರಸ್ತೆಯ ಮೇಲೆ ನಾಲ್ಕು ದಿನಗಳಿಂದ ಒಳಚರಂಡಿ ನೀರು ಹರಿಯುತ್ತಿದ್ದು ಇದರಿಂದ ಸ್ಥಳೀಯರು ಕಿರಿಕಿರಿ ಅನುಭವಿಸುವಂತಾಗಿದೆ.

'ಪ್ರತಿ ಬಾರಿ ಮಳೆಗಾಲ ಶುರುವಾದಾಗಲೂ ಸಮಸ್ಯೆ ಸೃಷ್ಟಿಯಾಗುತ್ತದೆ. ಕೆಲ ವರ್ಷಗಳ ಹಿಂದೆ ದೇವಸ್ಥಾನಕ್ಕೆ ಚರಂಡಿ ನೀರು ನುಗ್ಗಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರೇ ಸ್ಥಳಕ್ಕೆ ಬಂದು ಪರಿಶೀಲಿಸಿದ್ದರು. ಸಮಸ್ಯೆಗೆ ಶಾಶ್ವತ ಪರಿಹಾರ ಸೂಚಿಸುವ ಭರವಸೆ ನೀಡಿದ್ದರು. ಹೀಗಿದ್ದರೂ ಯಾವ ಸುಧಾರಣೆಯೂ ಆಗಿಲ್ಲ' ಎಂದು ಸ್ಥಳೀಯ ನಿವಾಸಿ ಚಂದ್ರಶೇಖರಯ್ಯ ದೂರಿದರು.

'ಅಧಿಕಾರಿಗಳಾದ ಚನ್ನಬಸಪ್ಪ ಹಾಗೂ ಛಲಪತಿ ಅವರಿಗೆ ನಿತ್ಯವೂ ಕರೆ ಮಾಡಿ ಸಮಸ್ಯೆ ಹೇಳಿಕೊಳ್ಳುತ್ತಿದ್ದೇವೆ. ಹೀಗಿದ್ದರೂ ಅವರು ಸ್ಥಳಕ್ಕೆ ಭೇಟಿ ನೀಡಿಲ್ಲ. ಸ್ಥಳೀಯ ಶಾಸಕ ಕೆ.ಜೆ. ಜಾರ್ಜ್ ಅವರೂ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡಿಲ್ಲ. ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನೂ ಅಗೆಯಲಾಗಿದ್ದು, ಇದರಿಂದಾಗಿ ಮನೆಗಳ ಆವರಣಕ್ಕೆ ಚರಂಡಿ ನೀರು ನುಗ್ಗುತ್ತಿದೆ. ದುರ್ವಾಸನೆಯಿಂದಾಗಿ ಮನೆಯಲ್ಲಿ ಇರಲೂ ಆಗುತ್ತಿಲ್ಲ' ಎಂದೂ ಅಳಲು ತೋಡಿಕೊಂಡರು.

'15 ವರ್ಷಗಳ ಹಿಂದೆ ಬಡಾವಣೆ ನಿರ್ಮಾಣವಾದಾಗ ಕೆಲವೇ ಕೆಲವು ಮನೆಗಳು ಇಲ್ಲಿದ್ದವು. ಆಗ ಅಂತಹ ಸಮಸ್ಯೆ ಇರಲಿಲ್ಲ. 4 ರಿಂದ 8ನೇ ಮುಖ್ಯರಸ್ತೆವರೆಗಿನ ನಿವಾಸಿಗಳು ತಗ್ಗುಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಮಳೆಗಾಲ ಬಂದಾಗ ರಾಜಕಾಲುವೆ ತುಂಬಿ ಹರಿಯಲಿದ್ದು, ಆ ನೀರು ಚರಂಡಿಗೂ ನುಗ್ಗುತ್ತದೆ. ಇದರಿಂದ ಸಮಸ್ಯೆ ಸೃಷ್ಟಿಯಾಗಿದೆ. ಚರಂಡಿ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಿಕೊಟ್ಟರೆ ನಮ್ಮ ಈ ಗೋಳು ತಪ್ಪುತ್ತದೆ' ಎಂದು ಮನವಿ ಮಾಡಿದರು.

'ನಾಗರಿಕರಿಗೆ ಸಮಸ್ಯೆಯಾಗಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಇದನ್ನು ಶೀಘ್ರವೇ ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತೇನೆ' ಎಂದು ಜಲಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕೆ.ಎನ್.ರಾಜೀವ್ ತಿಳಿಸಿದರು.



ರಸ್ತೆಯ ಮೇಲೆ ಒಳಚರಂಡಿ ನೀರು ಹರಿಯುತ್ತಿರುವುದು



ಮಣ್ಣಿನ ಗಣೇಶ

ಬೆಂಗಳೂರಿನ ಪ್ರಯೋಗ ಮಂಟಪ ಹಾಗೂ ರಂಗಚಂದಿರ ಸಂಸ್ಥೆಯು ಹನುಮಂತನಗರದ ರಾಮಾಂಜನೇಯ ಗುಡ್ಡದಲ್ಲಿ ಮಕ್ಕಳಿಗಾಗಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳು ಮಣ್ಣಿನ ಗಣೇಶ ಮೂರ್ತಿಗಳನ್ನು ತಯಾರಿಸಿದರು – ಪ್ರಜಾವಾಣಿ ಚಿತ್ರ

ರೀತಿ– ರಿವಾಜು ಚರ್ಚಿಸಲು ಇಂದು ಸಭೆ • ಶೀಘ್ರವೇ ವಿಸ್ತೃತ ಮಾರ್ಗಸೂಚಿ ಹೊರಡಿಸಲಿದೆ ಬಿಬಿಎಂಪಿ

ಗಣೇಶೋತ್ಸವ: ಅನುಮತಿಗೆ ಏಕಗವಾಕ್ಷಿ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣ ಕ್ರಮಗಳನ್ನು ಈ ಬಾರಿಯೂ ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸಾರ್ವಜನಿಕ ಗಣೇಶೋತ್ಸವ ಆಚರಣೆ ಮಾಡುವುದಕ್ಕೆ ಸರ್ಕಾರ ಅನುವು ಮಾಡಿಕೊಟ್ಟಿದೆ. ಗಣೇಶೋತ್ಸವ ಸಮಾರಂಭಗಳಲ್ಲಿ ಕೋವಿಡ್ ಹರಡದಂತೆ ನಿಗಾ ವಹಿಸಲು ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೋಮವಾರ ಅಧಿಕಾರಿಗಳ ವಿಶೇಷ ಸಭೆ ಕರೆದಿದ್ದಾರೆ.

ಈ ಸಲವೂ ಸಾರ್ವಜನಿಕ ಗಣೇಶೋತ್ಸವಗಳಿಗೆ ಬಿಬಿಎಂಪಿ, ಪೊಲೀಸ್ ಇಲಾಖೆ, ಅಗ್ನಿಶಾಮಕ ಇಲಾಖೆಗಳಿಂದ ಪರವಾನಗಿ ನೀಡುವುದಕ್ಕೆ ಏಕಗವಾಕ್ಷಿ ವ್ಯವಸ್ಥೆ ರೂಪಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

‘ಪೊಲೀಸರು ಹಾಗೂ ನಮ್ಮ ಅಧಿಕಾರಿಗಳು ಸ್ಥಳೀಯವಾಗಿ ಏನೇನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸಬೇಕಿದೆ. ಕೋವಿಡ್ ನಿಯಂತ್ರಣ ಕ್ರಮಗಳ ಪಾಲನೆ ಬಗ್ಗೆ ನಿಗಾ ಇಡುವಲ್ಲಿ ಪೊಲೀಸ್ ಇಲಾಖೆಯ ಹೊಣೆ ಜಾಸ್ತಿ ಇದೆ. ಗಣೇಶೋತ್ಸವದ ಸಾರ್ವಜನಿಕ ಆಚರಣೆಗೆ ಅನುಮತಿ ನೀಡುವ ಕುರಿತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ಏಕಗವಾಕ್ಷಿ ವ್ಯವಸ್ಥೆ ರೂಪಿಸಲಿದ್ದೇವೆ’ ಎಂದು ಗೌರವ್ ಗುಪ್ತ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಧರ್ಮದ ಆಚರಣೆ ನಮ್ಮ ಸಂಸ್ಕೃತಿ. ಅದನ್ನು ಮುಂದುವರಿಸಬೇಕು. ಜೊತೆಗೆ, ಕೋವಿಡ್ ನಿಯಂತ್ರಣವೂ ಅಷ್ಟೇ ಮುಖ್ಯ. ಯಾವುದೇ ಧರ್ಮದ ಅನುಯಾಯಿಗಳಿರಲಿ, ಧಾರ್ಮಿಕ ಕಾರ್ಯಕ್ರಮಗಳನ್ನು ಸರಳವಾಗಿ ಆಚರಿಸುವ ಮೂಲಕ ಆಡಳಿತ ಯಂತ್ರದ ಜೊತೆ ಸಹಕರಿಸಬೇಕು’ ಎಂದು ಅವರು ಕೋರಿದರು.

‘ಸಾರ್ವಜನಿಕ ಸ್ಥಳಗಳಲ್ಲಿ ಗಣೇಶೋತ್ಸವಗಳನ್ನು ಶಿಸ್ತುಬದ್ಧವಾಗಿ ಆಚರಿಸಬೇಕು. ನಮ್ಮನ್ನು ನಾವು ನಿಯಂತ್ರಣದಲ್ಲಿ ಇಡದೇ ಕೊರೊನಾ ಸೋಂಕು ಮತ್ತೆ ಹರಡಲು ಅವಕಾಶ ಕಲ್ಪಿಸಬಾರದು. ಮಾರ್ಷಲ್‌ಗಳು ಹಾಗೂ ಪೊಲೀಸರು ಕೋವಿಡ್ ನಿಯಂತ್ರಣ ಕ್ರಮಗಳ ಪಾಲನೆ ಸಮರ್ಪಕವಾಗಿ ಆಗುವಂತೆ ನೋಡಿಕೊಳ್ಳಲು ಶ್ರಮಿಸುತ್ತಿದ್ದಾರೆ. ಮಹಾನಗರದ ಜನತೆಯೂ ಈ ವಿಚಾರದಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕು. ಜನರೂ ಸ್ವಯಂಪ್ರೇರಿತವಾಗಿ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಲಸಿಕೆ ಹಾಕಿಸಿಕೊಳ್ಳುವುದು, ಜನಜಂಗುಳಿ ಇರುವಲ್ಲಿಗೆ ಹೋಗದಿರುವುದು, ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಮುಂತಾದ ಪರಿಪಾಠಗಳನ್ನು ಮುಂದುವರಿಸಬೇಕು’ ಎಂದು ಕಿವಿಮಾತು ಹೇಳಿದರು.

‘ಸದ್ಯಕ್ಕೆ ನಗರದಲ್ಲಿ ಕೋವಿಡ್ ಹತೋಟಿಯಲ್ಲಿದೆ. ಆದರೂ, ಇದು ಯಾವಾಗ ಬೇಕಿದ್ದರೂ ಉಲ್ಬಣ ಆಗಬಹುದು. ನಗರದಲ್ಲಿ ಈಗಾಗಲೇ ಕೆಲ ನರ್ಸಿಂಗ್ ಕಾಲೇಜುಗಳಲ್ಲಿ ಕೋವಿಡ್ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿದೆ. ಇದರ ನಿಯಂತ್ರಣಕ್ಕೆ ಕ್ಲಸ್ಟರ್‌ಗಳನ್ನು ಗುರುತಿಸಲಾಗಿದೆ. ಕ್ರಿಶ್ಚಿಯನ್ ಕಾಲೇಜ್ ಆಫ್ ನರ್ಸಿಂಗ್ ಹಾಗೂ ದಾಸರಹಳ್ಳಿಯ ನರ್ಸಿಂಗ್ ಕಾಲೇಜಿನಲ್ಲಿ ಕಂಟೈನ್‌ಮೆಂಟ್ ವಲಯಗಳನ್ನೂ ಗುರುತಿಸಲಾಗಿದೆ. ಸೋಂಕು ಮತ್ತೆ ವ್ಯಾಪಿಸದಂತೆ ತಡೆಯಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಮಾಹಿತಿ ನೀಡಿದರು.

‘ಗಣೇಶ ವಿಸರ್ಜನೆಗೆ ತೊಟ್ಟಿ ವ್ಯವಸ್ಥೆ’

‘ಮನೆಗಳಲ್ಲಿ ಪೂಜಿಸುವ ಗಣೇಶ ವಿಗ್ರಹಗಳ ವಿಸರ್ಜನೆಗೆ ಬಿಬಿಎಂಪಿ ವತಿಯಿಂದ ಸಂಚಾರ ತೊಟ್ಟಿಗಳ ವ್ಯವಸ್ಥೆಯನ್ನು ಕಳೆದ ವರ್ಷ ಒದಗಿಸಲಾಗಿತ್ತು. ಈ ಸಲವೂ ಮನೆಗಳಲ್ಲಿ ಪ್ರತಿಷ್ಠಾಪಿಸುವ ಗಣೇಶ ವಿಗ್ರಹಗಳ ವಿಸರ್ಜನೆಗೆ ಸಂಚಾರ ತೊಟ್ಟಿಗಳ ವ್ಯವಸ್ಥೆ ಕಲ್ಪಿಸಲಾಗುತ್ತದೆ’ ಎಂದು ಗೌರವ್ ಗುಪ್ತ ತಿಳಿಸಿದರು.

ವಿದೇಶಿ ಪಾಲುದಾರಿಕೆಯಲ್ಲಿ ‘ಕಾವೇರಿ’ ಎಂಜಿನ್ ಇನ್ನಷ್ಟು ಸುಧಾರಣೆಗೆ ಡಿಆರ್‌ಡಿಒ ಚಿಂತನೆ

ತೇಜಸ್‌ಗೆ ‘ತೇಜೋ ಬಲ’ ತುಂಬಲು ಯತ್ನ

• ಎಸ್.ರವಿಪ್ರಕಾಶ್



ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವದೇಶಿ ಹಗುರ ಯುದ್ಧ ವಿಮಾನ ‘ತೇಜಸ್’ ಇನ್ನೂ 99 ಎಂಜಿನ್‌ಗಳ ಖರೀದಿಗೆ ಜನರಲ್ ಎಲೆಕ್ಟ್ರಿಕ್ (ಜಿಇ) ಜತೆಗೆ ಎಚ್‌ಎಎಲ್ ಒಪ್ಪಂದ ಮಾಡಿಕೊಂಡಿದೆ. ಆದರೆ, ಈ ಯುದ್ಧ ವಿಮಾನಕ್ಕೆ ಅಪ್ಪಟ ಸ್ವದೇಶಿ ನಿರ್ಮಿತ ಎಂಜಿನ್ (ಕಾವೇರಿ) ಅಳವಡಿಸಬೇಕು ಎಂಬ ಬಹುಕಾಲದ ಕನಸು ನನಸಾಗುವ ಸಾಧ್ಯತೆ ಸದ್ಯಕ್ಕೆ ಇಲ್ಲ.

ಆದರೆ, ವಿದೇಶಿ ಪಾಲುದಾರಿಕೆ ಮೂಲಕ ‘ಕಾವೇರಿ’ ಎಂಜಿನ್ ಅಭಿವೃದ್ಧಿ ಯೋಜನೆಯನ್ನು ಮುನ್ನಡೆಸಲು ಡಿಆರ್‌ಡಿಒ ಮನಸ್ಸು ಮಾಡಿದ್ದು, ಇದರಿಂದ ‘ತೇಜಸ್’ಗೆ ಅಗತ್ಯ ‘ತೇಜೋ’ ಬಲ ಸಿಗುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.


2001 ರಿಂದಲೂ ‘ತೇಜಸ್’ಗೆ ಅಮೆರಿಕದ ಜಿಇ ನಿರ್ಮಿತ ಎಫ್ 404–ಐಎನ್ 20 ಎಂಜಿನ್ ಅನ್ನೇ ಬಳಸಲಾಗುತ್ತಿದೆ. ಇದೀಗ ಎಚ್‌ಎಎಲ್ ದೊಡ್ಡ ಪ್ರಮಾಣದಲ್ಲಿ ಅಂದರೆ 99 ಎಂಜಿನ್‌ಗಳನ್ನು ಖರೀದಿಸುತ್ತಿದ್ದು, ಇದರ ಮೊತ್ತ ₹5,375 ಕೋಟಿ. ರಕ್ಷಣಾ ಇಲಾಖೆ 83 ತೇಜಸ್ ಮಾರ್ಕ್ 1 ಎ ಖರೀದಿಗೆ ಆದೇಶ ನೀಡಿದ್ದು, ಇದರ ಮೊತ್ತ ₹45,696 ಕೋಟಿ.

ಮೋದಿ ಸರ್ಕಾರ ‘ಆತ್ಮನಿರ್ಭರ್’ ಮಂತ್ರ ಜಪಿಸುತ್ತಿರುವಾಗಲೇ ‘ಕಾವೇರಿ’ ಎಂಜಿನ್‌ನ ಅಭಿವೃದ್ಧಿಯ ಬಗ್ಗೆ ಪ್ರಶ್ನೆಗಳು ಏಳಲಾರಂಭಿಸಿವೆ. ವಿಮಾನಗಳಿಗೆ ಜೆಟ್ ಎಂಜಿನ್ ಅಭಿವೃದ್ಧಿಪಡಿಸುವುದು ವಾಯುಯಾನ ಕ್ಷೇತ್ರದಲ್ಲಿ ಬಹುದೊಡ್ಡ ಸಾಧನೆ. ದೇಶಿ ನಿರ್ಮಿತ ಯುದ್ಧ ವಿಮಾನಕ್ಕೆ ಸ್ವದೇಶಿ ಎಂಜಿನ್ ಇರಬೇಕು ಎಂಬ ಆಶಯದೊಂದಿಗೆ, 80 ರ ದಶಕದಷ್ಟು ಹಳೆಯ ಕಾವೇರಿ ಎಂಜಿನ್ ಯೋಜನೆಗೆ ಇನ್ನಷ್ಟು ವೇಗ ನೀಡಲಾಗಿತ್ತು. ಆದರೆ, ನಿರೀಕ್ಷೆ ಹುಸಿಯಾಗಿದ್ದರಿಂದ ಜಿ.ಇ ಎಂಜಿನ್‌ಗಳನ್ನೇ ನೆಚ್ಚಿಕೊಳ್ಳಬೇಕಾಯಿತು ಎನ್ನುತ್ತಾರೆ ತಜ್ಞರು.

ಡಿಆರ್‌ಡಿಒ ಎಂಜಿನ್ ಉತ್ಪಾದನೆಯ ಕಾರ್ಯವನ್ನು ಗ್ಯಾಸ್ ಟರ್ಬೈನ್ ರೀಸರ್ಚ್ ಎಸ್ಟಾಬ್ಲಿಷ್‌ಮೆಂಟ್‌ಗೆ ವಹಿಸಿತ್ತು. ಈ ಸಂಸ್ಥೆ ಮೂರು ದಶಕಗಳ ಸುದೀರ್ಘ ಅವಧಿಯಲ್ಲಿ ಎಂಜಿನ್ ಅಭಿವೃದ್ಧಿಪಡಿಸಿದರೂ ವಿಶ್ವದ ಅತ್ಯಂತ ಹಗುರ ಯುದ್ಧ ವಿಮಾನ ಎನಿಸಿರುವ ‘ತೇಜಸ್’ನ ಅಗತ್ಯಕ್ಕೆ ಅನುಗುಣವಾಗಿ ಇರಲಿಲ್ಲ. ಹೀಗಾಗಿ ವಿದೇಶಿ ಎಂಜಿನ್ ಅನ್ನೇ ಬಳಸಿ ಹಾರಾಟ ನಡೆಸಬೇಕಾಯಿತು.

ಎಂಜಿನ್‌ನ ಅಭಿವೃದ್ಧಿಯ ಕೆಲವು ನಿರ್ದಿಷ್ಟ ಹಂತಗಳಲ್ಲಿ ವಿದೇಶಿ ಪಾಲುದಾರಿಕೆ ಅಗತ್ಯವಿದೆ. ಆರಂಭದಿಂದಲೂ ಡಿಆರ್‌ಡಿಒ ಇಂತಹ ಪಾಲುದಾರಿಕೆಗೆ ಸಮ್ಮತಿ ಸೂಚಿಸಿರಲಿಲ್ಲ. ಇದೀಗ ತನ್ನ ಪಟ್ಟನ್ನು ಸಡಿಲಿಸಿದ್ದು, ವಿದೇಶಿ ಪಾಲುದಾರಿಕೆಗೆ ಆಸಕ್ತಿ ತೋರಿದೆ. ರಷ್ಯಾ ಅಲ್ಲದೆ, ರೋಲ್ಸ್ ರಾಯ್ಸ್ ಕೂಡ ಭಾರತದ ಜತೆ ಸಹಭಾಗಿತ್ವಕ್ಕೆ ಸಿದ್ಧವಾಗಿವೆ. ಎಲ್‌ಸಿಎಗೆ 90 ಕೆ ಮತ್ತು ಎಎಂಸಿಎಗೆ 110 ಕೆ ಥ್ರಸ್ಟ್‌ನ ಅಗತ್ಯವಿದೆ. ರೋಲ್ಸ್ ರಾಯ್ಸ್ ಜೊತೆಗಿನ ಸಹಭಾಗಿತ್ವ ಈ ಕೊರತೆಯನ್ನು ನೀಗಬಲ್ಲದು ಎಂದು ಮೂಲಗಳು ತಿಳಿಸಿವೆ.

‘ಎಂಜಿನ್ ನಿರ್ಮಾಣ ಅತಿ ಸಂಕೀರ್ಣ’



’ಜೆಟ್ ಎಂಜಿನ್ ಒಂದು ಕಾಂಪ್ಯಾಕ್ಟ್ ಗ್ಯಾಸ್ ಟರ್ಬೈನ್ ಆಗಿದ್ದು, ಇದು ವಿಮಾನ ಮೇಲಕ್ಕೆ ಹಾರಲು ಬೇಕಾದ ಶಕ್ತಿಯನ್ನು ಉತ್ಪಾದಿಸುತ್ತದೆ. ಎಂಜಿನ್ ಅನ್ನು ಐದು ಪ್ರಮುಖ ಭಾಗಗಳಿಂದ ತಯಾರಿಸಲಾಗುತ್ತದೆ. ಫ್ಯಾನ್, ಕಂಪ್ರೆಷನರ್, ಕಂಬಶನ್, ಟರ್ಬೈನ್, ಮಿಕ್ಸರ್ ಮತ್ತು ನಾಝುಲ್. ಇಲ್ಲಿ ಉತ್ಪತ್ತಿ ಆಗುವ ಒತ್ತಡವು ಶಕ್ತಿಯುತವಾಗಿದ್ದು, ಸುಮಾರು 6 ಸಾವಿರ ಗಂಟೆಯವರೆಗೆ ಶಾಖ ತಡೆದುಕೊಳ್ಳುವ ವಿಶೇಷ ಲೋಹದ ಅಗತ್ಯವಿರುತ್ತದೆ’ ಎನ್ನುತ್ತಾರೆ ಎಡಿಡಿ ಎಂಜಿನಿಯರಿಂಗ್ ಇಂಡಿಯಾ ಲಿಮಿಟೆಡ್ ನಿರ್ದೇಶಕ ಗಿರೀಶ್ ಲಿಂಗಣ್ಣ.

ರಷ್ಯಾದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಮೋಟರ್ಸ್‌(ಸಿಐಎಎಂ) ನೆರವಿನಿಂದ 2010 ರಲ್ಲಿ ನಡೆಸಿದ ಎತ್ತರದ (ಅಲ್ಟಿಟ್ಯೂಡ್) ಹಾರಾಟ ಪರೀಕ್ಷೆಯಲ್ಲಿ ಕಾವೇರಿ ತೇರ್ಗಡೆ ಹೊಂದಿದೆ. ರಷ್ಯಾದ ಗ್ರೊಮೊವ್‌ನಲ್ಲಿ ಈ ಎಂಜಿನ್‌ನೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ 20 ಸಾವಿರ ಅಡಿಗಳಷ್ಟು ಎತ್ತರದಲ್ಲಿ ಹಾರಾಟ ನಡೆಸಿತು. 2021 ರಲ್ಲಿ ಡಿಆರ್‌ಡಿಒ ಸಿಂಗಲ್ ಕ್ರಿಸ್ಟಲ್ ಬ್ಲೇಡ್‌ಗಳು ಮತ್ತು ಅಗತ್ಯ ಘಟಕಗಳನ್ನು ಅಭಿವೃದ್ಧಿಪಡಿಸಿತು. ಇದನ್ನು ಸಾಧಿಸಿದ ಕೆಲವೇ ರಾಷ್ಟ್ರಗಳ ಪಟ್ಟಿಗೆ ಭಾರತ ಸೇರಿದೆ ಎಂದು ಹೇಳಿದ್ದಾರೆ.

‘ವರಮಾನ ಹೆಚ್ಚಿಸಲು ಸರಕು ಸಾಗಣೆಗೆ ಆದ್ಯತೆ ನೀಡಿ’

ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ವೀಕ್ಷಿಸಿದ ಕೇಂದ್ರ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣದ ಮಾದರಿಯ ಮೂಲಸೌಕರ್ಯದೊಂದಿಗೆ ಬೈಯಪ್ಪನಹಳ್ಳಿ ಬಳಿ ನಿರ್ಮಾಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಭೇಟಿ ನೀಡಿ ಕಾಮಗಾರಿ ಪ್ರಗತಿ ಪರಿಶೀಲಿಸಿದರು.

‘ಸರ್ ಎಂ.ವಿ. ಟರ್ಮಿನಲ್‌ನಲ್ಲಿ ಎಲ್ಲ ಆಧುನಿಕ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ನೈರುತ್ಯ ರೈಲ್ವೆ ಇತಿಹಾಸದಲ್ಲಿ ಹಲವು ಪ್ರಥಮಗಳನ್ನು ದಾಖಲಿಸುತ್ತಿರುವ ಈ ಟರ್ಮಿನಲ್, ವಿಮಾನ ನಿಲ್ದಾಣವನ್ನು ಹೋಲುವಂತೆ ವಿನ್ಯಾಸಗೊಳಿಸಿದ ಮೊದಲ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇದು ದೇಶದಲ್ಲಿಯೇ ಮಾದರಿ ನಿಲ್ದಾಣವಾಗಲಿದೆ. ಈ ಯೋಜನೆಯ ಯಶಸ್ಸಿನಲ್ಲಿ ಎಂಜಿನಿಯರ್‌ಗಳ ಪಾತ್ರ ಮಹತ್ವದ್ದು’ ಎಂದು ಅಶ್ವಿನಿ ವೈಷ್ಣವ್ ಶ್ಲಾಘಿಸಿದರು.

‘ಸರಕು ಸಾಗಣೆಯ ಕೇಂದ್ರವಾಗಿ ಬೆಳೆಯುವ ಎಲ್ಲ ಅವಕಾಶಗಳು ಈ ಟರ್ಮಿನಲ್‌ಗೆ ಇವೆ. ವಿಶೇಷ ರೈಲುಗಳ ಮೂಲಕ ಎಲೆಕ್ಟ್ರಾನಿಕ್ ವಸ್ತುಗಳು, ಕೈಗಾರಿಕಾ ಸಲಕರಣೆಗಳು, ಜವಳಿ ಉತ್ಪನ್ನ ಮತ್ತು ಇತರೆ ಸರಕುಗಳ ಸಾಗಣೆ ಮಾಡುವುದರೊಂದಿಗೆ ವರಮಾನ ಹೆಚ್ಚಳಕ್ಕೆ ಆದ್ಯತೆ ನೀಡಬೇಕು’ ಎಂದು ಅವರು ಸಲಹೆ ನೀಡಿದರು.

‘ಪ್ರಯಾಣಿಕ ರೈಲುಗಳಿಗೆ 7 ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂ ತಲುಪಲು ಸಬ್‌ವೇ ಮತ್ತು ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೆಟ್ರೊ ರೈಲು ನಿಲ್ದಾಣಗಳ ಮಾದರಿಯಲ್ಲಿ ಎಲ್ಲ ಪ್ಲಾಟ್‌ಫಾರಂಗಳಿಗೂ ಲಿಫ್ಟ್ ಮತ್ತು ಎಸ್ಕಲೇಟರ್ ಸೌಲಭ್ಯ ಕಲ್ಪಿಸಲಾಗಿದೆ. ದಿನಕ್ಕೆ ಒಂದು ಲಕ್ಷ ಪ್ರಯಾಣಿಕರು ಓಡಾಡಬಹುದಾದಷ್ಟು ವಿಶಾಲ ಪ್ರದೇಶದಲ್ಲಿ ಟರ್ಮಿನಲ್ ತಲೆ ಎತ್ತಿದೆ’ ಎಂದರು.

ಸಂಸದ ಪಿ.ಸಿ. ಮೋಹನ್, ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್, ಪ್ರಧಾನ ಮುಖ್ಯ ಕಾರ್ಯಾಚರಣೆ ವ್ಯವಸ್ಥಾಪಕ ಹರಿಶಂಕರ್ ವರ್ಮಾ, ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶ್ಯಾಮ್ ಸಿಂಗ್, ಮುಖ್ಯ ಆಡಳಿತ ಅಧಿಕಾರಿ ದೇಶ್‌ರತನ್ ಗುಪ್ತ ಮತ್ತು ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ಇತರೆ ಅಧಿಕಾರಿಗಳು ಹಾಜರಿದ್ದರು.



ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ನಗರದ ಬೈಯಪ್ಪನಹಳ್ಳಿಯಲ್ಲಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಅನ್ನು ಭಾನುವಾರ ಪರಿಶೀಲಿಸಿದರು. ಸಂಸದ ಪಿ.ಸಿ. ಮೋಹನ್, ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಮತ್ತು ಇತರೆ ಅಧಿಕಾರಿಗಳು ಇದ್ದರು – ಪ್ರಜಾವಾಣಿ ಚಿತ್ರ

ಎಲೆಕ್ಟ್ರಾನಿಕ್ಸ್ ಬಿಡಿಭಾಗ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳನ್ನು ಕದಿಯುತ್ತಿದ್ದ ಆರೋಪಿ ಓಂಕಾರ್ (23) ಎಂಬಾತನನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು ಆತನದಿಂದ ₹1.50 ಲಕ್ಷ ಮೌಲ್ಯದ ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ.

‘ವಿಘ್ನೇಶ್ವರ ನಗರ ಬಸ್ ನಿಲ್ದಾಣ ಸಮೀಪ ಇಂಡಸ್ ಕಂಪನಿಯ ಟವರ್ ಇದೆ. ಅದಕ್ಕೆ ಅಳವಡಿಸಿದ್ದ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ ಕಾರ್ಡ್‌ಗಳು ಹಾಗೂ ಇತರೆ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳು ಕಳವಾಗಿದ್ದವು. ಈ ಸಂಬಂಧ ಆಗಸ್ಟ್ 27ರಂದು ದೂರು ದಾಖಲಾಗಿತ್ತು. ತನಿಖೆ ಕೈಗೊಂಡಿದ್ದ ಸಿಬ್ಬಂದಿ ಇದೇ ತಿಂಗಳ 3ರಂದು ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಓಂಕಾರ್

‘ಉತ್ತರ ಪ್ರದೇಶದವನಾದ ಆರೋಪಿ ವಿಘ್ನೇಶ್ವರ ನಗರದಲ್ಲಿ ನೆಲೆಸಿದ್ದ. ಇಂಟರ್‌ನೆಟ್ ಸೇವೆ ಒದಗಿಸುವ ಕಂಪನಿಯೊಂದರ ಪ್ರತಿನಿಧಿಯಾಗಿದ್ದ ಈತ ಇಂಡಸ್ ಕಂಪನಿಯ ಟವರ್ ನಿರ್ವಹಣಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ. ಟವರ್ ನಿರ್ವಹಣೆಯ ನೆಪದಲ್ಲಿ ಆಗಾಗ ಸ್ಥಳಕ್ಕೆ ಹೋಗುತ್ತಿದ್ದ ಆತ ದುಬಾರಿ ಮೌಲ್ಯದ ಕಾರ್ಡ್‌ಗಳನ್ನು ಗುರುತಿಸಿ ಅದನ್ನು ಕದಿಯುತ್ತಿದ್ದ’ ಎಂದು ಹೇಳಿದ್ದಾರೆ.

ಗಂಧದ ಮರ ಕಳುವಿಗೆ ಯತ್ನ: ಗಾಳಿಯಲ್ಲಿ ಗುಂಡು

ಗುಬ್ಬಿ: ತಾಲ್ಲೂಕಿನ ಕಡಬ ಹೋಬಳಿ ಹರಕಲದೇವಿ ಗುಡ್ಡ ಮೀಸಲು ಅರಣ್ಯ ಪ್ರದೇಶದಲ್ಲಿ ಗಂಧದ ಮರ ಕಡಿಯುತ್ತಿದ್ದ ಕಳ್ಳರ ಗುಂಪಿನ ಮೇಲೆ ಭಾನುವಾರ ದಾಳಿ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ.

ಗುಂಡು ತಲೆಗೆ ತಗುಲಿ ಮೂರ್ತಿ ಎಂಬ ಕಳ್ಳ ಕುಸಿದು ಬಿದ್ದಿದ್ದಾನೆ. ಕೃಷ್ಣ ಮತ್ತು ಮಲ್ಲಪ್ಪ ಎಂಬ ಇಬ್ಬರು ಗಾಯಗೊಂಡಿದ್ದಾರೆ. ಈ ಮೂವರನ್ನೂ ತುಮಕೂರು ಆಸ್ಪತ್ರೆಗೆ ಸೇರಿಸಲಾಗಿದೆ. ಮೂವರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಉಳಿದವರು ಪರಾರಿಯಾಗಿದ್ದಾರೆ.

ದ್ವಿಚಕ್ರ ವಾಹನ ಕಳ್ಳನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ಹಾಗೂ ಇತರೆ ಸ್ಥಳಗಳಲ್ಲಿ ನಿಲುಗಡೆ ಮಾಡಿರುವ ದ್ವಿಚಕ್ರ ವಾಹನಗಳನ್ನು ಯಾರೂ ಇಲ್ಲದ ಹೊತ್ತಿನಲ್ಲಿ ಕದಿಯುತ್ತಿದ್ದ ಆರೋಪಿ ಜಮೀರ್ ಪಾಷಾ ಯಾನೆ ‘ಚಿಂದಿ’ಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹ 5 ಲಕ್ಷ ಮೌಲ್ಯದ 13 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

‘ಮೋದಿ ಆಸ್ಪತ್ರೆ ಎದುರು ನಿಲ್ಲಿಸಿದ್ದ ಹೀರೊ ಹೊಂಡ ಸ್ಪ್ಲೆಂಡರ್ ಬೈಕ್ ಕಳುವಾಗಿರುವ ಸಂಬಂಧ ವ್ಯಕ್ತಿಯೊಬ್ಬರು ಆಗಸ್ಟ್ 31ರಂದು ದೂರು ದಾಖಲಿಸಿದ್ದರು. ತನಿಖೆ ಆರಂಭಿಸಿದ 24 ಗಂಟೆಗಳೊಳಗೆ ಆರೋಪಿಯನ್ನು ಪತ್ತೆ ಹಚ್ಚಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.



ಜಮೀರ್ ಪಾಷಾ

‘ಕೋಲಾರ ಜಿಲ್ಲೆ ಮುಳಬಾಗಿಲಿನವನಾದ ಆರೋಪಿಯು ಕೆ.ಆರ್. ಪುರ, ಬಾಣಸವಾಡಿ, ಕೃಷ್ಣರಾಜ ಮಾರುಕಟ್ಟೆ, ಕಾಡುಗೊಂಡನಹಳ್ಳಿ, ಭಾರತೀನಗರ ಹಾಗೂ ನಗರದ ಇತರೆ ಭಾಗಗಳಿಂದ ಬೈಕ್‌ಗಳನ್ನು ಕದ್ದು ಮುಳಬಾಗಿಲಿಗೆ ಸಾಗಿಸುತ್ತಿದ್ದ. ಅಲ್ಲಿ ಗ್ಯಾರೇಜ್‌ವೊಂದನ್ನು ನಡೆಸುತ್ತಿದ್ದ ಆತ ಕದ್ದ ವಾಹನಗಳ ಬಿಡಿಭಾಗಗಳನ್ನು ತೆಗೆದು ರಿಪೇರಿಗೆ ತರುತ್ತಿದ್ದ ವಾಹನಗಳಿಗೆ ಜೋಡಿಸುತ್ತಿದ್ದ. ಬಸವೇಶ್ವರ ಠಾಣೆ ವ್ಯಾಪ್ತಿಯಲ್ಲಿ ಎರಡು ಬೈಕ್‌ಗಳನ್ನು ಕದ್ದಿರುವ ವಿಚಾರವನ್ನೂ ಆತ ಒಪ್ಪಿಕೊಂಡಿದ್ದಾನೆ’ ಎಂದು ಅವರು ತಿಳಿಸಿದರು.



ಆರೋಪಿಯಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು

ರಾಜಾನುಕುಂಟೆ: ಸರಗಳ್ಳರ ಬಂಧನ

ಅಪರಾಧ ಸುದ್ದಿ

ಹೆಸರಘಟ್ಟ: ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದ ಸರಗಳ್ಳರನ್ನು ರಾಜಾನುಕುಂಟೆ ಪೊಲೀಸರು ಬಂಧಿಸಿದ್ದಾರೆ.

ಚಂದ್ರು (24), ವಿರೂಪಾಕ್ಷ (29) ಮತ್ತು ನಿಂಗನಗೌಡ ಬಂಧಿತ ಆರೋಪಿಗಳು. ಆಗಸ್ಟ್ 21 ರಂದು ಬೆಳಿಗ್ಗೆ ಲಿಂಗರಾಜಪುರ ಗ್ರಾಮದ ಕೆರೆ ಏರಿಯ ಹತ್ತಿರ ಅಂಗನವಾಡಿ ಕೇಂದ್ರಕ್ಕೆ ತೆರಳುತ್ತಿದ್ದ ಮೇಲ್ವಿಚಾರಿಕೆ ನಂದಿನಿ ಎಂಬುವರ ಮೇಲೆ ಮೂರು ಜನ ಖಾರದ ಪುಡಿ ಎರಚಿ ಮಾಂಗಲ್ಯ ಸರನ್ನು ಕಿತ್ತು ಕೊಂಡು ಹೋಗಿದ್ದರು.

ಚಳವಳಿ ಕಾರಣಕ್ಕೆ ಜೈಲಿಗೆ ಹೋಗಿದ್ದೇನೆ: ಸಿ.ಟಿ. ರವಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಚಳವಳಿ ಕಾರಣಕ್ಕೆ ಜೈಲಿಗೆ ಹೋಗಿದ್ದೇನೆ. ಗೂಂಡಾಗಿರಿ, ಭ್ರಷ್ಟಾಚಾರದ ಆರೋಪ ಹೊತ್ತು ಎಂದೂ ಜೈಲಿಗೆ ಹೋಗಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಕೊತ್ವಾಲ ರಾಮಚಂದ್ರ ತೀರಿಕೊಂಡಾಗ ನಾನಿನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಅವರ ಶಿಷ್ಯ ಎಂದು ಹೆಮ್ಮೆಯಿಂದ ಹೇಳಿಕೊಂಡದ್ದು ನಾನಲ್ಲ. ‘ಆ ದಿನಗಳು’ ಪುಸಕ್ತದಲ್ಲಿ ಅವರ ಶಿಷ್ಯರು ಯಾರ‍್ಯಾರು ಎಂಬ ವಿವರ ಇದೆ. ಅದರಲ್ಲಿ ನನ್ನ ಹೆಸರು ಇಲ್ಲ’ ಎಂದರು.

‘ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡಲು ಕಾಂಗ್ರೆಸ್‌ನವರಿಗೆ ನೈತಿಕ ಹಕ್ಕಿಲ್ಲ. ಕಾಂಗ್ರೆಸ್ 2014ರಲ್ಲಿ ಅಧಿಕಾರದಿಂದ ಇಳಿದಾಗ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 981 ಇತ್ತು. ಕೋವಿಡ್‌ನಿಂದಾಗಿ ಜಗತ್ತು ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಅದರ ಪರಿಣಾಮವಾಗಿ ಭಾರತದಲ್ಲೂ ವಿವಿಧ ವಸ್ತುಗಳ ಬೆಲೆ ಏರಿಕೆ ಆಗಿದೆ. ಇದು ತಾತ್ಕಾಲಿಕ’ ಎಂದರು.

‘ಕೋವಿಡ್ ಪ್ರಕರಣ ಕಡಿಮೆ ಇರುವ, ಇಲ್ಲದಿರುವ ಜಿಲ್ಲೆಗಳಲ್ಲಿ ಸಾರ್ವಜನಿಕ ಗಣೋತ್ಸವಕ್ಕೆ ಅವಕಾಶ ನೀಡಬಹುದು. ಮುಖ್ಯಮಂತ್ರಿ ಅವರೊಂದಿಗಿನ ಚರ್ಚಿಸಿದಾಗಲೂ ಅದನ್ನು ಹೇಳಿದ್ದೇನೆ. ಪ್ರಕರಣಗಳು ಹೆಚ್ಚು ಇರುವ ಜಿಲ್ಲೆಗಳಲ್ಲಿ ಕಠಿಣ ನಿರ್ಬಂಧ ವಿಧಿಸುವುದು ಅನಿವಾರ್ಯ. ಜನರ ಭಾವನೆಗೆ ತಕ್ಕಂತೆ ಗಣೇಶೋತ್ಸವ ನಡೆಯಲು ಅವಕಾಶ ಕಲ್ಪಿಸಿ ಎಂದು ಮುಖ್ಯಮಂತ್ರಿಗೆ ವಿನಂತಿಸಿದ್ದೇನೆ’ ಎಂದು ತಿಳಿಸಿದರು.

ನಗರದಲ್ಲಿ ಇಂದು

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ, ಅವಕಾಶಗಳು ಹಾಗೂ ಕಾರ್ಯತಂತ್ರದ ಬಗ್ಗೆ ವಿಚಾರಸಂಕಿರಣ: ಉದ್ಘಾಟನೆ: ಬಿ.ಸಿ. ನಾಗೇಶ್, ಗೌರವ ಅತಿಥಿ: ಕೆ.ಸಿ. ರಾಮಮೂರ್ತಿ, ದಿಕ್ಸೂಚಿ ಭಾಷಣ: ಪ್ರೊ.ಎಂ.ಕೆ. ಶ್ರೀಧರ್, ಅಧ್ಯಕ್ಷತೆ: ದೂಸಿ ರಾಮಕೃಷ್ಣ ರಾವ್, ಆಯೋಜನೆ: ವಿದ್ಯಾಭಾರತಿ ಕರ್ನಾಟಕ, ಸಿ.ಎಂ.ಆರ್. ಸಮೂಹ ಶಿಕ್ಷಣ ಸಂಸ್ಥೆಗಳು, ಸ್ಥಳ: ಸಿ.ಎಂ.ಆರ್. ತಾಂತ್ರಿಕ ಶಿಕ್ಷಣ ಸಂಸ್ಥೆ, ಮಾರತಹಳ್ಳಿ, ಬೆಳಿಗ್ಗೆ 10



ಎಂ.ಕೆ.ಶ್ರೀಧರ್

ಶಿಕ್ಷಕರ ದಿನಾಚರಣೆ: ಮುಖ್ಯ ಅತಿಥಿ: ಪ್ರೊ.ಎಂ.ಕೆ. ಶ್ರೀಧರ್, ಅಧ್ಯಕ್ಷತೆ: ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ., ಆಯೋಜನೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಸ್ಥಳ: ಧನ್ವಂತರಿ ಸಭಾಂಗಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ 4ನೇ ಟಿ ಬ್ಲಾಕ್, ಸಂಜೆ 4

ಚಿತ್ರಾವಳಿ



ಬಾಗಲಗುಂಟೆಯ ಸಾಯಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ರಾಜ್ಯ ಫಲಾನುಭವಿಗಳ ಸಭೆ ಹಾಗೂ ಅಭಿನಂದನಾ ಸಮಾರಂಭವನ್ನು ಕೇಂದ್ರ ಸಚಿವ ಭಗವಂತ ಖೂಬಾ ಉದ್ಘಾಟಿಸಿದರು. ಬಿಜೆಪಿ ಮುಖಂಡರಾದ ಎಸ್. ಮುನಿರಾಜು, ಬಿ.ನಾರಾಯಣ್, ಭಾನುಪ್ರಕಾಶ್, ಎನ್. ಲೋಕೇಶ್, ಶಿವಯೋಗಿಸ್ವಾಮಿ ಇದ್ದರು.



ಜೆಡಿಎಸ್ ಮುಖಂಡ ವಿ. ನಾರಾಯಣಸ್ವಾಮಿ ಅವರು ಗಾಂಧಿನಗರದಲ್ಲಿ ಪತ್ರಿಕಾ ವಿತರಕರಿಗೆ 150 ಆಹಾರ ಕಿಟ್ ಮತ್ತು ಗುರುತಿನ ಚೀಟಿ ವಿತರಿಸಿದರು. ಸ್ಥಳೀಯ ಮುಖಂಡ ಮಲ್ಲೇಶ್, ಪತ್ರಿಕಾ ವಿತರಕರಾದ ಅನಿಲ್, ಸಂಗಮ್, ಸುರೇಶ್ ಮತ್ತು ರಮೇಶ್ ಇದ್ದರು

ಪೇಢಾ, ಕುಂದಾ, ಕರದಂಟು ಸಿಹಿತಿನಿಸಿಗೆ ರುಚಿ ಹೆಚ್ಚಿಸುವ ಎಮ್ಮೆಗೆ ಮನ್ನಣೆ

‘ಧಾರವಾಡಿ ಎಮ್ಮೆ’ ತಳಿಗೆ ರಾಷ್ಟ್ರೀಯ ಮಾನ್ಯತೆ

• ಇ.ಎಸ್.ಸುಧೀಂದ್ರ ಪ್ರಸಾದ್

ಧಾರವಾಡ: ಕೃತಕ ಗರ್ಭಧಾರಣೆ ಭಾರತಕ್ಕೆ ಕಾಲಿಟ್ಟು 60 ವರ್ಷಗಳ ನಂತರವೂ ತಳಿ ಶುದ್ಧತೆ ಕಾಪಾಡಿಕೊಂಡಿರುವ ‘ಧಾರವಾಡಿ ಎಮ್ಮೆ’ ತಳಿಗೆ ಕೊನೆಗೂ ರಾಷ್ಟ್ರೀಯ ಮಾನ್ಯತೆ ದೊರೆತಿದೆ.

ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಪಶು ಸಂಗೋಪನೆ ವಿಭಾಗವು ಇತ್ತೀಚೆಗೆ ನಡೆಸಿದ ಸಭೆಯಲ್ಲಿ ರಾಜ್ಯದ ‘ಧಾರವಾಡಿ ತಳಿ’ ಎಮ್ಮೆಗೆ ‘ಇಂಡಿಯಾ_ಬಫೆಲೊ_0800_ಧಾರವಾಡಿ_01018’ ಎಂದು ತಳಿ ಪ್ರವೇಶ ಸಂಖ್ಯೆ ನೀಡಿದೆ. ಈ ಮೂಲಕ ಎಮ್ಮೆಗಳಲ್ಲಿ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಇದಾಗಿದೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಶು ವಿಜ್ಞಾನ ವಿಭಾಗವು 1970ರಿಂದ ಈ ಎಮ್ಮೆ ತಳಿಗೆ ಮಾನ್ಯತೆ ಪಡೆಯಲು ಪ್ರಯತ್ನ ನಡೆಸುತ್ತಿತ್ತು. ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಅಂಗ ಸಂಸ್ಥೆಯಾದ ಪಶು ವಂಶವಾಹಿ ಸಂಪನ್ಮೂಲ ಸಂರಕ್ಷಣೆಯ ರಾಷ್ಟ್ರೀಯ ಸಂಸ್ಥೆ (ಎನ್‌ಬಿಎಆರ್‌ಜಿ) ಹಾಗೂ ಕೃಷಿ ವಿ.ವಿಯ ಪಶು ವಿಜ್ಞಾನ ವಿಭಾಗದ ಸಹಯೋಗದಲ್ಲಿ ಸಂಶೋಧನೆ ನಡೆದಿತ್ತು.

‘ತಳಿ ಶುದ್ಧತೆ ಕುರಿತು 2017ರಲ್ಲಿ ಸಂಶೋಧಕರು ಪರಿಷತ್‌ಗೆ ವರದಿ ಸಲ್ಲಿಸಿದ್ದರು. ಈ ಕುರಿತು ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿತ್ತು.


ಈ ಮಾನ್ಯತೆಯಿಂದಾಗಿ ಈವರೆಗೂ ಜಾಗತಿಕ ಮನ್ನಣೆ ದೊರೆತ ದೇಶದ 18 ಎಮ್ಮೆ ತಳಿಯ ಸಾಲಿಗೆ ‘ಧಾರವಾಡಿ’ ಹೊಸ ಸೇರ್ಪಡೆ ಆಗಿದೆ’ ಎಂದು ಈ ತಳಿ ಕುರಿತು ಸಂಶೋಧನೆ ನಡೆಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯ ಪ್ರಾಣಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ವಿ.ಎಸ್.ಕುಲಕರ್ಣಿ ತಿಳಿಸಿದ್ದಾರೆ.

‘ಧಾರವಾಡಿ ತಳಿಯು ರಾಜ್ಯದ ಉತ್ತರ ಭಾಗದ 14 ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾಣಿಸುತ್ತಿವೆ. ಒಟ್ಟು 12.05 ಲಕ್ಷ ಧಾರವಾಡಿ ತಳಿಯ ಎಮ್ಮೆಗಳು ಇರಬಹುದು ಎಂದು ಅಂದಾಜಿಸಲಾಗಿದೆ. ತಳಿ ಕುರಿತು ಧಾರವಾಡ, ಬಾಗಲಕೋಟೆ, ಬೆಳಗಾವಿ ಹಾಗೂ ಗದಗ ಜಿಲ್ಲೆಗಳಲ್ಲಿ ಸಂಶೋಧನೆ ಕೈಗೊಳ್ಳಲಾಗಿತ್ತು. ಈ ಭಾಗದ 64 ಹಳ್ಳಿಗಳ 3,937 ಜನ ರೈತರ ಮನೆಯಲ್ಲಿನ 10,650 ಧಾರವಾಡಿ ಎಮ್ಮೆಗಳ ಕುರಿತು ಸತತ ಎರಡು ವರ್ಷ ಅಧ್ಯಯನ ನಡೆಸಲಾಗಿದೆ. ಇವುಗಳಲ್ಲಿ ಶೇ 80 ರಷ್ಟು ತಳಿ ಶುದ್ಧತೆ ಕಂಡು ಬಂದಿದೆ’ ಎಂದು ಕುಲಕರ್ಣಿ ವಿವರಿಸಿದರು.

ಮುಖ್ಯಾಂಶಗಳು

- 1970ರಿಂದ ‘ಧಾರವಾಡಿ’ಗೆ ಮಾನ್ಯತೆ ಪಡೆಯಲು ಪ್ರಯತ್ನ
- ಜಾಗತಿಕ ಮನ್ನಣೆ ದೊರೆತ ದೇಶದ 18ನೇ ಎಮ್ಮೆ ತಳಿ ಇದು

ಒಳ್ಳೆ ಸುದ್ದಿ



ಮಾನ್ಯತೆ ಪಡೆದ ಧಾರವಾಡಿ ಎಮ್ಮೆ ತಳಿ

ಪೇಢಾಗೆ ಎಮ್ಮೆ ಹಾಲಿನಿಂದ ರುಚಿ...

‘ಧಾರವಾಡಿ ಎಮ್ಮೆ’ ತನ್ನ ಜೀವಿತಾವಧಿಯಲ್ಲಿ ಐದು ಬಾರಿ ಕರು ಹಾಕುತ್ತದೆ. ಒಮ್ಮೆ ಕರುಹಾಕಿದರೆ 335 ದಿನ ಹಾಲು ನೀಡುತ್ತದೆ. ಇದರ ಹಾಲಿನಲ್ಲಿ ಶೇ 7ರಷ್ಟು ಕೊಬ್ಬಿನಾಂಶ ಇದೆ. ಹೀಗಾಗಿ ಈ ಭಾಗದ ಸುಪ್ರಸಿದ್ಧ ಸಿಹಿ ತಿನಿಸುಗಳಾದ ಧಾರವಾಡ ಪೇಢಾ, ಬೆಳಗಾವಿ ಕುಂದಾ, ಜಮಖಂಡಿ ಕಲ್ಲಿ ಪೇಢಾ, ಐನಾಪುರ ಪೇಢಾ, ಗೋಕಾಕ ಮತ್ತು ಅಮೀನಗಡ ಕರದಂಟು ಇತ್ಯಾದಿಗಳಲ್ಲಿ ಈ ಎಮ್ಮೆಯ ಹಾಲು ಬಳಸಲಾಗುತ್ತದೆ.

‘ಊರೆಲ್ಲಾ ಅಡ್ಡಾಡಿ ಬರುವ ‘ಧಾರವಾಡಿ’ ಒಂದು ಸೂಲಿನಲ್ಲಿ 970 ಲೀಟರ್ ಹಾಲು ಕೊಡುತ್ತದೆ. ಕೊಟ್ಟಿಗೆಯಲ್ಲೇ ಸಾಕಿದರೆ ‘ಸುರ್ತಿ’ ಎಮ್ಮೆಯಷ್ಟೇ (1,200 ಲೀಟರ್) ಹಾಲು ಕೊಟ್ಟಿದೆ. ರೈತರು ಉತ್ತಮ ಪದ್ಧತಿ ಅಳವಡಿಸಿದಲ್ಲಿ ಇನ್ನೂ ಹೆಚ್ಚಿನ ಹಾಲು ಪಡೆಯಲು ಸಾಧ್ಯವಿದೆ’ ಎನ್ನುತ್ತಾರೆ ಡಾ.ವಿ.ಎಸ್. ಕುಲಕರ್ಣಿ.

ಬೈಕ್‌ಗೆ ಟಿಪ್ಪರ್ ವಾಹನ ಡಿಕ್ಕಿ: ವಿದ್ಯಾರ್ಥಿ ಸಾವು


ಪ್ರಜಾವಾಣಿ ವಾರ್ತೆ

ಯಲಹಂಕ: ಟಿಪ್ಪರ್ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಚಿರಾಗ್ (17) ಎಂಬ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ಚಿರಾಗ್, ಭಾರತೀಯ ವಾಯುಪಡೆ ಕೇಂದ್ರದ ನೌಕರ ಮುರಳೀಧರ್ ಅವರ ಪುತ್ರ. ಎಂ.ಎಸ್. ಪಾಳ್ಯ ಸಮೀಪದ ಆದಿತ್ಯನಗರ ನಿವಾಸಿಯಾಗಿರುವ ಅವರು ವಿದ್ಯಾರಣ್ಯಪುರದ ಕಾಲೇಜೊಂದರಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದರು’ ಎಂದು ಯಲಹಂಕ ಸಂಚಾರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

‘ಭಾನುವಾರ ಮಧ್ಯಾಹ್ನ 1.15ರ ಸುಮಾರಿಗೆ ಚಿರಾಗ್ ಮತ್ತು ಆತನ ಸ್ನೇಹಿತ, ಸುಬೇದಾರ್ ಪಾಳ್ಯದಿಂದ ಸಂಭ್ರಮ್ ಕಾಲೇಜಿನತ್ತ ಬೈಕಿನಲ್ಲಿ ತೆರಳಿದ್ದರು. ಈ ವೇಳೆ ದೊಡ್ಡಬ್ಯಾಲದಕೆರೆ ಕಡೆಯಿಂದ ವೀರಸಾಗರದತ್ತ ಹೊರಟಿದ್ದ ಟಿಪ್ಪರ್ ಲಾರಿಯು ಗುದ್ದಿದೆ. ಚಿರಾಗ್ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಕೂಡಲೇ ಅವರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ತೀವ್ರ ರಕ್ತಸ್ರಾವವಾಗಿದ್ದರಿಂದ ಅವರು ಮಾರ್ಗ ಮಧ್ಯೆಯೇ ಪ್ರಾಣ ಬಿಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಸ್ನೇಹಿತನಿಗೂ ಗಂಭೀರ ಗಾಯಗಳಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅವರು ವಿವರಿಸಿದ್ದಾರೆ.

ಗಿಲಾನಿ ಕುಟುಂಬದ ವಿರುದ್ಧ ಯುಎಪಿಎ ಕಾಯ್ದೆಯಡಿ ಪ್ರಕರಣ



ಶ್ರೀನಗರ (ಎಎಫ್‌ಪಿ): ಕಾಶ್ಮೀರದ ಪ್ರತ್ಯೇಕತಾವಾದಿ ಮುಖಂಡ ಸೈಯದ್ ಅಲಿ ಶಾ ಗಿಲಾನಿ ಅವರು ನಿಧನರಾದಾಗ, ದೇಶ ವಿರೋಧಿ ಘೋಷಣೆಗಳನ್ನು ಕೂಗಿದ ಮತ್ತು ಅವರ ಪಾರ್ಥಿವ ಶರೀರವನ್ನು ಪಾಕಿಸ್ತಾನದ ಧ್ವಜದಿಂದ ಸುತ್ತಿದ್ದ ಆರೋಪದ ಮೇರೆಗೆ ಗಿಲಾನಿ ಕುಟುಂಬದ ವಿರುದ್ಧ ಭಯೋತ್ಪಾದನಾ ವಿರೋಧಿ ಕಾನೂನಿನ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

92 ವರ್ಷದ ಗಿಲಾನಿ ಅವರು ಕಳೆದ ಬುಧವಾರ ನಿಧನರಾಗಿದ್ದರು.

ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿ.ಎಂ ಬೊಮ್ಮಾಯಿ ಹೇಳಿಕೆ

‘ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ನೀತಿ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಕ್ರಮ ವಹಿಸಲಾಗುತ್ತಿದ್ದು, ಶಿಕ್ಷಕರು ತಮ್ಮ ಅನಿಸಿಕೆ, ಅನುಮಾನ ವ್ಯಕ್ತಪಡಿಸಿ, ಮುಕ್ತವಾಗಿ ಚರ್ಚಿಸಿ ಮುಂದುವರೆಯೋಣ. ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ನೀತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸೋಣ’ ಎಂದು ಶಿಕ್ಷಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.


ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಬಿ.ಸಿ.ನಾಗೇಶ್ ಮಾತನಾಡಿ, ‘ರಾಜ್ಯದ ಹಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ವಸ್ತುಸ್ಥಿತಿ ಪರಿಶೀಲಿಸಿದ್ದೇನೆ. ಶಿಕ್ಷಕರ ಕೊರತೆ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇನೆ’ ಎಂದರು.

‘ರಾಜ್ಯದ ಶೇ 50ಕ್ಕೂ ಹೆಚ್ಚು ಶಿಕ್ಷಕರು ಪ್ರಶಸ್ತಿಗೆ ಅರ್ಹರಿದ್ದಾರೆ ಎಂಬ ವಿಶ್ವಾಸವಿದೆ. ಅಂಕ ಆಧಾರದ ಮೇಲೆ ಪ್ರಶಸ್ತಿ ಗೌರವ ನಿರ್ಧರಿಸಲಾಗುತ್ತದೆ. ಹೀಗಾಗಿ, ಕೆಲವರಿಗೆ ಮಾತ್ರ ಪ್ರಶಸ್ತಿ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಬೇರೆ ಶಿಕ್ಷಕರು ಕೂಡ ಪ್ರಶಸ್ತಿಗೆ ಪಾತ್ರರಾಗುತ್ತಾರೆ’ ಎಂದು ಸಚಿವರು ನುಡಿದರು.

‘ರಾಜ್ಯದಲ್ಲಿ ಮುಂದಿನ ವರ್ಷದಿಂದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವ ಪ್ರಯತ್ನ ನಡೆದಿದೆ. ಆಗ ಬೇರೆ ಬೇರೆ ತೊಂದರೆಗಳು ಎದುರಾಗಬಹುದು. ಆದರೆ, ರಾಷ್ಟ್ರದ ಹಿತಕ್ಕಾಗಿ ಎಲ್ಲರೂ ಬೆಂಬಲ ನೀಡುತ್ತೀರಿ ಎಂದು ನಂಬಿದ್ದೇನೆ’ ಎಂದರು.

ಯಶೋಮಾರ್ಗ ಪುಸ್ತಕ ಬಿಡುಗಡೆ: ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಿ ಯಶಸ್ವಿಯಾಗಿರುವ ಕುರಿತು ಸಮಗ್ರ ಮಾಹಿತಿ ದಾಖಲಿಸಿರುವ ‘ಯಶೋಮಾರ್ಗ’ ಪುಸ್ತಕ ಮತ್ತು ಹಿಂದಿನ ವರ್ಷಗಳಲ್ಲಿ ಶಿಕ್ಷಕರ ಪ್ರಶಸ್ತಿ ಸ್ವೀಕರಿಸಿರುವ ಶಿಕ್ಷಕರು, ಉಪನ್ಯಾಸಕರ ಕುರಿತು ಮಾಹಿತಿ ನೀಡುವ ಪುಸ್ತಕವನ್ನು ಇದೇ ವೇಳೆ ಮುಖ್ಯಮಂತ್ರಿ ಬಿಡುಗಡೆ ಮಾಡಿದರು. ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಎ. ದೇವೇಗೌಡ ಇದ್ದರು.



ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ಅಧಿಕಾರಿಗಳು ಇದ್ದರು. (ಕುಳಿತವರು ಎಡದಿಂದ) ಟಿ.ಪಿ. ಉಮೇಶ (ಅಮೃತಾಪುರ, ಚಿತ್ರದುರ್ಗ), ಹೇಮಾ ಪಿ. ಅಂಗಡಿ (ಬೆಳಗಾವಿ ನಗರ), ವೈ.ಎ. ಚಂದ್ರು (ಲಿಂಗಸಗೂರು, ರಾಯಚೂರು), ಎಂ. ಪರಮೇಶ್ವರಯ್ಯ (ಮಾಲವಿ, ಬಳ್ಳಾರಿ), ಮಾರುತಿ ಭಜಂತ್ರಿ (ಚಳಮಟ್ಟಿ, ಧಾರವಾಡ), ಕೆ.ಎಸ್. ಪ್ರಕಾಶ್ (ಹೊಸೂರು, ಶಿವಮೊಗ್ಗ), ಎಚ್.ಎ. ಶಿವಶಂಕರಯ್ಯ (ಚಿಕ್ಕನಾಯಕನಹಳ್ಳಿ, ತುಮಕೂರು), ಪಂಚಯ್ಯ ಹಿರೇಮಠ (ಹೊಸಹಳ್ಳಿ, ಗದಗ), ಸದಪ್ಪ ಏಳಗಂಟಿ (ಹೆಗ್ಗೂರ, ಬಾಗಲಕೋಟೆ), ಡಿ. ಗೋಪಾಲಸ್ವಾಮಿ (ಇಕ್ಕಡಹಳ್ಳಿ, ಚಾಮರಾಜನಗರ) ಪ್ರಜಾವಾಣಿ ಚಿತ್ರ

‘ನಮ್ಮ ಶಾಲೆ, ನನ್ನ ಕೊಡುಗೆ’

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಆರ್ಥಿಕ ನೆರವು ಒದಗಿಸಲು ಇಚ್ಛಿಸುವವರಿಗೆ ಅನುಕೂಲ ಕಲ್ಪಿಸಲು ‘ನಮ್ಮ ಶಾಲೆ ನನ್ನ ಕೊಡುಗೆ’ ಎಂಬ ವೆಬ್ ಪೋರ್ಟಲ್ ಬಿಡುಗಡೆ ಮಾಡಲಾಗಿದೆ. ದಾನಿಗಳು ನೀಡುವ ಹಣವು ಕೇಂದ್ರ ಕಚೇರಿಯ ಬ್ಯಾಂಕ್ ಖಾತೆ ಮೂಲಕ ಆಯಾ ಶಾಲೆಗೆ ನೇರವಾಗಿ ಸಂದಾಯವಾಗುವ ರೀತಿಯಲ್ಲಿ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ. ಪೋರ್ಟಲ್‌ಗೆ ಲಾಗಿನ್ ಆಗಿ ಶಾಲೆ ಆಯ್ಕೆ ಮಾಡಿ ಹಣ ಪಾವತಿಸಬಹುದು. ವೆಬ್ ಪೋರ್ಟಲ್ (https://sts.karnataka.gov.in/SATSSA/main/loadHomePage.htm).

ಸಿ.ಎಂ. ನಾಗರಾಜಗೆ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ



ನಾಗರಾಜ

ನವದೆಹಲಿ: ಬೋಧನೆಯಲ್ಲಿ ಹೊಸ ವಿಧಾನವನ್ನು ಅಳವಡಿಸಿಕೊಳ್ಳುವಲ್ಲಿ ಕೊಡುಗೆ ನೀಡಿರುವ, ರಾಜ್ಯದ ಸಿ.ಎಂ.ನಾಗರಾಜ ಸೇರಿದಂತೆ ದೇಶದ 44 ಶಿಕ್ಷಕರಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಭಾನುವಾರ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿದರು.

‘ಶಿಕ್ಷಕರು ವಿದ್ಯಾರ್ಥಿಗಳ ಭಿನ್ನ ಅಗತ್ಯಗಳು ಮತ್ತು ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸರ್ವತೋಮುಖ ಬೆಳವಣಿಗೆಯತ್ತ ಚಿತ್ತ ಹರಿಸಬೇಕಾಗುತ್ತದೆ’ ಎಂದು ರಾಷ್ಟ್ರಪತಿ ಕೋವಿಂದ್ ಹೇಳಿದರು.

ಈ ಬಾರಿ ವರ್ಚುವಲ್ ಆಗಿ ಪ್ರಶಸ್ತಿ ಸಮಾರಂಭವನ್ನು ನಡೆಸಲಾಯಿತು.

ಕರ್ನಾಟಕದಿಂದ ಒಬ್ಬರು ಮಾತ್ರ ಆಯ್ಕೆ: ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ದೊಡ್ಡಬನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಸಿ.ಎಂ. ನಾಗರಾಜ ಅವರು ಶಿಕ್ಷಕರಿಗೆ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಬಾರಿ ಈ ಗೌರವಕ್ಕೆ ಪಾತ್ರರಾದ ರಾಜ್ಯದ ಏಕೈಕ ಶಿಕ್ಷಕ ಇವರು.

15 ವರ್ಷದಿಂದ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ದೊಡ್ಡಬನಹಳ್ಳಿ ಶಾಲೆಯಲ್ಲಿ 2018ರಿಂದ ಕೆಲಸ ಮಾಡುತ್ತಿದ್ದಾರೆ. ಪಾಠ ಬೋಧನೆ ಮಾತ್ರವಲ್ಲದೆ, ಸಮುದಾಯ ಅಭಿವೃದ್ಧಿ ಕಾರ್ಯಗಳಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶಾಲೆಗೆ ಎಲ್‌ಇಡಿ ಟಿವಿ, ಸೌರಫಲಕ, ಸೌರದೀಪಗಳನ್ನು ದೇಣಿಗೆಯಾಗಿ ನೀಡಿ ವಿದ್ಯಾರ್ಥಿಗಳಿಗೆ ಅನುಕೂಲವನ್ನೂ ಕಲ್ಪಿಸಿದ್ದಾರೆ.

ಎರೆಹುಳು ಘಟಕದ ಬಗ್ಗೆ ಅವರು ಮಂಡಿಸಿದ ವಿಷಯವು ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಶಾಸಕ ಶೆಟ್ಟರ್ ಜತೆ ಹು– ಧಾ ಮಹಾನಗರಪಾಲಿಕೆ ಚುನಾವಣೆ ಬಗ್ಗೆ ಮಾತುಕತೆ: ಬಿಎಸ್‌ವೈ


‘ಚುನಾವಣಾ ನಾಯಕತ್ವದ ಬಗ್ಗೆ ಚರ್ಚೆ ಮಾಡಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕ ಜಗದೀಶ ಶೆಟ್ಟರ್ ಮತ್ತು ನನ್ನ ಭೇಟಿಯ ಸಂದರ್ಭದಲ್ಲಿ ಹುಬ್ಬಳ್ಳಿ– ಧಾರವಾಡ ಮಹಾನಗರಪಾಲಿಕೆ ಚುನಾವಣೆ ಬಗ್ಗೆ ಚರ್ಚೆ ನಡೆಸಲಾಯಿತೇ ಹೊರತು, ಪ್ರಸ್ತುತ ರಾಜಕೀಯ ವಿದ್ಯಮಾನಗಳ ಬಗ್ಗೆ ಮಾತುಕತೆ ನಡೆಸಿಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

‘ನಮ್ಮ ಭೇಟಿಯ ಬಗ್ಗೆ ಯಾವುದೇ ಅಪಾರ್ಥ ಕಲ್ಪಿಸುವುದು ಬೇಡ. ನಾನು ಮತ್ತು ಜಗದೀಶ್ ಶೆಟ್ಟರ್ ಭೇಟಿಯಾಗುತ್ತಿರುವುದು ಇದೇ ಮೊದಲೇನಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗ ಮತ್ತು ನಂತರದಲ್ಲಿಯೂ ಹಲವೂ ಬಾರಿ ಭೇಟಿ ಮಾಡಿದ್ದರು’ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಭೇಟಿಯ ವೇಳೆ ಉಭಯ ಕುಶಲೋಪರಿ ಮತ್ತು ರಾಜ್ಯದಲ್ಲಿ ಪಕ್ಷದ ಸಂಘಟನೆ ಕುರಿತ ಚರ್ಚೆಗೆ ಸೀಮಿತವಾಗಿತ್ತು. ಬೊಮ್ಮಾಯಿ ನಾಯಕತ್ವ ಕುರಿತಂತೆ ನನಗೆ ಮತ್ತು ಶೆಟ್ಟರ್ ಅವರಿಗೆ ಅತೃಪ್ತಿ ಉಂಟಾಗಿದೆ ಎಂದು ‘ಪ್ರಜಾವಾಣಿ’ ವರದಿಯಲ್ಲಿ ಬಿಂಬಿಸಲಾಗಿತ್ತು. ಇದರಲ್ಲಿ ಸತ್ಯಾಂಶವಿಲ್ಲ’ ಎಂದಿದ್ದಾರೆ.



ಯಡಿಯೂರಪ್ಪ

ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಜನರ ಆಶೋತ್ತರಗಳಿಗೆ ಸ್ಪಂದಿಸಿ, ಕೋವಿಡ್–19 ನಂತಹ ಸಂಕಷ್ಟ ಸಂದರ್ಭದಲ್ಲಿಯೂ ಜನರ ಆರೋಗ್ಯ ಹಾಗೂ ಸಂಕಷ್ಟದಲ್ಲಿರುವವರಿಗೆ ನೆರವು ನೀಡಿದೆ. ಇಡೀ ದೇಶದಲ್ಲಿಯೇ ಮಾದರಿ ಎನಿಸುವಂತೆ ಕಾರ್ಯನಿರ್ವಹಿಸುತ್ತಿದೆ. ಕೋವಿಡ್‌ನಿಂದ ಉಂಟಾದ ಆರ್ಥಿಕ ಸಂಕಷ್ಟದಲ್ಲಿಯೂ ಸಹ ಅಭಿವೃದ್ಧಿ ಕಾರ್ಯಗಳು ಯಾವುದೇ ಅಡೆ–ತಡೆ ಇಲ್ಲದೆ ಮುಂದುವರೆಯುತ್ತಿವೆ. ರಾಷ್ಟ್ರದಲ್ಲಿಯೂ ಅತಿ ಹೆಚ್ಚು ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಿ, ಹೂಡಿಕೆದಾರರ ನೆಚ್ಚಿನ ತಾಣವಾಗಿದೆ. ಇವೆಲ್ಲವನ್ನು ಮನಗಂಡು ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಸರ್ಕಾರ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಹಜವಾಗಿಯೇ ಹೇಳಿದ್ದಾರೆ ಎಂದರು.

ಅಮಿತ್ ಶಾ ಹೇಳಿಕೆಯಲ್ಲಿ ಗೊಂದಲವಿಲ್ಲ: ಕಾರಜೋಳ



ಗೋವಿಂದ ಕಾರಜೋಳ

ಬಾಗಲಕೋಟೆ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ ಎಂದು ಹೇಳಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯಲ್ಲಿ ಯಾವುದೇ ಗೊಂದಲ ಇಲ್ಲ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ಹಿಂದಿನ ಚುನಾವಣೆಗಳನ್ನು ಅಂದಿನ ಮುಖ್ಯಮಂತ್ರಿಗಳ ನೇತೃತ್ವದಲ್ಲಿಯೇ ಎದುರಿಸಿದ್ದೇವೆ’ ಎಂದರು.

‘ಗೊಂದಲ ಇಲ್ಲ’ (ದಾವಣಗೆರೆ ವರದಿ): ‘ಬಿಜೆಪಿಯಲ್ಲಿ ನಾಯಕತ್ವದ ಗೊಂದಲ ಇಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈಗಾಗಲೇ ಮುಂದಿನ ಚುನಾವಣೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆಯಲಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ನಾವೆಲ್ಲರೂ ಬದ್ಧ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ದಾವಣಗೆರೆಯಲ್ಲಿ ಹೇಳಿದರು.

ಬಿಎಸ್‌ವೈ ಭೇಟಿಯಾದ ಸಿ.ಎಂ ಬೊಮ್ಮಾಯಿ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭಾನುವಾರ ಭೇಟಿಮಾಡಿ, ಕೆಲಕಾಲ ಚರ್ಚೆ ನಡೆಸಿದ್ದಾರೆ.

ಯಡಿಯೂರಪ್ಪ ಅವರ ನಿವಾಸ ‘ಕಾವೇರಿ’ಗೆ ಬೆಳಿಗ್ಗೆ ಬಂದ ಬೊಮ್ಮಾಯಿ, ಕೆಲವು ನಿಮಿಷಗಳ ಕಾಲ ಚರ್ಚಿಸಿದರು. ಮಾತುಕತೆ ವೇಳೆ ಇತರ ಯಾರೂ ಅವರೊಂದಿಗೆ ಇರಲಿಲ್ಲ.


ಬೊಮ್ಮಾಯಿ ಅವರು ಮಂಗಳವಾರ ದೆಹಲಿಗೆ ತೆರಳಲಿದ್ದಾರೆ. ಸಂಪುಟದಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳನ್ನು ಭರ್ತಿ ಮಾಡುವುದು, ನಿಗಮ, ಮಂಡಳಿಗಳ ನೇಮಕಾತಿ ಸೇರಿದಂತೆ ಹಲವು ವಿಷಯಗಳ ಕುರಿತು ಪಕ್ಷದ ವರಿಷ್ಠರ ಜತೆಗೆ ಮಾತುಕತೆ ನಡೆಸಲು ಸಿದ್ಧತೆ ನಡೆಸಿದ್ದಾರೆ. ಅದಕ್ಕೆ ಪೂರಕವಾಗಿ ಯಡಿಯೂರಪ್ಪ ಅವರೊಂದಿಗೆ ಸಮಾಲೋಚನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೆಹಲಿ ಪ್ರವಾಸದ ವೇಳೆ ವರಿಷ್ಠರ ಜತೆ ಚರ್ಚಿಸಬೇಕಾದ ವಿಚಾರಗಳು ಮತ್ತು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ತೀರ್ಮಾನಗಳ ಕುರಿತು ಮುಖ್ಯಮಂತ್ರಿಯವರು ಯಡಿಯೂರಪ್ಪ ಅವರಿಂದ ಸಲಹೆ ಪಡೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರೊ.ಗೋವಿಂದರಾಜನ್, ಪ್ರಶಾಂತ್ ಪ್ರಕಾಶ್‌ಗೆ ಗೌರವ ಡಾಕ್ಟರೇಟ್



ಗೋವಿಂದ ರಾಜನ್



ಪ್ರಶಾಂತ್ ಪ್ರಕಾಶ್

ಮೈಸೂರು: ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಬಯೋಕೆಮಿಸ್ಟ್ರಿ ವಿಭಾಗದ ಗೌರವ ಪ್ರಾಧ್ಯಾಪಕ ಡಾ. ಗೋವಿಂದರಾಜನ್ ಪದ್ಮನಾಭನ್ ಹಾಗೂ ರಾಜ್ಯ ಸರ್ಕಾರದ ನವೋದ್ಯಮ ವಿಷನ್ ಗ್ರೂಪ್ ಮುಖ್ಯಸ್ಥರಾಗಿದ್ದ ಪ್ರಶಾಂತ್ ಪ್ರಕಾಶ್ ಅವರಿಗೆ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರಕಟಿಸಿದೆ.

‘ಸೆ.7ರಂದು ಇಲ್ಲಿನ ಕ್ರಾಫರ್ಡ್ ಭವನದಲ್ಲಿ ನಡೆಯಲಿರುವ 101ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದವಿ ಪ್ರದಾನ ಮಾಡುವರು. ನವದೆಹಲಿಯ ಡಿಎಸ್‌ಐಆರ್ ಕಾರ್ಯದರ್ಶಿ ಹಾಗೂ ಸಿಎಸ್‌ಐಆರ್ ಮಹಾನಿರ್ದೇಶಕ ಪ್ರೊ. ಶೇಖರ್ ಸಿ.ಮಂಡೆ ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ’ ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಗೋವಿಂದರಾಜನ್ ತಮಿಳುನಾಡಿನವರಾಗಿದ್ದು, ಪದ್ಮಭೂಷಣ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಬೆಂಗಳೂರಿನ ಐಐಎಸ್ಸಿ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಆಕ್ಸೆಲ್ ಇಂಡಿಯಾದ ಸಂಸ್ಥಾಪಕ ಪಾರ್ಟನರ್ ಕೂಡ ಆಗಿರುವ ಪ್ರಶಾಂತ್, ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ’ ಎಂದು ಮಾಹಿತಿ ನೀಡಿದರು.

ಒಳನೋಟ

ಬೇಕಿದೆ ಪೂರಕ ಸಿದ್ಧತೆ

ಬೆಂಗಳೂರು: ‘ಉಸಿರಾಡಲಿ ಆಮ್ಲಜನಕ ಘಟಕ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಸೆ.5) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ಅನುಭವಿ ಸಿಬ್ಬಂದಿ ನೇಮಕಗೊಳಿಸಿ’



‘ಕೋವಿಡ್ ಎರಡನೇ ಅಲೆಯಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯಿಂದ ಹಲವರು ಸಮಸ್ಯೆ ಎದುರಿಸಿದರು. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಬಗ್ಗೆ ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ. ಹಾಗಾಗಿ, ಮೊದಲ ಮತ್ತು ಎರಡನೇ ಅಲೆಯಲ್ಲಿನ ತಪ್ಪುಗಳು ಮೂರನೇ ಅಲೆಯಲ್ಲಿ ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಆರೋಗ್ಯ ವ್ಯವಸ್ಥೆಯ ಸುಧಾರಣೆಗೆ ಇದು ಸೂಕ್ತ ಸಮಯ. ಆಮ್ಲಜನಕ ಉತ್ಪಾದನಾ ಘಟಕಗಳಿಂದ ಸಿಲಿಂಡರ್‌ಗಳು ಸಮರ್ಪಕವಾಗಿ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು. ಆಸ್ಪತ್ರೆಗಳಲ್ಲಿನ ವೈದ್ಯಕೀಯ ಆಮ್ಲಜನಕ ಶೇಖರಣಾ ಘಟಕಗಳ ನಿರ್ವಹಣೆಗೆ ಅನುಭವಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು.’

ಕುಮಾರ ಎಸ್. ರಾಠೋಡ, ಯಾದಗಿರಿ

‘ಆಮ್ಲಜನಕ ಉತ್ಪಾದನೆ ಹೆಚ್ಚಿಸಿ’



‘ಆಮ್ಲಜನಕದ ಘಟಕಗಳು ಉಸಿರಾಡಿದರೆ ಮಾತ್ರ ಸಂಭಾವ್ಯ ಮೂರನೇ ಅಲೆಯಲ್ಲಿ ಅಪಾಯವನ್ನು ತಡೆಗಟ್ಟಲು ಸಾಧ್ಯವಿದೆ. ಮೊದಲ ಮತ್ತು ಎರಡನೆ ಅಲೆಯಿಂದ ಸರ್ಕಾರವು ಪಾಠ ಕಲಿತಿದೆ ಎಂದು ಭಾವಿಸಿದ್ದೇನೆ. ಎರಡನೇ ಅಲೆಯಲ್ಲಿ ಅನೇಕರು ವೈದ್ಯಕೀಯ ಆಮ್ಲಜನಕ ಸಿಗದೆ ಬೀದಿ ಬೀದಿಯಲ್ಲಿ ನರಳಾಟ ನಡೆಸಿದ್ದನ್ನು ನೋಡಿದ್ದೇವೆ. ಹಾಗಾಗಿ, ವೈದ್ಯಕೀಯ ಆಮ್ಲಜನಕ ಘಟಕಗಳು ತೋರಿಕೆಯ ಬದಲಾಗಿ ಜೀವ ಉಳಿಸುವ ಸಾಧನಗಳಾಗಿ ಕೆಲಸ ಮಾಡಬೇಕು. ಆಮ್ಲಜನಕದ ಕೃತಕ ಅಭಾವ ಸೃಷ್ಟಿಸುವ ಜಾಲವನ್ನು ನಿಯಂತ್ರಿಸಬೇಕು. ರಾಜ್ಯದಲ್ಲಿ ಆಮ್ಲಜನಕ ಸಾಗಣೆಯ ಟ್ಯಾಂಕರ್‌ಗಳ ಕೊರತೆಯನ್ನೂ ನಿವಾರಿಸಬೇಕು. ಎಲ್ಲ ತಾಲ್ಲೂಕುಗಳಲ್ಲಿ ವಾರ್ ರೂಂ ಸ್ಥಾಪಿಸಿ, ಅದನ್ನು ಕ್ರಿಯಾಶೀಲಗೊಳಿಸಬೇಕು.’

ಗುರುರಾಜ ದೇಸಾಯಿ, ಕೊಪ್ಪಳ

‘ಪ್ರಾಣವಾಯು ಜೀವ ಉಳಿಸಲಿ’



‘ಕೋವಿಡ್ ಎರಡನೇ ಅಲೆಯಲ್ಲಿ ಹಲವೆಡೆ ಆಮ್ಲಜನಕ ಶೇಖರಣಾ ಘಟಕವಿದ್ದರೂ ಸೋಂಕಿತರಿಗೆ ನೆರವಾಗಲಿಲ್ಲ. ಅಗತ್ಯ ಪ್ರಮಾಣದಲ್ಲಿ ಆಮ್ಲಜನಕ ಘಟಕಗಳಿಗೆ ಪೂರೈಕೆಯಾಗದಿರುವುದರಿಂದ ಹಲವರ ಜೀವಕ್ಕೆ ಕುತ್ತು ಎದುರಾಯಿತು. ಸರ್ಕಾರವು ಆಮ್ಲಜನಕ ಘಟಕಗಳನ್ನು ಸ್ಥಾಪಿಸಿ, ಕೈ ಕಟ್ಟಿ ಕುಳಿತರೆ ಸಾಲದು. ಮರುಪೂರಣ ಏಜೆನ್ಸಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಆಮ್ಲಜನಕ ಉತ್ಪಾದನೆ ಹಾಗೂ ಸಂಗ್ರಹ ಘಟಕವನ್ನು ಸ್ಥಾಪಿಸಬೇಕು. ಗ್ರಾಮೀಣ ಪ್ರದೇಶಗಳಿಗೆ ಕೂಡ ವೈದ್ಯಕೀಯ ಆಮ್ಲಜನಕ ಸಮರ್ಪಕವಾಗಿ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು.’

ಸಿ. ಪ್ರಕಾಶ್, ಮಂಡ್ಯ


‘ಘಟಕಗಳನ್ನು ನಿರ್ವಹಣೆ ಮಾಡಿ’



‘ಆಮ್ಲಜನಕ ಘಟಕಗಳನ್ನು ಸ್ಥಾಪಿಸಿದರೆ ಸಾಲದು, ಅದನ್ನು ಸೂಕ್ತವಾಗಿ ನಿರ್ವಹಣೆ ಮಾಡಬೇಕು. ಎರಡನೇ ಅಲೆಯಲ್ಲಿ ಆದ ದುರಂತ ಘಟನೆಗಳು ಮತ್ತೆ ಮರುಕಳಿಸದಂತೆ ನೋಡಿಕೊಳ್ಳಬೇಕು. ಅಧಿಕಾರಿಗಳು ಸಹ ಒಬ್ಬರ ಮೇಲೆ ಮತ್ತೊಬ್ಬರು ಗೂಬೆ ಕೂರಿಸುವುದನ್ನು ಬಿಡಬೇಕು. ಪ್ರತಿ ಜಿಲ್ಲೆಯಲ್ಲೂ ಆಮ್ಲಜನಕ ಘಟಕಗಳನ್ನು ಸ್ಥಾಪಿಸಬೇಕು. ಅದರ ನಿರ್ವಹಣೆಗೆ ವಿಶೇಷ ಅಧಿಕಾರಿಯನ್ನು ನೇಮಿಸಬೇಕು. ಸರ್ಕಾರವು ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದನಾ ಘಟಕಗಳನ್ನು ನಿರ್ಮಿಸಬೇಕು.’

ರಾಜೇಶ್ವರಿ, ಸಿಂಧನೂರು

‘ಮರುಪೂರಣ ಘಟಕ ಸ್ಥಾಪಿಸಿ’



‘ವೈದ್ಯಕೀಯ ಆಮ್ಲಜನಕ ಮರುಪೂರಣ ಘಟಕಗಳನ್ನು ಸ್ಥಾಪಿಸುವ ಮೂಲಕ ಕೊರತೆ ಯಾಗದಂತೆ ನೋಡಿಕೊಳ್ಳಬೇಕು. ಕೊರೊನಾ ಸೋಂಕು ನೇರವಾಗಿ ಶ್ವಾಸಕೋಶದ ಮೇಲೆ ದಾಳಿ ಮಾಡುವುದರಿಂದ ಅಸ್ವಸ್ಥನಾದ ವ್ಯಕ್ತಿ ಚೇತರಿಸಿಕೊಳ್ಳಲು ವೈದ್ಯಕೀಯ ಆಮ್ಲಜನಕ ಅತ್ಯಗತ್ಯ. ಹಾಗಾಗಿ, ಸಂಭಾವ್ಯ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಗಳಲ್ಲಿ ಸಿಲಿಂಡರ್‌ಗಳನ್ನು ಭರ್ತಿ ಮಾಡುವ ಮರುಪೂರಣ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕು.’

ಜಯಶಂಕರ್ ಕೆ. ಎಸ್., ಮಂಡ್ಯ

‘ತಪ್ಪನ್ನು ಮತ್ತೆ ಮಾಡದಿರಿ’



‘ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಾಗ ವೈದ್ಯಕೀಯ ಆಮ್ಲಜನಕವು ‘ಪ್ರಾಣವಾಯು’ ಎಂಬುದು ನಿರೂಪಿತವಾಗಿದೆ. ಜೀವ ಉಳಿಸಿಕೊಳ್ಳಲು ಜನರು ಪರದಾಡಿದ ರೀತಿ ಈಗಲೂ ಕಣ್ಣ ಮುಂದಿದೆ. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ದುರಂತದ ಕರಾಳ ನೆನಪು ಕಾಡುತ್ತಿದೆ. ಮೂರನೇ ಅಲೆಯ ಸಂದರ್ಭದಲ್ಲಿ ಇಂತಹ ತೊಂದರೆ ಎದುರಾಗದ ರೀತಿಯಲ್ಲಿ ಸರ್ಕಾರ ಹೆಚ್ಚಿನ ಗಮನ ಹರಿಸಬೇಕು.’

ಅಬ್ದುಲ್ ರಝಾಕ್ ಮಥಾಳ, ಮಂಗಳೂರು

ನಿಧನ ವಾರ್ತೆ

ಸಾಹಿತಿ ರಾಮಚಂದ್ರ ಪಾಟೀಲ



ಧಾರವಾಡ: ಕನ್ನಡ ಸಾಹಿತ್ಯ ಲೋಕದಲ್ಲಿ ‘ಸತ್ಯಾಶ್ರಯ’ ಎಂಬ ಕಾವ್ಯನಾಮದಿಂದ ಪರಿಚಿತರಾಗಿದ್ದ ಸಾಹಿತಿ ಪ್ರೊ. ರಾಮಚಂದ್ರ ಪಾಟೀಲ (82) ಭಾನುವಾರ ಶಿವಗಿರಿಯ ಸ್ವಗೃಹದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಕಗಲಗೊಂಬ ಗ್ರಾಮದ ಅವರು, ಸುಮಾರು 50 ವರ್ಷಗಳಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಕಾವ್ಯ, ಕಥೆ, ನಾಟಕ, ಜೀವನ ಚರಿತ್ರೆ, ರೂಪಕ, ಮಕ್ಕಳ ಸಾಹಿತ್ಯ, ಸಂಪಾದನೆ ಸೇರಿದಂತೆ ಹಲವು ಪ್ರಕಾರದ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ‘ಜೀವನ ಶಿಕ್ಷಣ’ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಅವರು ಬರೆದ ವಿವಿಧ ರೂಪಕಗಳು ಹಾಗೂ ರೇಡಿಯೊ ನಾಟಕಗಳು ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಗೊಂಡಿವೆ.

ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಯಕ್ಷಗಾನ ಭಾಗವತ ಕೃಷ್ಣ ಭಂಡಾರಿ ನಿಧನ



ಹೊನ್ನಾವರ (ಉತ್ತರ ಕನ್ನಡ): ಪ್ರಸಿದ್ಧ ಯಕ್ಷಗಾನ ಭಾಗವತ, ತಾಲ್ಲೂಕಿನ ಗುಣವಂತೆಯ ಕೃಷ್ಣ ಭಂಡಾರಿ (61) ಅನಾರೋಗ್ಯದಿಂದ ಸ್ವಗೃಹದಲ್ಲಿ ಶನಿವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಕೆರೆಮನೆ ಮಹಾಬಲ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಂಭು ಹೆಗಡೆ ಮೊದಲಾದ ಮೇರು ಕಲಾವಿದರೊಂದಿಗೂ ಅವರು ರಂಗದಲ್ಲಿ ತಾಳದ ಸೂತ್ರ ಹಿಡಿದಿದ್ದರು. ಅವರ ವೃತ್ತಿ ಮೇಳ ಹಾಗೂ ಬಯಲಾಟ ಎರಡೂ ಕಡೆಗಳಲ್ಲಿ ಬೇಡಿಕೆಯ ಭಾಗವತರಾಗಿದ್ದರು.

ಹಾಡುಗಾರಿಕೆಯೊಂದಿಗೆ ಮದ್ದಲೆ ಹಾಗೂ ಚಂಡೆವಾದನಗಳನ್ನೂ ಬಲ್ಲವರಾಗಿದ್ದರು. ಬಣ್ಣ ಹಚ್ಚಿ, ಗೆಜ್ಜೆ ಕಟ್ಟಿ ಮುಮ್ಮೇಳದ ಕಲಾವಿದರಾಗಿಯೂ ಅನುಭವ ಹೊಂದಿದ್ದರು. ಶಿವರಾಮ ಕಾರಂತರ ಗರಡಿಯಲ್ಲಿ ಪಳಗಿದ್ದ ಅವರು, ಕೆರೆಮನೆ ಮಹಾಬಲ ಹೆಗಡೆ ಅವರಿಂದ ಯಕ್ಷಗಾನದ ಹಲವು ಮಟ್ಟುಗಳನ್ನು ಕಲಿತಿದ್ದರು.

ಕೆರೆಮನೆ ಮೇಳದ ಭಾಗವತರಾಗಿ ಫ್ರಾನ್ಸ್, ಸ್ಪೇನ್ ಮೊದಲಾದ ಐರೋಪ್ಯ ರಾಷ್ಟ್ರಗಳ ತಿರುಗಾಟ ಕೈಗೊಂಡಿದ್ದರು. ಅವರು, ಕಲಾಸೇವೆಗಾಗಿ ರಾಜ್ಯ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ ಪುರಸ್ಕಾರಗಳಿಗೂ ಭಾಜನರಾಗಿದ್ದರು.

ಅಂತ್ಯಕ್ರಿಯೆಯು ಗುಣವಂತೆಯಲ್ಲಿ ಭಾನುವಾರ ನಡೆಯಿತು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald--Prajavani Relief Trust’ ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.fnc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಸಮಾಜಮುಖಿ ಪ್ರಯತ್ನ



‘ಪ್ರಜಾವಾಣಿ’ ಪತ್ರಿಕೆಯ ಶೈಕ್ಷಣಿಕ ನೆರವು ನಿಧಿಯು ನನ್ನ ಶೈಕ್ಷಣಿಕ ಬದುಕಿಗೆ ಆಧಾರ ಸ್ತಂಭವಾಯಿತು.

ಶೈಕ್ಷಣಿಕ ನಿಧಿ ಹಣದಲ್ಲಿ ಬಸ್ ಪಾಸ್ ಶುಲ್ಕ ಪಾವತಿಸಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಬಡತನದ ಕಾರಣಕ್ಕೆ ಶಿಕ್ಷಣ ಮೊಟಕುಗೊಳಿಸುವ ಪರಿಸ್ಥಿತಿಯಿದೆ. ಅಂತಹ ಪ್ರತಿಭಾವಂತರನ್ನು ಗುರುತಿಸಿ ಅವರ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುತ್ತಿರುವ ಪತ್ರಿಕೆಯ ಸಮಾಜಮುಖಿ ಪ್ರಯತ್ನ ಶ್ಲಾಘನೀಯ.

ಕೆ.ಚರಣ್, ಕೋಲಾರ

ಓದಿಗೆ ದಾರಿದೀಪ



ಕೂಲಿ ಕೆಲಸ ಮಾಡುವ ತಂದೆಗೆ ಕುಟುಂಬ ನಿರ್ವಹಣೆ ಮಾಡುವುದೇ ಕಷ್ಟ. ಮೂವರು ಸಹೋದರಿಯರು ಓದುತ್ತಿದ್ದು, ಅವರ ಶೈಕ್ಷಣಿಕ ವೆಚ್ಚದ ಜತೆಗೆ ನನ್ನ ಓದಿಗೂ ಹಣ ಹೊಂದಿಸುವುದು ತಂದೆಗೆ ಸುಲಭವಲ್ಲ. ಎಸ್ಸೆಸ್ಸೆಲ್ಸಿಯಲ್ಲಿ ಶೇ 93ರಷ್ಟು ಅಂಕ ಗಳಿಸಿದ ನನಗೆ ವೈದ್ಯೆ ಆಗಬೇಕೆಂಬ ಕನಸಿದೆ. ಆದರೆ, ಹಣಕಾಸು ಮುಗ್ಗಟ್ಟಿನ ಕಾರಣಕ್ಕೆ ಶಿಕ್ಷಣ ಮೊಟಕುಗೊಳಿಸಲು ನಿರ್ಧರಿಸಿದ್ದೆ. ಕಷ್ಟದ ಪರಿಸ್ಥಿತಿಯಲ್ಲಿ ‘ಪ್ರಜಾವಾಣಿ’ಯು ಹಣಕಾಸು ನೆರವು ನೀಡಿ ನನ್ನ ಓದಿಗೆ ದಾರಿದೀಪವಾಗಿದೆ. ಪತ್ರಿಕೆ ನೀಡಿದ ಹಣದಲ್ಲಿ ಪುಸ್ತಕಗಳನ್ನು ಖರೀದಿಸಿದೆ.

ಎಚ್.ಎಂ.ಬಿಂದುಶ್ರೀ, ಹುಳದೇನಹಳ್ಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ

‘ಯಾರದ್ದೋ ಮಾತು ಕೇಳಿ 3ನೇ ಪೀಠ’



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಹುಬ್ಬಳ್ಳಿ: ‘ಯಾರದ್ದೋ ಮಾತು ಕೇಳಿ ಪಂಚಮ ಸಾಲಿ ಸಮುದಾಯದ ಮೂರನೇ ಪೀಠ ಸ್ಥಾಪನೆಗೆ ಕೆಲವರು ಮುಂದಾಗಿರಬಹುದು. ಯಾರು ಏನೇ ಮಾಡಿದರೂ ಮೀಸಲಾತಿ ಹೋರಾಟ ಮಾತ್ರ ನಿಲ್ಲದು’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮೀಸಲಾತಿ ಹೋರಾಟ ಹತ್ತಿಕ್ಕಲು ಕೆಲವರು ಷಡ್ಯಂತ್ರ ನಡೆಸುತ್ತಿದ್ದಾರೆ. ಪಾದಯಾತ್ರೆ ಸಂದರ್ಭ ಅನೇಕ ಮಠಾಧೀಶರು ಸಹ ತೊಂದರೆ ನೀಡಿದ್ದರು. ನಂತರ ಅವರೇ ಬೆಂಬಲ ನೀಡಿ ಶಕ್ತಿ ತುಂಬಿದರು. ಇದೀಗ ಮೂರನೇ ಪೀಠದ ಹೆಸರಿನಲ್ಲಿ ಷಡ್ಯಂತ್ರ ಮಾಡುತ್ತಿರುವವರ ಮನಸ್ಸು ಪರಿವರ್ತನೆ ಮಾಡಿ ಅವರನ್ನು ಹೋರಾಟದ ಭಾಗವಾಗಿ ಬಳಸಿಕೊಳ್ಳುತ್ತೇವೆ’ ಎಂದರು.

‘ಮೀಸಲಾತಿ ದೊರೆಯುವ ತನಕ ರಾಜಕೀಯದ ಬಗ್ಗೆ ಯಾವುದೇ ಮಾತು ಆಡುವುದಿಲ್ಲ. ಹಾನಗಲ್ ಉಪ ಚುನಾವಣೆ ಘೋಷಣೆಯಾಗುವ ಪೂರ್ವವೇ ಮೀಸಲಾತಿ ಬೇಡಿಕೆ ಈಡೇರುವ ವಿಶ್ವಾಸವಿದೆ. ಸಚಿವ ಸಿ.ಸಿ. ಪಾಟೀಲ ಸಂಧಾನಕಾರರಾಗಿ ಕೆಲಸ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ನಮ್ಮವರೇ ಆಗಿದ್ದಾರೆ. ಕಾದು ನೋಡೋಣ’ ಎಂದು ಹೇಳಿದರು.

ಗ್ರಾ.ಪಂ ನೌಕರರಿಗೆ ಬಡ್ತಿ ಭಾಗ್ಯ

ಒಂದನೇ ಪುಟದಿಂದ

ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್–2) ಮತ್ತು ಎಸ್‌ಡಿಎಎ ಹುದ್ದೆಗಳಿಗೆ ಬಿಲ್ ಕಲೆಕ್ಟರ್, ಅಕೌಂಟೆಂಟ್, ಕ್ಲರ್ಕ್, ಟೈಪಿಸ್ಟ್, ಕ್ಲರ್ಕ್ ಕಂ ಡೇಟಾ ಎಂಟ್ರಿ ಆಪರೇಟರ್ ವೃಂದದ ಹುದ್ದೆಗಳಿಂದ ನೇರ ನೇಮಕಾತಿ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ (ಆರ್‌ಡಿಪಿಆರ್) ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ.

ಈ ರೀತಿಯ ನೇರ ನೇಮಕಾತಿಗೆ ಅವಕಾಶ ಕಲ್ಪಿಸಲು ‘ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು–2008’ಕ್ಕೆ ತಿದ್ದುಪಡಿ ತರಬೇಕಾಗಿದೆ. ಆದರೆ, ತಿದ್ದುಪಡಿಗೆ ಹೆಚ್ಚಿನ ಕಾಲಾವಕಾಶ ಬೇಕಾಗಿರುವುದರಿಂದ ಅದರ ಬದಲು ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ರೂಪಿಸಲಾಗಿದೆ.

ನೇಮಕಾತಿ ಹೇಗೆ?: ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ಆರು ವರ್ಷ ಕೆಲಸ ಮಾಡಿದ ಸಿಬ್ಬಂದಿ ನೇರ ನೇಮಕಾತಿಗೆ ಅರ್ಹತೆ ಪಡೆಯಲಿದ್ದಾರೆ. ಈ ರೀತಿ ಬಡ್ತಿಗೆ ಅರ್ಹತೆ ಪಡೆದವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ 100 ಅಂಕಗಳ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ.

ಗ್ರಾಮ ಪಂಚಾಯಿತಿ ಕಾರ್ಯದರ್ಶಿ (ಗ್ರೇಡ್–2) ವೃಂದದ ಶೇ 70ರಷ್ಟು ಹುದ್ದೆಗಳನ್ನು 3:2 ಅನುಪಾತದಲ್ಲಿ ನೇಮಕಾತಿಗೆ ಅವಕಾಶ ನೀಡಲಾಗಿದೆ. ಅಂದರೆ, ಮೊದಲ ಮೂರು ಹುದ್ದೆಗಳನ್ನು ಬಿಲ್ ಕಲೆಕ್ಟರ್ ವೃಂದದ ನೌಕರರಿಂದ, ನಂತರ ಎರಡು ಹುದ್ದೆಗಳನ್ನು ಅಕೌಂಟೆಂಟ್, ಕ್ಲರ್ಕ್, ಟೈಪಿಸ್ಟ್, ಕಂ ಡೇಟಾ ಎಂಟ್ರಿ ಆಪರೇಟರ್ ವೃಂದದಿಂದ ನೇಮಕಾತಿ ಮಾಡಿಕೊಳ್ಳಬೇಕು.

ಸಿಬ್ಬಂದಿಯ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ, ಮೀಸಲಾತಿ ನಿಯಮ ಅನ್ವಯ ಆಯ್ಕೆ ಪಟ್ಟಿ ಪ್ರಕಟಿಸಬೇಕು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಉಳಿದ ಶೇ 30ರಷ್ಟು ಖಾಲಿ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಶೇ 50ರಷ್ಟು ಹುದ್ದೆಗಳನ್ನು 1:1 ಅನುಪಾತದಲ್ಲಿ ನೇಮಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಅಂದರೆ, ಮೊದಲ ಖಾಲಿ ಹುದ್ದೆಯನ್ನು ಬಿಲ್ ಕಲೆಕ್ಟರ್ ವೃಂದಿಂದ, ಎರಡನೇ ಹುದ್ದೆಯನ್ನು ಅಕೌಂಟೆಂಟ್, ಕ್ಲರ್ಕ್, ಟೈಪಿಸ್ಟ್, ಕಂ ಡೇಟಾ ಎಂಟ್ರಿ ಆಪರೇಟರ್ ವೃಂದದಿಂದ ನೇಮಕಾತಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಉಳಿದ ಶೇ 50ರಷ್ಟು ಖಾಲಿ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಗದಗ ಜಿಲ್ಲೆಯ ಹಲವೆಡೆ ಶಾಲೆಯತ್ತ ನಡಿಗೆ ಅನಿವಾರ್ಯ

ಕಾನನದಂಚಿನ ವಿದ್ಯಾರ್ಥಿಗಳಿಗೆ ತಪ್ಪದ ತೊಂದರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಗುಡ್ಡಗಾಡು ಪ್ರದೇಶಗಳೇ ಅಧಿಕವಾಗಿರುವ ಉತ್ತರ ಕನ್ನಡ ಜಿಲ್ಲೆಯ ಕೆಲವು ತಾಲ್ಲೂಕುಗಳ ವಿದ್ಯಾರ್ಥಿಗಳು, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಾನನದಂಚಿನ ಗ್ರಾಮಗಳ ಮಕ್ಕಳು, ಅರೆ ಮಲೆನಾಡು ಭಾಗವಾದ ಧಾರವಾಡ ಜಿಲ್ಲೆಯ ಅಳ್ನಾವರ, ಗದಗ ಜಿಲ್ಲೆಯ ನರಗುಂದದ ಗಡಿಗ್ರಾಮ ಲಖಮಾಪುರದ ವಿದ್ಯಾರ್ಥಿಗಳು ಇಂದಿಗೂ ಪ್ರತಿನಿತ್ಯ ಶಾಲಾ–ಕಾಲೇಜು ತಲುಪಲು ನಡೆದುಕೊಂಡೇ ಹೋಗಬೇಕಾದ ಸ್ಥಿತಿ ಇದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಅಗಸೂರು ಪ್ರೌಢಶಾಲೆಗೆ ಮಾರುಗದ್ದೆ, ಮಕ್ಕಿಗದ್ದೆ ಭಾಗದ 40ಕ್ಕೂ ಅಧಿಕ ಮಕ್ಕಳು ಎಂಟು– ಹತ್ತು ಕಿ.ಮೀ ದೂರದಿಂದ ನಡೆದುಕೊಂಡು ಬರುತ್ತಾರೆ. ಸುಂಕಸಾಳ, ಹಿಲ್ಲೂರು, ಅಚವೆ ಮುಂತಾದ ಪ್ರದೇಶಗಳಲ್ಲೂ ಈ ಸಮಸ್ಯೆಯಿದೆ.

ಕಾರವಾರ ತಾಲ್ಲೂಕಿನ ಕೆರವಡಿ, ನಗೆ, ಕೋವೆ, ನೀಲಾವು ಗ್ರಾಮಗಳಲ್ಲೂ ಹತ್ತಾರು ವಿದ್ಯಾರ್ಥಿಗಳು ಕಿಲೋಮೀಟರ್‌ಗಟ್ಟಲೆ ದೂರದಿಂದ ಕಾಲ್ನಡಿಗೆಯಲ್ಲೇ ಬರುತ್ತಾರೆ. ಕುಮಟಾದ ಸಂತೆಗುಳಿಯಲ್ಲಿರುವ ಉರ್ದು ಶಾಲೆಗೆ ಚಂದಾವರ ಕಡೆಯಿಂದ ಮಕ್ಕಳು ನಡಿಗೆಯಲ್ಲೇ ತಲುಪುತ್ತಾರೆ.

ಮುಂಡಗೋಡ ತಾಲ್ಲೂಕಿನ ಚವಡಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾನಳ್ಳಿ ಗ್ರಾಮದಿಂದ ನಿತ್ಯವೂ ಮೂರು ಕಿಲೋಮೀಟರ್ ನಡೆದುಕೊಂಡು ವಿದ್ಯಾರ್ಥಿಗಳು ಅಂದಲಗಿ ಪ್ರೌಢಶಾಲೆಗೆ ಹೋಗುತ್ತಾರೆ. ಇದು ಕಾಡಿನ ಹಾದಿ ಆಗಿದ್ದು, ಕಾಡಾನೆಗಳು ಹಾಗೂ ವನ್ಯ ಪ್ರಾಣಿಗಳು ಆಗಾಗ ಎದುರಾಗುತ್ತವೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ವಿ.ಎಸ್.ಪಾಟೀಲ ಅವರ ಸ್ವಗ್ರಾಮ ಅಂದಲಗಿ ಸನಿಹದಲ್ಲಿಯೇ ಇದೆ.

ಸಿದ್ದಾಪುರ ತಾಲ್ಲೂಕಿನಲ್ಲಿ ಉಂಚಾಪುರ, ಹೆಗ್ಗರಣಿ ಭಾಗದ ಕೆಲವು ಪ್ರಾಥಮಿಕ ಶಾಲೆಗಳಿಗೆ 5-6 ಕಿ.ಮೀ ದೂರದಿಂದ ನಡೆದು ಬರುವ ಮಕ್ಕಳಿದ್ದಾರೆ. ಪ್ರೌಢಶಾಲೆಗಳಿಗೆ ಹತ್ತಾರು ಕಿ.ಮೀ ದೂರದಿಂದ ಸೈಕಲ್ ಮೇಲೆ ಬರುತ್ತಾರೆ.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಾಡಂಚಿನ ಗ್ರಾಮಗಳಾದ ಗವ್ವಾಳಿ, ಕೊಂಗಳಾ, ದೇಗಾಂವ, ಅಬನಾಳಿ, ಡೊಂಗರಗಾಂವ, ಮಾನ, ಸಡಾ, ಹೊಳಂದ, ಪಾಲಿ, ವರ್ಕಡ, ಮೊಹಿಶೇತ ಸೇರಿದಂತೆ 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಿವೆ. ಅಲ್ಲಿ 5ನೇ ತರಗತಿ ಪೂರೈಸಿದ ಮಕ್ಕಳು ಮುಂದಿನ ಶಿಕ್ಷಣಕ್ಕಾಗಿ ತಮ್ಮೂರಿನಿಂದ ಸರಾಸರಿ 4ರಿಂದ 8 ಕಿ.ಮೀ. ಕ್ರಮಿಸಬೇಕಾದ ಅನಿವಾರ್ಯತೆ ಇದೆ. ಕಣಕುಂಬಿ, ಜಾಂಬೋಟಿ, ಶಿರೋಲಿ, ಲೋಂಡಾ ಗ್ರಾಮಗಳಲ್ಲಿಯ ಪ್ರೌಢಶಾಲೆಗಳಿಗೆ ಈ ಮಕ್ಕಳು ನಡೆದುಕೊಂಡೇ ಕ್ರಮಿಸಿ ತಮ್ಮ ಶಿಕ್ಷಣ ಪೂರೈಸುತ್ತಿದ್ದಾರೆ.

ಕಾಲೇಜು ಶಿಕ್ಷಣಕ್ಕಾಗಿ ನಂದಗಡ, ಖಾನಾಪುರ, ಬೆಳಗಾವಿ ಅಥವಾ ಉತ್ತರ ಕನ್ನಡ ಜಿಲ್ಲೆಯ ರಾಮನಗರಕ್ಕೆ ಹೋಗಬೇಕು. ಅವರೂ ಸರಾಸರಿ 4–5 ಕಿ.ಮೀ ನಡೆಯಬೇಕಾಗುತ್ತದೆ. ಮುಖ್ಯ ರಸ್ತೆಗೆ ಬಂದು ಬಸ್ ಹಿಡಿಯಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೊರತುಪಡಿಸಿದರೆ ಇತರ ಸಮುದಾಯದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲ.

ಕೆಲವೆಡೆ ಕಾಲೇಜು ಸಮಯಕ್ಕೆ ಹೊಂದಾಣಿಕೆ ಇಲ್ಲ. ಇದರಿಂದಲೂ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಅಥಣಿ ತಾಲ್ಲೂಕಿನ ತೆಲಸಂಗದಲ್ಲಿರುವ ಪದವಿ ಕಾಲೇಜಿಗೆ ಕನ್ನಾಳದವರು 4 ಕಿ.ಮೀ., ಬನ್ನೂರದಿಂದ 6 ಕಿ.ಮೀ., ಹಾಲಳ್ಳಿಯಿಂದ 6 ಕಿ.ಮೀ., ಫಡತರವಾಡಿ 4 ಕಿ.ಮೀ ಸೈಕಲ್, ದ್ವಿಚಕ್ರವಾಹನ ಅಥವಾ ಪರ್ಯಾಯ ವ್ಯವಸ್ಥೆ ಮೂಲಕ ಬರುವ ಸ್ಥಿತಿ ಇದೆ. ಕೆಲವರು ನಡೆದುಕೊಂಡೇ ಬರುತ್ತಾರೆ. ಚಿಕ್ಕೋಡಿ ಪಟ್ಟಣದಿಂದ 3 ಕಿ.ಮೀ ದೂರದಲ್ಲಿರುವ ಸರ್ಕಾರಿ ಕಾಲೇಜಿನ ಸಮಯಕ್ಕೆ ತೆರಳಲು ಬಸ್ ಸೌಲಭ್ಯವಿಲ್ಲ. ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಕಿವಡಬೈಲ್ ಮತ್ತು ದೂಪದಾಳ ಗ್ರಾಮದ ಮಕ್ಕಳು ಶಾಲೆಗೆ ಹೋಗಲು ಸುಮಾರು 4 ಕಿ.ಮೀ ನಡೆಯಬೇಕು. ಈ ಗ್ರಾಮದ ಹಲವು ಮಕ್ಕಳು ಶಾಲೆ ಸಮೀಪ ಇರುವ ತಮ್ಮ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದು ಓದುತ್ತಿದ್ದರೆ, ಕೆಲವರು ಹಾಸ್ಟೆಲ್ ಸೇರಿದ್ದಾರೆ.



ಮುಂಡಗೋಡ ತಾಲ್ಲೂಕಿನ ಚವಡಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬ್ಯಾನಳ್ಳಿ ಗ್ರಾಮದ ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿಯೇ ಮೂರು ಕಿ.ಮೀ ನಿತ್ಯವೂ ಕಾಡಿನ ಹಾದಿಯಲ್ಲಿ ಸಾಗುತ್ತ ಶಾಲೆಗೆ ಹೋಗುತ್ತಾರೆ

ಕಲಿಕೆಯ ಅಂಗಳಕ್ಕೆ ಕಾಲ ಹಾದಿ

‘ಗುಡ್ಡಗಾಡು ಪ್ರದೇಶ, ದೂರ ದೂರ ಜನವಸತಿ, ಒಂದೊಂದು ಊರಿನಲ್ಲಿ ನಾಲ್ಕೈದು ವಿದ್ಯಾರ್ಥಿಗಳು. ಅವರಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸುವುದೂ ಕಷ್ಟ. ಆದರೂ ವಿದ್ಯಾರ್ಥಿಗಳು ಶಾಲೆಗೆ ಗೈರಾಗುವುದಿಲ್ಲ’
ಹರೀಶ ಗಾಂವ್ಕರ್, ಉಪನಿರ್ದೇಶಕ, ಕಾರವಾರ ಶೈಕ್ಷಣಿಕ ಜಿಲ್ಲೆ

‘ಗಡಿಗ್ರಾಮ ಲಖಮಾಪುರಕ್ಕೆ ಹಿಂದೊಮ್ಮೆ ಬಸ್ ವ್ಯವಸ್ಥೆ ಇತ್ತು. ಜನರು ಬಸ್ ಬದಲು ಟಂಟಂ ಅನ್ನೇ ಹೆಚ್ಚು ಬಳಸುತ್ತಿದ್ದ ಕಾರಣ ಕಲೆಕ್ಷನ್ ಇಲ್ಲದೇ ಬಸ್ ಸಂಚಾರ ಸ್ಥಗಿತಗೊಳಿಸಲಾಯಿತು’
ಜಿ.ಐ.ಬಸವಂತಪುರ, ಸಂಚಾರ ನಿಯಂತ್ರಣ ಅಧಿಕಾರಿ, ಗದಗ ವಿಭಾಗ

ಶಿರಸಿ ವಿಭಾಗ ವ್ಯಾಪ್ತಿಯಲ್ಲಿ 250 ಚಾಲಕರ ಕೊರತೆಯಿದೆ. ಗ್ರಾಮೀಣ ಭಾಗದ ಸಾರಿಗೆ ವ್ಯವಸ್ಥೆ ಮೇಲೆ ಇದರಿಂದ ತೊಂದರೆಯಾಗಿದೆ. ಶೀಘ್ರದಲ್ಲಿಯೇ ಬ್ಯಾನಳ್ಳಿ ಗ್ರಾಮಕ್ಕೆ ಬಸ್ ಬಿಡಲು ಕ್ರಮ ಕೈಗೊಳ್ಳಲಾಗುವುದು
ವಿ.ಎಸ್.ಪಾಟೀಲ ಅಧ್ಯಕ್ಷ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಲೋಕೋಪಯೋಗಿ ಸಚಿವರ ಕ್ಷೇತ್ರದಲ್ಲೂ ಪರದಾಟ...

ಗದಗ: ಲೋಕೋಪಯೋಗಿ ಇಲಾಖೆ ಸಚಿವ ಸಿ.ಸಿ.ಪಾಟೀಲ ಪ್ರತಿನಿಧಿಸುವ ನರಗುಂದ ಕ್ಷೇತ್ರದ ಗಡಿಗ್ರಾಮ ಲಖಮಾಪುರದ ಮಕ್ಕಳು ಪ್ರತಿನಿತ್ಯ ಶಾಲೆಗೆ ಮೂರು ಕಿ.ಮೀ ನಡೆಯುವ ಪರಿಸ್ಥಿತಿ ಇದೆ. ಅದೇರೀತಿ, ಗಜೇಂದ್ರಗಡ ತಾಲ್ಲೂಕಿನ ಹೊಸರಾಂಪುರ ಹಾಗೂ ದ್ಯಾಮುಣಸಿ ಮಕ್ಕಳು ಸಹ ನಡೆದೇ ಶಾಲೆಗೆ ಹೋಗುವ ಸ್ಥಿತಿ ಇದೆ.

ಗಡಿಗ್ರಾಮ ಲಖಮಾಪುರಕ್ಕೆ ಬಸ್ ವ್ಯವಸ್ಥೆ ಇಲ್ಲ. ಇಲ್ಲಿನ ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳು ರಾಮದುರ್ಗ ಕ್ರಾಸ್‌ವರೆಗೆ ನಡೆದು ಬಂದು ಬಳಿಕ ಕೊಣ್ಣೂರು, ರಾಮದುರ್ಗ ಅಥವಾ ಸುರೇಬಾನಕ್ಕೆ ತೆರಳುತ್ತಾರೆ.

ಗಜೇಂದ್ರಗಡ ತಾಲ್ಲೂಕಿನ ದ್ಯಾಮುಣಸಿ ಮಕ್ಕಳು ದ್ಯಾಮುಣಸಿ ಹಳ್ಳ ದಾಟಿ ಸೂಡಿವರೆಗೆ ನಡೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಒಂದರಿಂದ ಐದನೇ ತರಗತಿವರೆಗೆ ದ್ಯಾಮುಣಸಿಯಲ್ಲೇ ಶಾಲೆ ಇದೆ. ನಂತರದ ವಿದ್ಯಾಭ್ಯಾಸ ಪಡೆಯಲು ಮಕ್ಕಳು 3 ಕಿ.ಮೀ ದೂರ ನಡೆದು ಸೂಡಿ, ಗಜೇಂದ್ರಗಡ ಬಸ್ ಹಿಡಿಯಬೇಕಾದ ಪರಿಸ್ಥಿತಿ ಇದೆ. ಅದೇರೀತಿ ಹೊಸರಾಂಪುರ ವಿದ್ಯಾರ್ಥಿಗಳಿಗೆ ಬಸ್ ಇಲ್ಲದೇ ರಾಂಪುರ 3 ಕಿ.ಮೀ ನಡೆದುಬರುತ್ತಾರೆ.

‘ಗದಗ ಜಿಲ್ಲೆಯ ದ್ಯಾಮುಣಸಿ ರಸ್ತೆ ತೀವ್ರ ಹದಗೆಟ್ಟಿದ್ದು ಇಲ್ಲಿ ಬಸ್ ಓಡಿಸುವುದು ಕಷ್ಟ’ ಎನ್ನುತ್ತಾರೆ ಗದಗ ವಿಭಾಗ ಸಂಚಾರ ನಿಯಂತ್ರಣಾಧಿಕಾರಿ ಜಿ.ಐ.ಬಸವಂತಪುರ.

ಭೂಮಿಕಾ ಸಾಧನೆ

ಈ ಬಾರಿಯ ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ 625ಕ್ಕೆ 625 ಅಂಕಗಳನ್ನು ಪಡೆದುಕೊಂಡಿರುವ ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಭೂಮಿಕಾ ಕೃಷ್ಣ ನಾಯ್ಕ. ಆಕೆ ತನ್ನ ಮನೆಯಿಂದ ಮುಖ್ಯರಸ್ತೆಗೆ ನಿತ್ಯವೂ ಐದಾರು ಕಿ.ಮೀ ದಟ್ಟವಾದ ಅಡವಿಯಲ್ಲಿ ನಡೆದು ಬರುತ್ತಿದ್ದಳು.

‘ತನಿಖೆ ಮಾಡಲು ಮೌದ್ಗಿಲ್‌ಗೆ ಅಧಿಕಾರ ಕೊಟ್ಟವರು ಯಾರು?’

ಮೈಸೂರು: ‘ಜಿಲ್ಲೆಯ ಭೂಅಕ್ರಮಗಳ ಬಗ್ಗೆ ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಈ ಕುರಿತು ಮತ್ತೊಮ್ಮೆ ತನಿಖೆ ನಡೆಸಲು ಮನೀಶ್ ಮೌದ್ಗಿಲ್ ಅವರಿಗೆ ಅಧಿಕಾರ ಕೊಟ್ಟವರು ಯಾರು?’ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭಾನುವಾರ ಇಲ್ಲಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಐಎಎಸ್ ಅಧಿಕಾರಿಗಳು ದ್ವೇಷದ ರಾಜಕಾರಣ ಮಾಡುತ್ತಿದ್ದು, ತಾವು ಮಾತ್ರ ಪ್ರಾಮಾಣಿಕರು, ಬೇರೆಯವರೆಲ್ಲ ಅಪ್ರಾಮಾಣಿಕರು ಎಂಬ ಭಾವನೆ ಇಟ್ಟುಕೊಳ್ಳುವುದು ಸರಿಯಲ್ಲ’ ಎಂದರು.

‘ಈಗಾಗಲೇ ತನಿಖೆ ಒಳಪಡಿಸಲಾಗಿರುವ ಭೂ ಅಕ್ರಮ ಆರೋಪದ ಬಗ್ಗೆ ಮತ್ತೊಮ್ಮೆ ತನಿಖೆಗೆ ತರಾತುರಿಯಲ್ಲಿ ಮುಂದಾಗಿರುವುದು ಉದ್ದೇಶ ಏನು’ ಎಂದು ಪ್ರಶ್ನಿಸಿದ ಅವರು, ‘ಈ ವಿಷಯವನ್ನು ಹಾಗೂ ಬೆಟ್ಟ ಬ್ಯಾಗ್ ಖರೀದಿ ಹಗರಣವನ್ನು ಶಾಸಕ ಸಾ.ರಾ.ಮಹೇಶ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಮನಕ್ಕೆ ತಂದಿದ್ದಾರೆ’ ಎಂದರು.

ಕೆಎಲ್‌ಆರ್ ಕಾಯ್ದೆಯಡಿ ಅಧಿಕಾರ: ಮೈಸೂರು: ‘ಸರ್ಕಾರಿ ಸ್ವತ್ತು ಸಂರಕ್ಷಿಸುವ ನಿಟ್ಟಿನಲ್ಲಿ 1966ರ ಕರ್ನಾಟಕ ಭೂಕಂದಾಯ (ಕೆಎಲ್‌ಆರ್) ಕಾಯ್ದೆಯಡಿ ಕ್ರಮ ಕೈಗೊಳ್ಳಲು ಆಯುಕ್ತರಿಗೆ ಪೂರ್ಣ ಅಧಿಕಾರ ಇದೆ’ ಎಂದು ಸರ್ವೆ ಇಲಾಖೆ ಆಯುಕ್ತ ಮನೀಶ್ ಮೌದ್ಗಿಲ್ ಹೇಳಿದ್ದಾರೆ.

‘ಇದರಿಂದಾಗಿ, ಭೂಹಗರಣ ಕುರಿತು ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಹೊರಡಿಸಿದ್ದ ಆದೇಶಗಳಿಗೆ ಮರುಜೀವ ಲಭಿಸಿದೆ. ಮರುಸರ್ವೆ ಮಾಡಲು ಇಲಾಖೆ ಮುಂದಾಗಿದೆ. ಸರ್ವೆ ಕಾರ್ಯಕ್ಕೆ ಮೈಸೂರು ಜಿಲ್ಲೆಯ ಅಧಿಕಾರಿಗಳನ್ನು ಹೊರಗಿಟ್ಟು ತಂಡ ರಚಿಸಲಾಗಿದೆ. ಇದರಲ್ಲಿ ಶಾಸಕ ಸಾ.ರಾ.ಮಹೇಶ್ ಅವರ ಭೂಮಿಯೂ ಇದೆ ಎನ್ನಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ರೈತರಿಗೆ ನೆರವಾಗಲು ಸಮಗ್ರ ಕೃಷಿ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಶ್ರಮಕ್ಕೆ ಸಂಪೂರ್ಣ ಬೆಲೆ ದೊರಕಿಸುವಂತಹ ಸಮಗ್ರ ಕೃಷಿ ನೀತಿಯನ್ನು ರೂಪಿಸಲಾಗುವುದು. ರೈತ ಕುಟುಂಬಗಳ ಅಭಿವೃದ್ಧಿಗೆ ನೆರವಾಗುವಂತೆ ಬೆಳೆಗಳ ಕೊಯ್ಲಿನೋತ್ತರ ನಿರ್ವಹಣೆಗೆ ಕೃಷಿ ನೀತಿಯಲ್ಲಿ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ‘ಮುಖ್ಯಮಂತ್ರಿಗಳ ರೈತ ವಿದ್ಯಾ ನಿಧಿ’ ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡುವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಕೃಷಿ ಉತ್ಪನ್ನಗಳ ವೈಜ್ಞಾನಿಕ ಸಂಗ್ರಹ, ಸಂಸ್ಕರಣೆ, ಸಾಗಾಣಿಕೆ ಮತ್ತು ಮಾರುಕಟ್ಟೆ ಸೌಲಭ್ಯ ದೊರಕಿಸುವುದಕ್ಕೆ ಸರ್ಕಾರ ಆದ್ಯತೆ ನೀಡಲಿದೆ. ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸುವ ನಿಟ್ಟಿನಲ್ಲಿ ಈ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದರು.

ರೈತರ ಆದಾಯ ದ್ವಿಗುಣಗೊಳಿಸುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಪ್ರಯತ್ನಗಳು ಆರಂಭವಾಗಿವೆ. ಅದಕ್ಕೆ ಪೂರಕವಾಗಿ, ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಅಧ್ಯಯನ ಕೇಂದ್ರಗಳ ಆವರಣದಿಂದ ಹೊರ ಬಂದು, ರೈತರ ಜಮೀನುಗಳಲ್ಲಿ ಹೊಸ ಸಂಶೋಧನೆಗಳನ್ನು ಅನುಷ್ಠಾನಕ್ಕೆ ತರುವ ಕೆಲಸ ಮಾಡಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

ರೈತರ ಮಕ್ಕಳು ಎಸ್‌ಎಸ್‌ಎಲ್‌ಸಿ ನಂತರ ಶಿಕ್ಷಣ ಮುಂದುವರಿಸುವುದು ಕಡಿಮೆಯಾಗುತ್ತಿದೆ. ಬಹುತೇಕರು ಆರ್ಥಿಕ ಸಂಕಷ್ಟದ ಕಾರಣ ನೀಡಿ ಶಿಕ್ಷಣ ಮೊಟಕುಗೊಳಿಸುತ್ತಿದ್ದಾರೆ. ಅನೇಕ ಬಾರಿ ಹಳ್ಳಿಗಳಿಗೆ ಭೇಟಿ ನೀಡಿದ್ದಾಗ ಈ ವಿಷಯ ತಮ್ಮ ಗಮನಕ್ಕೆ ಬಂದಿತ್ತು. ರೈತರ ಮಕ್ಕಳು ಉತ್ತಮ ಶಿಕ್ಷಣ ಪಡೆದರೆ ಅವರ ಕುಟುಂಬಗಳ ಸ್ಥಿತಿ ಸುಧಾರಿಸಲು ಸಾಧ್ಯವಿದೆ. ಅದಕ್ಕೆ ಪೂರಕವಾಗಿ ‘ರೈತ ವಿದ್ಯಾ ನಿಧಿ’ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಅನುಕರಣೆಗೆ ಸಲಹೆ: ವಿದ್ಯಾನಿಧಿ ವರ್ಗಾವಣೆಗೆ ಚಾಲನೆ ನೀಡಿದ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮಾತನಾಡಿ, ‘ಕೃಷಿ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳ ಡಿಜಿಟಲೀಕರಣದಲ್ಲಿ ಕರ್ನಾಟಕವು ದೇಶದಲ್ಲೇ ಮಾದರಿಯಾಗಿದೆ. ಸೋಮವಾರ ಮತ್ತು ಮಂಗಳವಾರ ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರ ಜತೆ ಸಭೆ ನಡೆಸಲಾಗುವುದು. ಕರ್ನಾಟಕದ ಅತ್ಯುತ್ತಮ ಮಾದರಿಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗುವುದು’ ಎಂದರು.

ಫಲಾನುಭವಿಗಳಿಗೆ ಸಾಂಕೇತಿಕವಾಗಿ ಚೆಕ್ ವಿತರಿಸಿ ಮಾತನಾಡಿದ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ‘ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಗೆ ವಾಣಿಜ್ಯ ಸ್ವರೂಪ ನೀಡುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಇದು ಸಣ್ಣ ಹಿಡುವಳಿದಾರರಿಗೆ ಶಕ್ತಿ ತುಂಬಲಿದೆ’ ಎಂದರು.

ಕೃಷಿ ಸಚಿವ ಬಿ.ಸಿ. ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ತೋಟಗಾರಿಕೆ ಸಚಿವ ಮುನಿರತ್ನ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಸಂಸದರಾದ ಮುನಿಸ್ವಾಮಿ, ಡಾ. ಉಮೇಶ್ ಜಾಧವ್, ಈರಣ್ಣ ಕಡಾಡಿ, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ್ ಕವಟಗಿಮಠ, ರಾಜ್ಯ ಸಾವಯವ ಕೃಷಿ ಮಿಷನ್ ಅಧ್ಯಕ್ಷ ಎ.ಎಸ್. ಆನಂದ್ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಸಾಂಕೇತಿಕವಾಗಿ ವಿದ್ಯಾರ್ಥಿ ವೇತನ ಸ್ವೀಕರಿಸಿದ ವಿದ್ಯಾರ್ಥಿಗಳಾದ ವಿನಾಯಕ್, ಸುರೇಂದ್ರ ಗೌಡ, ಅಕ್ಷತಾ ಮತ್ತು ರಕ್ಷಿತಾ ಚೆಕ್ ಪ್ರದರ್ಶಿಸಿ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

‘ಯಡಿಯೂರಪ್ಪ ಮಾರ್ಗದರ್ಶಕ’

‘ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರೈತರಿಗಾಗಿ ಹಲವು ಯೋಜನೆಗಳನ್ನು ಜರಿಗೊಳಿಸಿರುವ ಬಿ.ಎಸ್. ಯಡಿಯೂರಪ್ಪ ಅವರು ನಮ್ಮ ಸರ್ಕಾರದ ಮಾರ್ಗದರ್ಶಕ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾಷಣದ ಮಧ್ಯದಲ್ಲಿ ಹಿಂದಿನ ಮುಖ್ಯಮಂತ್ರಿಯವ ಹೆಸರು ಪ್ರಸ್ತಾಪಿಸಿದ ಅವರು, ‘ಯಡಿಯೂರಪ್ಪ ರೈತ ನಾಯಕರಾಗಿ ಯಾವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಿದ್ದರೋ, ಮುಖ್ಯಮಂತ್ರಿಯಾಗಿ ಅವುಗಳನ್ನು ಪರಿಹರಿಸಿದರು. ಪ್ರಧಾನಿಯವರ ನಾಯಕತ್ವದಲ್ಲಿ, ಯಡಿಯೂರಪ್ಪ ಮಾರ್ಗದರ್ಶನದಲ್ಲಿ ನಾನೂ ರೈತರ ಹಿತಕ್ಕಾಗಿ ಕೆಲಸ ಮಾಡುವೆ’ ಎಂದರು.

ಆದೇಶ ಉಲ್ಲಂಘಿಸಿ ಹಾರ, ತುರಾಯಿ ಸ್ವೀಕರಿಸಿದ ಸಿ.ಎಂ!



ಸಮಾರಂಭದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ತೋಟಗಾರಿಕೆ ಸಚಿವ ಮುನಿರತ್ನ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರೇಷ್ಮೆ ಗೂಡುಗಳಿಂದ ತಯಾರಿಸಿದ ಬೃಹತ್ ಹಾರ ಹಾಕಿ, ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಾರ, ತುರಾಯಿ, ದುಬಾರಿ ವೆಚ್ಚದ ಉಡುಗೊರೆಗಳನ್ನು ನೀಡುವುದನ್ನು ನಿಷೇಧಿಸಿ ತಾವೇ ಹೊರಡಿಸಿದ್ದ ಆದೇಶವನ್ನು ಉಲ್ಲಂಘಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದರು.

ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಗಳು ನಡೆಸುವ ಸಭೆ ಮತ್ತು ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆಗಳನ್ನು ನೀಡಬಾರದು. ಅದರ ಬದಲು ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಆಗಸ್ಟ್ 10ರಂದು ಆದೇಶ ಹೊರಡಿಸಿದ್ದರು. ಮುಖ್ಯಮಂತ್ರಿಯವರ ನಿರ್ದೇಶನದಂತೆ ಈ ಆದೇಶ ಹೊರಡಿಸಲಾಗಿತ್ತು.

ಭಾನುವಾರ ನಡೆದ ‘ಮುಖ್ಯಮಂತ್ರಿಗಳ ರೈತ ವಿದ್ಯಾ ನಿಧಿ’ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಯವರನ್ನು ರೇಷ್ಮೆ ಗೂಡುಗಳಿಂದ ತಯಾರಾದ ಬೃಹತ್ ಹಾರ, ಮೈಸೂರು ಪೇಟ, ಶಾಲು ಮತ್ತು ಬೆಳ್ಳಿಯ ಸ್ಮರಣಿಕೆಯೊಂದಿಗೆ ಸನ್ಮಾನಿತರಾದರು. ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಮತ್ತು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನೂ ಇದೇ ರೀತಿ ಸನ್ಮಾನಿಸಲಾಯಿತು. ಕೃಷಿ ಸಚಿವ ಬಿ.ಸಿ. ಪಾಟೀಲ ಮತ್ತು ತೋಟಗಾರಿಕಾ ಸಚಿವ ಮುನಿರತ್ನ ಎಲ್ಲರನ್ನೂ ಸನ್ಮಾನಿಸಿದರು.

ವಿಜಯಪುರದಲ್ಲಿ ಲಘು ಭೂಕಂಪ

ವಿಜಯಪುರ: ವಿಜಯಪುರ ನಗರ ಸೇರಿದಂತೆ ಜಿಲ್ಲೆಯ ಬಬಲೇಶ್ವರ, ತಿಕೋಟಾ, ಬಸವನ ಬಾಗೇವಾಡಿ, ಮುದ್ದೇಬಿಹಾಳ, ಆಲಮಟ್ಟಿ, ನಿಡಗುಂದಿ ಹಾಗೂ ಮುಳವಾಡದಲ್ಲಿ ಶನಿವಾರ ರಾತ್ರಿ ಮೂರು ಭಾರಿ ಲಘು ಭೂಕಂಪನವಾಗಿದೆ.

ಶನಿವಾರದ ರಾತ್ರಿ 11.47 ರಿಂದ 11.49 ಹಾಗೂ ಭಾನುವಾರ ಬೆಳಗಿನ ಜಾವ 4.15ರ ಅವಧಿಯಲ್ಲಿ ಭೂಕಂಪನವಾಗಿದ್ದು, ಆಲಮಟ್ಟಿಯಲ್ಲಿರುವ ಭೂಕಂಪನ ಮಾಪಕ (ರಿಕ್ಟರ್) ಕೇಂದ್ರದಲ್ಲಿ 3.9 ರಷ್ಟು ತೀವ್ರತೆ ದಾಖಲಾಗಿದೆ. ಭೂಕಂಪನದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲೂ ದಾಖಲಾಗಿದೆ.

‘ನೆರೆಯ ಮಹಾರಾಷ್ಟ್ರದ ಕೊಲ್ಹಾಪುರ ಭೂಕಂಪನದ ಕೇಂದ್ರ ಬಿಂದು’ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರ ತಿಳಿಸಿದೆ.

ಭೂಮಿಯೊಳಗೆ ತೀವ್ರವಾದ ಸದ್ದು (ಶಿಲಾ ಪದರಗಳು ಜಾರಿದ ಶಬ್ದ) ಹಾಗೂ ಕಂಪಿಸಿದ ಅನುಭವವಾಗುತ್ತಿರುವಂತೆ ಭಯಭೀತರಾದ ಜನರು ರಾತ್ರಿ ಮನೆಯಿಂದ ಹೊರಗೆ ಓಡಿ ಬಂದು ರಸ್ತೆಯಲ್ಲಿ ಗಂಟೆಗಟ್ಟಲೇ ನಿಂತಿದ್ದ ದೃಶ್ಯ ಎಲ್ಲೆಡೆ ಕಂಡುಬಂತು. ಭೂಕಂಪನದಿಂದ ಕಟ್ಟಡಗಳಿಗೆ ಹಾಗೂ ಯಾವುದೇ ಜೀವ ಹಾನಿಯಾಗಿಲ್ಲ. ಭೂಕಂಪನದ ವೇಳೆ ಮಳೆಯೂ ಸುರಿಯುತ್ತಿದ್ದರಿಂದ ಜನರ ಭಯ ಇಮ್ಮಡಿಗೊಂಡಿತ್ತು. ಭಯದಿಂದ ನಿದ್ರೆ ಇಲ್ಲದೇ ಜನರು ರಾತ್ರಿಯಿಡಿ ಜಾಗರಣೆ ಮಾಡಿದರು.

ವಿವಿಧೆಡೆ ಮಳೆ, ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಹುಬ್ಬಳ್ಳಿ: ಕಲ್ಯಾಣ ಕರ್ನಾಟಕದ ಕಲಬುರ್ಗಿ ನಗರ ಮತ್ತು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಶನಿವಾರ ರಾತ್ರಿಯಿಡೀ ಉತ್ತಮ ಮಳೆಯಾಗಿದೆ. ಬಹುತೇಕ ಕಡೆ ಹೊಲಗಳು ಜಲಾವೃತವಾಗಿವೆ.

ಕಲಬುರ್ಗಿ ಜಿಲ್ಲೆ ವಿವಿಧೆಡೆ ಗ್ರಾಮಗಳ ಸಂಪರ್ಕ ಕಡಿತವಾಗಿದೆ. ಕುಪನೂರದಲ್ಲಿ ದೇವಾಲಯ, ರುದನೂರಿನ ತೋಂಟದಾರ್ಯ ಸಿದ್ದೇಶ್ವರ ಮಠ ಜಲಾವೃತವಾಗಿವೆ. ಕದ್ದರಗಿ ಹತ್ತಿರ ಬಾಂದಾರ–ಕಂ ಸೇತುವೆ ಮುಳುಗಿದೆ. ಬೀದರ್ ನಗರ, ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಕೆಳಮಟ್ಟದ ಸೇತುವೆಗಳು ಮುಳುಗಿವೆ.

ವಿಜಯಪುರ ಜಿಲ್ಲೆ ಆಲಮೇಲ ತಾಲ್ಲೂಕು ತಾರಾಪುರ ಗ್ರಾಮದಲ್ಲಿ ಭಾನುವಾರ ಬಾಲಕ ಸುದೀಪ ಗುರಪ್ಪ ವಡ್ಡರ (15) ಭೀಮಾ ನದಿಯ ಸೊನ್ನಾ ಬ್ಯಾರೇಜಿನ ಹಿನ್ನೀರಿನ ಸೆಳವಿಗೆ ಸಿಲುಕಿ ಮೃತಪಟ್ಟಿದ್ದು, ಶವ ಪತ್ತೆಯಾಗಿದೆ.

ಕರಾವಳಿಯಲ್ಲಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಉತ್ತಮ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ 5.5 ಸೆಂ.ಮೀ ಹಾಗೂ ಉಡುಪಿ ಜಿಲ್ಲೆಯ ನಡಾ ಗ್ರಾಮದಲ್ಲಿ 7.8 ಸೆಂ.ಮೀ. ಮಳೆಯಾಗಿದೆ. ಸುಳ್ಯ ತಾಲ್ಲೂಕಿನಲ್ಲಿ ಒಂದು ಮನೆಗೆ ಭಾಗಶಃ ಹಾನಿಯಾಗಿದೆ.

ಉತ್ತರ ಕನ್ನಡ, ಬಾಗಲಕೋಟೆ, ಗದಗ, ಉತ್ತರ ಕನ್ನಡ, ಬಾಗಲಕೋಟೆ, ಕೊಡಗು ಜಿಲ್ಲೆಗಳಲ್ಲಿ ವಿವಿಧೆಡೆ ಭಾನುವಾರ ಸಾಧಾರಣದಿಂದ, ಉತ್ತಮ ಮಳೆಯಾಗಿದೆ. ಮೈಸೂರು ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	116.26	8,915	10,888
ಹಾರಂಗಿ	2,859	2,857.61	2,300	3,300
ಕಬಿನಿ	2284.00	2,279.5	3,860	700
ಹೇಮಾವತಿ	2,922	2,915.57	2,472	5,272
ಲಿಂಗನಮಕ್ಕಿ	1,819	1,812.90	8113	-
ಸೂಪಾ (ಮೀ)	564	554.82	4,190	1,606
ಮಾಣಿ	594	586.30	989	-
ತುಂಗಭದ್ರಾ	1,633	1,632.98	10,371	10,011
ಮಲಪ್ರಭಾ	2079.5	2,078.70	1,394	1,394
ಘಟಪ್ರಭಾ	2175	2,175.00	990	990
ಭದ್ರಾ	186	185.40	3,751	3,751
ಆಲಮಟ್ಟಿ (ಮೀ)	519.6	519.60	1,921	1,921
ನಾರಾಯಣಪುರ (ಮೀ)	492.25	491.78	994	5,500

* ನೆಲಮಟ್ಟದಿಂದ

ಪಾಲಿಕೆ ಚುನಾವಣೆ: ಮತ ಎಣಿಕೆ ಇಂದು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ– ಧಾರವಾಡ, ಬೆಳಗಾವಿ ಮತ್ತು ಕಲಬುರ್ಗಿ ಮಹಾನಗರ ಪಾಲಿಕೆ ಚುನಾವಣೆಯ ಮತ ಎಣಿಕೆ ಸೋಮವಾರ (ಸೆ. 6) ಬೆಳಿಗ್ಗೆ 8ರಿಂದ ಆರಂಭವಾಗಲಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮುಜಫ್ಫರ್‌ನಗರದಲ್ಲಿ ರೈತರ ಬೃಹತ್ ಸಮಾಗಮ: 27ರಂದು ದೇಶವ್ಯಾಪಿ ಪ್ರತಿಭಟನೆಗೆ ನಿರ್ಧಾರ

ಬಿಜೆಪಿ ಸೋಲಿಸಲು ರೈತರ ಶಪಥ

ಪ್ರಜಾವಾಣಿ ವಾರ್ತೆ



ಭಾನುವಾರ ಮುಜಫ್ಫರ್‌ನಗರದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಭಾಗಿಯಾಗಿದ್ದ ರೈತರು – ಪಿಟಿಐ ಚಿತ್ರ

ಮುಜಫ್ಫರ್‌ನಗರ: ಕೇಂದ್ರ ಹಾಗೂ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಗಳನ್ನು ಕೆಳಗಿಳಿಸುವುದಾಗಿ ರೈತ ಸಂಘಟನೆಗಳು ಭಾನುವಾರ ಶಪಥ ಮಾಡಿವೆ. ಎರಡೂ ಸರ್ಕಾರಗಳ ವಿರುದ್ಧ ಪ್ರತಿಭಟನೆ ನಡೆಸಿ, ಮತ ಹಾಕದೇ ಸೋಲಿನ ರುಚಿ ತೋರಿಸಲು ಸಜ್ಜಾಗಿವೆ.

ಉತ್ತರ ಪ್ರದೇಶ ಮತ್ತು ಅಕ್ಕಪಕ್ಕದ ರಾಜ್ಯಗಳ ಸಾವಿರಾರು ರೈತರು ಇಲ್ಲಿ ನಡೆದ ಬೃಹತ್ 'ರೈತ ಮಹಾಪಂಚಾಯಿತಿ'ಯಲ್ಲಿ ಭಾಗಿಯಾಗಿದ್ದರು. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಈ ಸಮಾವೇಶವನ್ನು ಆಯೋಜಿಸಿತ್ತು.

ಸಮಾವೇಶದಲ್ಲಿ 'ಮಿಷನ್ ಉತ್ತರ ಪ್ರದೇಶ ಮತ್ತು ಉತ್ತರಾಖಂಡ' ಕಾರ್ಯಯೋಜನೆ ಪ್ರಕಟಿಸಲಾಯಿತು. ಈ ಎರಡೂ ರಾಜ್ಯಗಳ ಪ್ರತಿ ಜಿಲ್ಲೆಯಲ್ಲಿ ಬಿಜೆಪಿ ವಿರುದ್ಧ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಕೋಮು ಗಲಭೆ ನಡೆದ ಎಂಟು ವರ್ಷಗಳ ಬಳಿಕ ಉತ್ತರ ಪ್ರದೇಶದ ಮುಜಫ್ಫರ್ ನಗರದಲ್ಲಿ ಸಾವಿರಾರು ರೈತರು ಸಮಾಗಮಗೊಂಡು ಶಕ್ತಿ ಪ್ರದರ್ಶನ ನಡೆಸಿದರು.

ಕೇವಲ ಉದ್ಯಮಿಗಳಿಗೆ ನೆರವು ನೀಡಲಿರುವ ಕೇಂದ್ರದ ಮೂರು ವಿವಾದಾತ್ಮಕ ಕೃಷಿ ಕಾಯ್ದೆಗಳನ್ನು ಖಂಡಿಸಿ ಇದೇ 27ರಂದು ದೇಶದಾದ್ಯಂತ ಪ್ರತಿಭಟನೆ ನಡೆಸಲು ರೈತರ ಸಂಘಟನೆಗಳು ಇದೇ ವೇಳೆ ನಿರ್ಧರಿಸಿದವು.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕೆಲವು ತಿಂಗಳು ಬಾಕಿಯಿರುವಾಗ ಈ ಸಮಾವೇಶ ನಡೆದಿರುವುದು ಗಮನಾರ್ಹ. ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ಮೋದಿ ಮತ್ತು ಯೋಗಿ ಸರ್ಕಾರಗಳನ್ನು ಶಿಕ್ಷಿಸಬೇಕು ಎಂದು ಸಮಾವೇಶದಲ್ಲಿ ಭಾಗಿಯಾಗಿದ್ದ ಪ್ರತಿಯೊಬ್ಬ ನಾಯಕರೂ ಒತ್ತಾಯಿಸಿದರು.

> ರಸ್ತೆ, ವಿಮಾನ ನಿಲ್ದಾಣಗಳನ್ನು ಖಾಸಗೀಕರಣಗೊಳಿಸುವ ಯೋಜನೆ ಪ್ರಕಟಿಸಿ, ಭಾರತವನ್ನು ಮಾರಾಟಕ್ಕೆ ಇಡಲಾಗಿದೆ
> **ರಾಕೇಶ್ ಟಿಕಾಯತ್**
> ರೈತ ನಾಯಕ

> ರೈತರ ಬೇಡಿಕೆ ನಿರ್ಲಕ್ಷಿಸಿದ್ದಕ್ಕಾಗಿ ಮೋದಿ ಮತ್ತು ಯೋಗಿಗೆ ಮತ ಹಾಕುವುದಿಲ್ಲ ಎಂದು ರೈತರು ಘೋಷಿಸಬೇಕು
> **ಮೇಧಾ ಪಾಟ್ಕರ್**
> ಸಾಮಾಜಿಕ ಕಾರ್ಯಕರ್ತೆ

2013ರ ಕೋಮು ಗಲಭೆ ಬಳಿಕ ಜಾಟ್ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಒಡಕು ಸೃಷ್ಟಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಆರೋಪಿಸಿದರು. 'ದೆಹಲಿಯ ಗಾಜಿಪುರ ಗಡಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಯಶಸ್ವಿಯಾಗಿ ಮುಗಿಸಿದ ಬಳಿಕವೇ ಮನೆಗೆ ಹಿಂತಿರುಗುವುದಾಗಿ ಶಪಥ ಮಾಡಿದ್ದೇನೆ' ಎಂದು ಟಿಕಾಯತ್ ಭಾವನಾತ್ಮಕವಾಗಿ ಮಾತನಾಡಿದರು.

'ಈ ರೀತಿಯ ಸಭೆಗಳು ದೇಶದಾದ್ಯಂತ ನಡೆಯಲಿವೆ. ದೇಶವನ್ನು ಮಾರಾಟ ಮಾಡುವುದನ್ನು ನಾವು ತಡೆಯಬೇಕಿದೆ. ರೈತರನ್ನು, ದೇಶವನ್ನು ಉಳಿಸಬೇಕಿದೆ. ವ್ಯಾಪಾರ, ಉದ್ಯೋಗಿಗಳು ಮತ್ತು ಯುವಕರನ್ನು ಉಳಿಸಬೇಕು ಎಂಬುದು ಈ ಸಮಾವೇಶದ ಉದ್ದೇಶ' ಎಂದು ಟಿಕಾಯತ್ ಹೇಳಿದರು.

ಸಮಾವೇಶದಲ್ಲಿ ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್ ಮೊದಲಾದವರು ಭಾಗಿಯಾಗಿದ್ದರು. 'ಮೋದಿ ಅವರು ದೇಶದ ಮೇಲೆ ನೋಟು ರದ್ದತಿಯನ್ನು ಹೇರಿದ್ದಕ್ಕೆ ಮತ ಹಾಕುವುದಿಲ್ಲ ಎಂಬುದೇ ಉತ್ತರ' ಎಂದು ಮೇಧಾ ಪಾಟ್ಕರ್ ಹೇಳಿದರು.

ಕರ್ನಾಟಕ, ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಮಹಾರಾಷ್ಟ್ರ ಸೇರಿದಂತೆ ದೇಶದಾದ್ಯಂತ 300ಕ್ಕೂ ಹೆಚ್ಚು ಸಂಘಟನೆಗಳ ರೈತರು ಈ ಸಮಾವೇಶಕ್ಕೆ ಬಂದಿದ್ದಾರೆ ಎಂದು ಬಿಕೆಯು ಮಾಧ್ಯಮ ವಕ್ತಾರ ಧರ್ಮೇಂದ್ರ ಮಲಿಕ್ ಹೇಳಿದರು. ರೈತರಿಗಾಗಿ ಸುಮಾರು 5 ಸಾವಿರ ಉಪಹಾರ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿತ್ತು.

ಕರ್ನಾಟಕದ ಮಹಿಳಾ ರೈತ ನಾಯಕಿಯೊಬ್ಬರು ಸಭೆಯನ್ನುದ್ದೇಶಿಸಿ ಕನ್ನಡದಲ್ಲಿ ಮಾತನಾಡಿದರು.

ಸಮಾವೇಶಕ್ಕೆ ಬಂದಿದ್ದ ವ್ಯಕ್ತಿಯೊಬ್ಬರು ಕಹಳೆ ಊದಿ ಗಮನ ಸೆಳೆದರು. ಈ ಚಿತ್ರವನ್ನು ಕಿಸಾನ್ ಏಕತಾ ಮೋರ್ಚಾ ತನ್ನ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದೆ. 'ಹಿಂದಿನ ಕಾಲದಲ್ಲಿ ಹೋರಾಟದ ವೇಳೆ ಕಹಳೆ ಊದಲಾಗುತ್ತಿತ್ತು. ಇಂದು ಬಿಜೆಪಿಯ 'ಕಾರ್ಪೊರೇಟ್ ರಾಜ್' ವಿರುದ್ಧ ಎಲ್ಲಾ ರೈತ ಸಂಘಟನೆಗಳು ಯುದ್ಧಕ್ಕೆ ಕರೆ ನೀಡಿವೆ' ಎಂದು ಟ್ವಿಟರ್‌ನಲ್ಲಿ ಉಲ್ಲೇಖಿಸಿದೆ.

ರೈತ ಮಹಾಪಂಚಾಯಿತಿ ನಡೆಯುತ್ತಿರುವ ಮೈದಾನದಲ್ಲಿ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲು ಅವಕಾಶ ಕೋರಿ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿಯ ಅವರು ಮನವಿ ಮಾಡಿದ್ದರು. ಆದರೆ, ಈ ಮನವಿಯನ್ನು ಜಿಲ್ಲಾಡಳಿತ ನಿರಾಕರಿಸಿತು. ಭದ್ರತಾ ಕಾರಣದಿಂದ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಲಾಯಿತು. ಮುಂಜಾಗ್ರತಾ ಕ್ರಮವಾಗಿ ಕೇಂದ್ರ ಸಚಿವ ಸಂಜೀವ್ ಬಲ್ಯಾನ್ ಮತ್ತು ಬಿಜೆಪಿ ಶಾಸಕ ಉಮೇಶ್ ಮಲಿಕ್ ಅವರ ನಿವಾಸಗಳಿಗೆ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಚುನಾವಣಾ ಸಭೆ ಎಂದು ಕರೆದ ಬಿಜೆಪಿ

ಭಾನುವಾರ ನಡೆದ ಕಿಸಾನ್ ಮಹಾಪಂಚಾಯಿತಿಯನ್ನು ಚುನಾವಣಾ ಸಭೆ ಎಂದು ಬಿಜೆಪಿ ಟೀಕಿಸಿದೆ. ಮುಂಬರುವ ದಿನಗಳಲ್ಲಿ ಎದುರಾಗಲಿರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು ಸಮಾವೇಶ ಆಯೋಜಿಸಿ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದೆ.

ಇದು 'ರಾಜಕೀಯ'ವೇ ಹೊರತು, ಮಹಾಪಂಚಾಯಿತಿಯು ರೈತರ ಕಾರ್ಯಸೂಚಿ ಹೊಂದಿಲ್ಲ ಎಂದು ಬಿಜೆಪಿಯ ಕಿಸಾನ್ ಮೋರ್ಚಾ ಮುಖ್ಯಸ್ಥ ಮತ್ತು ಸಂಸದ ರಾಜಕುಮಾರ ಚಹರ್ ಅವರು ಹೇಳಿದ್ದಾರೆ.

'ವಿರೋಧ ಪಕ್ಷಗಳು ಮತ್ತು ಈ ರೈತ ಸಂಘದ ನಾಯಕರು ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ರೈತರ ಹೆಗಲನ್ನು ಬಳಸುತ್ತಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಮಾತುಕತೆಗೆ ವರುಣ್ ಗಾಂಧಿ ಒತ್ತಾಯ

ರೈತರ ಜೊತೆ ಸರ್ಕಾರ ಮಾತುಕತೆಯನ್ನು ಪುನರಾರಂಭಿಸಬೇಕು ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಒತ್ತಾಯಿಸಿದ್ದಾರೆ.

'ಮುಜಫ್ಫರ್ ನಗರದಲ್ಲಿ ಲಕ್ಷಾಂತರ ರೈತರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ಅವರು ಬೇರೆಯವರಲ್ಲ. ನಾವು ಅವರೊಂದಿಗೆ ಗೌರವಯುತವಾಗಿ ಮಾತುಕತೆಯನ್ನು ಪುನರಾರಂಭಿಸಬೇಕು. ಅವರ ನೋವು ಹಾಗೂ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಬೇಕು' ಎಂದು ಟ್ವೀಟ್ ಮಾಡಿದ್ದಾರೆ. ದೊಡ್ಡ ಜನಸಂದಣಿಯನ್ನು ತೋರಿಸುವ ವಿಡಿಯೊವನ್ನು ಅವರು ಪೋಸ್ಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

'ಅರ್ಹತೆ ಮೇಲೆ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ'

ನವದೆಹಲಿ (ಪಿಟಿಐ): ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯು ಉತ್ತಮ ವ್ಯವಸ್ಥೆಯನ್ನು ಒಳಗೊಂಡಿದೆ. ಅರ್ಹತೆ ಮತ್ತು ಹಿರಿತನವನ್ನು ಹೈಕೋರ್ಟ್ ಕೊಲಿಜಿಯಂ ಪರಿಗಣಿಸಿ ನ್ಯಾಯಮೂರ್ತಿಗಳನ್ನು ನೇಮಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಎಂ.ಎಂ. ಸುಂದರೇಶ್ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ತೆಲಂಗಾಣ ಹೈಕೋರ್ಟ್ ನ್ಯಾಯಮೂರ್ತಿಯನ್ನಾಗಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಎ. ವೆಂಕಟೇಶ್ವರ್ ರೆಡ್ಡಿ ಅವರನ್ನು ನೇಮಿಸುವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ತಮ್ಮ ಆಕ್ಷೇಪಗಳನ್ನು ಪರಿಗಣಿಸುವಂತೆ ವಕೀಲ ಬಿ. ಶೈಲೇಶ್ ಸಕ್ಸೇನಾ ಎನ್ನುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಪೀಠವು ಈ ಅಭಿಪ್ರಾಯಗಳನ್ನು ತಿಳಿಸಿದೆ.



ವಕೀಲರ ಅರ್ಜಿಯನ್ನು ತಿರಸ್ಕರಿಸಿದ ಪೀಠವು, ನ್ಯಾಯಾಲಯದ ಕಲಾಪವನ್ನು ದುರುಪಯೋಗಪಡಿಸಿಕೊಂಡಿದ್ದಕ್ಕಾಗಿ ಸುಪ್ರೀಂ ಕೋರ್ಟ್ ವಕೀಲರ ಕಲ್ಯಾಣ ನಿಧಿಗೆ ₹ 5 ಲಕ್ಷಗಳನ್ನು ನಾಲ್ಕು ವಾರಗಳಲ್ಲಿ ಪಾವತಿಸಬೇಕು ಎಂದು ನಿರ್ದೇಶನ ನೀಡಿತು.

ಜತೆಗೆ, ವಕೀಲರ ನಡವಳಿಕೆಯನ್ನು ತೆಲಂಗಾಣದ ಬಾರ್ ಕೌನ್ಸಿಲ್ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಪೀಠವು ತಿಳಿಸಿದೆ.

ತ್ರಿಸದಸ್ಯರ ಸುಪ್ರೀಂ ಕೋರ್ಟ್ ಕೊಲಿಜಿಯಂ ಆಗಸ್ಟ್ 17ರಂದು ಸಭೆ ನಡೆಸಿ ವೆಂಕಟೇಶ್ವರ್ ರೆಡ್ಡಿ ಸೇರಿದಂತೆ ಆರು ನ್ಯಾಯಾಂಗ ಅಧಿಕಾರಿಗಳನ್ನು ತೆಲಂಗಾಣ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳನ್ನಾಗಿ ನೇಮಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಿತ್ತು.

'ಕ್ಷಮೆ ಕೇಳುವವರೆಗೆ ಜಾವೇದ್ ಅಖ್ತರ್ ಚಿತ್ರ ಪ್ರದರ್ಶನಕ್ಕೆ ತಡೆ'

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕಾರ್ಯವೈಖರಿಯನ್ನು ತಾಲಿಬಾನ್ ಜೊತೆಗೆ ಹೋಲಿಸಿದ ಹೇಳಿಕೆಗಾಗಿ ಕ್ಷಮೆ ಕೋರುವವರೆಗೆ ಚಿತ್ರ ಸಾಹಿತಿ ಜಾವೇದ್ ಅಖ್ತರ್ ಭಾಗಿಯಾಗಿರುವ ಯಾವುದೇ ಚಲನಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ಮಹಾರಾಷ್ಟ್ರದ ಬಿಜೆಪಿ ವಕ್ತಾರ, ಶಾಸಕ ರಾಂ ಕದಂ ಹೇಳಿದ್ದಾರೆ.

ಜಾವೇದ್ ಅಖ್ತರ್ ಅವರ ಹೇಳಿಕೆ ನಾಚಿಕೆಗೇಡು ಅಷ್ಟೇ ಅಲ್ಲ, ಆರ್‌ಎಸ್‌ಎಸ್ ಮತ್ತು ವಿಎಚ್‌ಪಿ ಚಿಂತನೆಯನ್ನು ಗೌರವಿಸುವ ಅಸಂಖ್ಯ ಜನರಿಗೆ ನೋವುಂಟು ಮಾಡುವ ಸಂಗತಿಯಾಗಿದೆ ಎಂದು ಶಾಸಕರ ಟ್ವೀಟ್ ಆಧರಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಆಂತರಿಕ ಯುದ್ಧ: ಅಮೆರಿಕ ಎಚ್ಚರಿಕೆ

ಕಾಬೂಲ್ (ಎಎಫ್‌ಪಿ): ಪಂಜ್‌ಶಿರ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳುವುದಕ್ಕಾಗಿ ತಾಲಿಬಾನ್ ಸೈನಿಕರು ನಡೆಸುತ್ತಿರುವ ಸಂಘರ್ಷವು, ಅಫ್ಗಾನಿಸ್ತಾನದಲ್ಲಿ ಆಂತರಿಕ ಯುದ್ಧಕ್ಕೆ ದಾರಿಯಾಗಲಿದೆ. ಇದರೊಂದಿಗೆ, ಈ ದೇಶವು ಭಯೋತ್ಪಾದನಾ ಚಟುವಟಿಕೆಗಳಿಗೆ ಆಶ್ರಯ ತಾಣವಾಗಲಿದೆ ಎಂದು ಎಂದು ಅಮೆರಿಕ ಎಚ್ಚರಿಸಿದೆ.

'ಕಾಬೂಲ್ ಅನ್ನು ವಶಪಡಿಸಿಕೊಂಡ ಮೂರು ವಾರಗಳ ಬಳಿಕವೂ ತಾಲಿಬಾನ್ ಸರ್ಕಾರ ರಚನೆಯ ಕಸರತ್ತು ನಡೆಸುತ್ತಿದೆ. ಆದರೆ, ಅದು ಗೆರಿಲ್ಲಾ ಪಡೆಯಿಂದ ಬದಲಾಗಿ ದೃಢ ಸರ್ಕಾರವನ್ನು ರಚಿಸಬಲ್ಲದೇ' ಎಂಬ ಬಗ್ಗೆ ಅಮೆರಿಕದ ಸೇನೆಯ ಅಧಿಕಾರಿ ಮಾರ್ಕ್ ಮಿಲ್ಲಿ ಅನುಮಾನ ವ್ಯಕ್ತಪಡಿಸಿದ್ದಾರೆ.

'ಬಹುತೇಕ ಅಲ್ಲಿ ಆಂತರಿಕ ಯುದ್ಧದ ಸಾಧ್ಯತೆ ಕಂಡುಬರುತ್ತಿದೆ. ಅದು, ಅಲ್ ಕೈದಾ ಅಥವಾ ಇಸ್ಲಾಮಿಕ್ ಸ್ಟೇಟ್‌ನಂತಹ ಸಂಘಟನೆಗಳು ಮತ್ತಷ್ಟು ಬೆಳೆಯಲು ದಾರಿಯಾಗುತ್ತದೆ' ಎಂದು ಹೇಳಿದ್ದಾರೆ.

ಈ ಹಿಂದೆಯೂ ತಾಲಿಬಾನ್ ಅಧಿಕಾರಕ್ಕೆ ಬಂದಾಗ, ದೇಶದಲ್ಲಿ ಆಂತರಿಕ ಕಲಹ ಭುಗಿಲೆದ್ದಿತ್ತು.

ತಾಲಿಬಾನ್– ಪ್ರತಿರೋಧ ಪಡೆಯ ಸಂಘರ್ಷ: ಹಲವು ಜಿಲ್ಲೆಗಳು ವಶಕ್ಕೆ?

ಪಂಜ್‌ಶಿರ್ ವಶಕ್ಕಾಗಿ ನಿಲ್ಲದ ಕದನ

ಕಾಬೂಲ್ (ಎಎಫ್‌ಪಿ): ತಾಲಿಬಾನ್ ಪಡೆಯು ಪಂಜ್‌ಶಿರ್ ಪ್ರಾಂತ್ಯವನ್ನು ಪ್ರವೇಶಿಸಿದ್ದು, ಅಫ್ಗಾನಿಸ್ತಾನದ ನ್ಯಾಷನಲ್ ರೆಸಿಸ್ಟೆನ್ಸ್ ಫ್ರಂಟ್ ಪಡೆಯೊಂದಿಗೆ (ಎನ್‌ಆರ್‌ಎಫ್‌ಎ) ಕದನ ಮುಂದುವರಿದಿದೆ ಎಂದು ವಕ್ತಾರ ಬಿಲಾಲ್ ಕರೀಮಿ ಹೇಳಿದ್ದಾರೆ.

ಪ್ರಾಂತ್ಯದ ರಾಜಧಾನಿಯಾದ ಬುಝುರಕ್‌ಗೆ ಹೊಂದಿಕೊಂಡಂತೆ ಇರುವ, ಜಿಲ್ಲಾ ಕೇಂದ್ರವಾದ ರುಖಾ ಹಾಗೂ ಪೊಲೀಸ್ ಕೇಂದ್ರ ಕಚೇರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಗಣನೀಯ ಸಂಖ್ಯೆಯ ಜನರು, ವಾಹನಗಳು ಹಾಗೂ ಶಸ್ತ್ರಾಸ್ತ್ರಗಳನ್ನು ಕಳೆದುಕೊಳ್ಳುವುದರೊಂದಿಗೆ ಪ್ರತಿರೋಧ ಪಡೆಯು ಸಾಕಷ್ಟು ನುಗ್ಗಾಗಿದೆ ಎಂದು ಟ್ವಿಟರ್‌ನಲ್ಲಿ ಹೇಳಿಕೊಂಡಿದ್ದಾರೆ.

ಆದರೆ, ತಾಲಿಬಾನ್‌ನ ಟ್ವಿಟರ್ ಖಾತೆಗಳಲ್ಲಿ ಪ್ರಕಟಿಸಿಸುವ ಮಾಹಿತಿಯನ್ನು ದೃಢಪಡಿಸಿಕೊಳ್ಳುವುದು ಸಾಧ್ಯವಾಗಿಲ್ಲ.

'ಇಂಥ ಸಂದೇಶಗಳನ್ನು ಹರಿಬಿಡುವ ಮೂಲಕ, ಜನರನ್ನು ವಿಚಲಿತಗೊಳಿಸುವಂಥ ಪ್ರಚಾರ ತಂತ್ರದಲ್ಲಿ ತಾಲಿಬಾನ್ ತೊಡಗಿದೆ' ಎಂದು ಎನ್‌ಆರ್‌ಎಫ್‌ಎ ವಕ್ತಾರ ಫಾಹಿಂ ದಾಸ್ತಿ ಹೇಳಿದ್ದು, ತಮ್ಮ ಪಡೆಯು ಯಾವುದೇ ರೀತಿಯ ದಾಳಿಯನ್ನು ಎದುರಿಸಲು ಸಜ್ಜಾಗಿದೆ ಎಂದಿದ್ದಾರೆ.

ಪಂಜ್‌ಶಿರ್ ಪ್ರಾಂತ್ಯವನ್ನು ವಶಪಡಿಸಿಕೊಂಡಿದ್ದಾಗಿ ಕೆಲವು ದಿನಗಳ ಹಿಂದೆಯೇ ತಾಲಿಬಾನ್ ಹೇಳಿತ್ತು. ಆದರೆ, ಇದುವರೆಗೂ ಅಲ್ಲಿ ಸಂಘರ್ಷ ಮುಂದುವರಿದಿದ್ದು ಎರಡೂ ಕಡೆಗಳಲ್ಲಿ ಸಾಕಷ್ಟು ಹಾನಿಯಾಗಿದೆ ಎನ್ನಲಾಗಿದೆ.

ಎನ್‌ಆರ್‌ಎಫ್‌ಎ ಮುಖಂಡ ಅಹಮ್ಮದ್ ಮಸೂದ್, ತಾಲಿಬಾನ್ ವಿರುದ್ಧದ ಹೋರಾಟಕ್ಕೆ ಬದ್ಧವಾಗಿರುವುದಾಗಿ ಹೇಳಿದ್ದು, ಅಂತರರಾಷ್ಟ್ರೀಯ ಬೆಂಬಲಕ್ಕೆ ಮನವಿ ಮಾಡಿದ್ದಾರೆ.

'ಯಾವತ್ತೂ ಸೋಲುವುದಿಲ್ಲ' ಎಂದು ಪ್ರತಿರೋಧ ಪಡೆಯ ವಕ್ತಾರ ಮೈಸಂ ನಾಜರಿ ಹೇಳಿದ್ದಾರೆ. ಪ್ರತಿರೋಧ ಪಡೆಯ ಮಾಜಿ ಉಪಾಧ್ಯಕ್ಷ ಅಮರುಲ್ಲಾ ಸಾಲಿಹ್, ಆತಂಕದ ಪರಿಸ್ಥಿತಿ ಬಗ್ಗೆ ಎಚ್ಚರಿಸಿದ್ದಾರೆ. ತಾಲಿಬಾನ್ ಆಕ್ರಮಣದಿಂದಾಗಿ ಸಾವಿರಾರು ಜನರು ಸ್ಥಳಾಂತರಗೊಳ್ಳುವುದರ ಮೂಲಕ ಅಪಾರ ಪ್ರಮಾಣದ ಸಂಕಷ್ಟಗಳು ಎದುರಾಗಿವೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.

'ತಾಲಿಬಾನ್ ಪಡೆಯು ಪಂಜ್‌ಶಿರ್‌ನ ಅನಾಬಾ ಗ್ರಾಮವನ್ನು ತಲುಪಿದೆ. ಇತ್ತೀಚಿನ ದಿನಗಳಲ್ಲಿ ಹಲವಾರು ಜನರು ಈ ಗ್ರಾಮದಿಂದ ಪರಾರಿಯಾಗಿದ್ದಾರೆ' ಎಂದು ಇಟಲಿಯ 'ಎಮರ್ಜೆನ್ಸಿ' ಚಿಕಿತ್ಸಾ ಸಂಸ್ಥೆ ಶನಿವಾರ ಹೇಳಿತ್ತು. ಈ ಸಂಸ್ಥೆಯು, ಯುದ್ಧದಲ್ಲಿ ಗಾಯಗೊಂಡವರಿಗೆ ಈ ಗ್ರಾಮದಲ್ಲಿ ಚಿಕಿತ್ಸಾ ಕೇಂದ್ರ ನಡೆಸುತ್ತಿದ್ದು, ಈಗಲೂ ಮುಂದುವರಿಸಿದೆ.

'ಇತ್ತೀಚೆಗೆ ನಾವು ಕೆಲವೇ ಜನ ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ. ಇದುವರೆಗೂ ನಮ್ಮ ಚಿಕಿತ್ಸಾ ಕೇಂದ್ರದ ಕೆಲಸಗಳಿಗೆ ಯಾರೂ ಧಕ್ಕೆ ಮಾಡಿಲ್ಲ' ಎಂದೂ ಹೇಳಿದೆ.

ಆದರೆ, ಅನಾಬಾ ಗ್ರಾಮವಲ್ಲದೇ ಕಣಿವೆಯ ಹಲವು ಪ್ರದೇಶಗಳನ್ನೂ ತಾಲಿಬಾನ್ ವಶಪಡಿಸಿಕೊಂಡಿದೆ ಎನ್ನಲಾಗುತ್ತಿದ್ದು, ಅದಿನ್ನೂ ದೃಢಪಡಬೇಕಿದೆ ಎಂದು ಅಮೆರಿಕದ ಲಾಂಗ್ ವಾರ್ ಜರ್ನಲ್ ನ ವ್ಯವಸ್ಥಾಪಕ ಸಂಪಾದಕ ಬಿಲ್ ರೇಗಿಯೊ ಹೇಳಿದ್ದಾರೆ.

ತಾಲಿಬಾನ್ ಪರವಾದ ಸಾಮಾಜಿಕ ಮಾಧ್ಯಮದ ವೇದಿಕೆಯು ಪಂಜ್‌ಶಿರ್ ಕಣಿವೆಯನ್ನು ವಶಪಡಿಸಿಕೊಂಡಿದ್ದಾಗಿ ಪೋಸ್ಟ್ ಹಾಕಿದೆ. ಆದರೆ, ತನಿಖಾ ವೆಬ್‌ಸೈಟ್ ಬಿಲ್ಲಿಂಗ್‌ಕ್ಯಾಟ್‌ನ ನಿಕ್ ವಾಟರ್ಸ್ ಇದನ್ನು ಅಲ್ಲಗಳೆದಿದ್ದಾರೆ. ಪೋಸ್ಟ್ ಮಾಡಿರುವ ಚಿತ್ರಗಳು, ಪಂಜ್‌ಶಿರ್ ಅನ್ನು ವಶಪಡಿಸಿಕೊಂಡಿರುವುದನ್ನು ದೃಢೀಕರಿಸುವ ಚಿತ್ರಗಳಲ್ಲ ಎಂದಿದ್ದಾರೆ.



ತಾಲಿಬಾನ್ ನಿಯಂತ್ರಣಕ್ಕೆ ಬಂದಿರುವ ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೇಶೀಯ ವಿಮಾನ ಸೇವೆ ಆರಂಭಿಸಲಾಗಿದೆ. ಮೂರು ಪ್ರಾಂತ್ಯಗಳಿಂದ ವಿಮಾನಗಳು ಬರುತ್ತಿವೆ – ಪಿಟಿಐ ಚಿತ್ರ

'ಕಾದು ನೋಡುವುದೊಂದೇ ದಾರಿ'

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ಸ್ಥಿತಿಯು ಅಸ್ಥಿರವಾಗಿದ್ದು, ಇಂಥ ಸಂದರ್ಭದಲ್ಲಿ ಕಾದು ನೋಡುವುದನ್ನು ಬಿಟ್ಟರೆ ಭಾರತಕ್ಕೆ ಬೇರೆ ಆಯ್ಕೆ ಇಲ್ಲ ಎಂದು ಭಾರತದ ಮಾಜಿ ರಾಜತಂತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆ ದೇಶದಲ್ಲಿನ ಬೆಳವಣಿಗೆಗಳ ಬಗ್ಗೆ ಭಾರತವು ಅನಾಲೋಚಿತ ಪ್ರತಿಕ್ರಿಯೆ ನೀಡದೇ, ಕಾದು ನೋಡಬೇಕು ಎಂದು ನಿವೃತ್ತ, ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ (ಪೂರ್ವ) ಅನಿಲ್ ವಾಧ್ವಾ ಹೇಳಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಸರ್ಕಾರ ರಚನೆಯ ಪ್ರಕ್ರಿಯೆಯನ್ನು ಅಂತಿಮಗೊಳಿಸುವುದಕ್ಕಾಗಿ ಪಾಕಿಸ್ತಾನದ ಗುಪ್ತಚರ ಸಂಸ್ಥೆಯ ಮುಖ್ಯಸ್ಥ ಭೇಟಿ ನೀಡಿದ ಹಿನ್ನೆಲೆಯಲ್ಲಿ ಅವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

ಕಾಲೇಜು ಯುವತಿಯರಿಗೆ ನಿಖಾಬ್ ಕಡ್ಡಾಯ: ತಾಲಿಬಾನ್ ಆದೇಶ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದ ಖಾಸಗಿ ವಿಶ್ವವಿದ್ಯಾಲಯಗಳ ತರಗತಿಗಳಿಗೆ ಹಾಜರಾಗುವ ಯುವತಿಯರು/ಮಹಿಳೆಯರು, ಮುಖವನ್ನು ಮುಚ್ಚುವಂಥ ವಸ್ತ್ರವನ್ನು (ನಿಖಾಬ್) ಕಡ್ಡಾಯವಾಗಿ ಧರಿಸಬೇಕು ಎಂದು ತಾಲಿಬಾನ್ ಆದೇಶಿಸಿದೆ.

ಇದರೊಂದಿಗೆ, ಯುವಕ–ಯುವತಿಯರಿಗೆ ಪ್ರತ್ಯೇಕವಾಗಿ ಅಥವಾ ಅವರಿಬ್ಬರ ಮಧ್ಯದಲ್ಲಿ ಪರದೆಯನ್ನು ಅಳವಡಿಸಿ ತರಗತಿಗಳನ್ನು ನಡೆಸುವಂತೆ ಸೂಚಿಸಿದೆ.

ತಾಲಿಬಾನ್‌ನ ಶಿಕ್ಷಣ ವಿಭಾಗದ ಅಧಿಕಾರಿಗಳು ಈ ಬಗ್ಗೆ ಸುದೀರ್ಘವಾದ ಮಾರ್ಗಸೂಚಿಯನ್ನು ಪ್ರಕಟಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಮಹಿಳೆಯರೇ ಪಾಠ ಮಾಡಬೇಕು. ಅದು ಸಾಧ್ಯವಾಗದೇ ಹೋದಲ್ಲಿ ಉತ್ತಮ ಚಾರಿತ್ರ್ಯದ 'ವಯಸ್ಸಾದ ಪುರುಷರು' ಪಾಠ ಮಾಡಬಹುದು ಎಂದು ಹೇಳಿದೆ. 2001ರಲ್ಲಿ ತಾಲಿಬಾನ್ ಆಡಳಿತ ಕೊನೆಗೊಳ್ಳುತ್ತಲೇ ದೇಶದಲ್ಲಿ ಸ್ಥಾಪನೆಯಾಗಿರುವ ಎಲ್ಲ ಖಾಸಗಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಿಗೆ ಈ ಆದೇಶ ಅನ್ವಯವಾಗಲಿದೆ.

ತಾಲಿಬಾನ್–ಹಖ್ಖಾನಿ ಸಂಘರ್ಷ: ಬರದರ್‌ಗೆ ಗಾಯ?

ಕಾಬೂಲ್: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಹಾಗೂ ಹಕ್ಕಾನಿ ಸಂಘಟನೆಗಳ ನಡುವೆ ಘರ್ಷಣೆ ನಡೆದಿದೆ ಎಂಬ ಸುದ್ದಿಯನ್ನು 'ಪಂಜ್‌ಶಿರ್ ಅಬ್ಸರ್ವರ್ಸ್' ಪತ್ರಿಕೆ ಪ್ರಕಟಿಸಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ತಾಲಿಬಾನ್ ಅಥವಾ ಹಖ್ಖಾನಿ ಸಂಘಟನೆಗಳ ಪ್ರತಿಕ್ರಿಯೆ ಲಭ್ಯವಾಗಿಲ್ಲ.

'ಪಂಜ್‌ಶಿರ್ ಬಿಕ್ಕಟ್ಟನ್ನು ಬಗೆಹರಿಸುವುದು ಹೇಗೆ ಹಾಗೂ ಅಫ್ಗನ್ ಸರ್ಕಾರದಲ್ಲಿ ಅಧಿಕಾರ ಹಂಚಿಕೆ ಹೇಗಿರಬೇಕು ಎಂಬ ಬಗ್ಗೆ ನಡೆದ ಚರ್ಚೆಯ ವೇಳೆ ಅನಸ್ ಹಖ್ಖಾನಿ ಮತ್ತು ತಾಲಿಬಾನ್ ಮುಂಖಂಡರ ನಡುವೆ ಘರ್ಷಣೆ ನಡೆದಿದೆ. ತಾಲಿಬಾನ್ ನಾಯಕ ಮುಲ್ಲಾ ಅಬ್ದುಲ್ ಘನಿ ಬರದರ್ ಘರ್ಷಣೆಯಲ್ಲಿ ಗಾಯಗೊಂಡಿದ್ದು, ಪಾಕಿಸ್ತಾನದಲ್ಲಿ ಆತನಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ವರದಿಯಾಗಿದೆ.

ಅಫ್ಗಾನಿಸ್ತಾನದಲ್ಲಿ ನೂತನ ಸರ್ಕಾರ ರಚನೆ ಸಂಬಂಧ ಕಳೆದ ಎರಡು ವಾರಗಳಿಂದ ತಾಲಿಬಾನ್ ಮುಖಂಡರು ಹಾಗೂ ಹಖ್ಖಾನಿ ಸಂಘಟನೆ ಮುಖಂಡರ ನಡುವೆ ಬಿರುಸಿನ ಚರ್ಚೆಗಳು ನಡೆಯುತ್ತಿವೆ. ಎಲ್ಲ ಅಂದುಕೊಂಡಂತೆ ನಡೆದಿದ್ದರೆ ಕಳೆದ ಶನಿವಾರವೇ ಹೊಸ ಸರ್ಕಾರ ಘೋಷಣೆಯಾಗಬೇಕಿತ್ತು. ವಿಳಂಬಕ್ಕೆ ಅಧಿಕಾರ ಹಂಚಿಕೆ ಸಂಘರ್ಷ ಕಾರಣ ಎಂದು ಹಲವು ಮಾಧ್ಯಮಗಳು ಬೊಟ್ಟು ಮಾಡಿವೆ.

ಅಮೆರಿಕ ಪ್ರವಾಹ ಚಿಂತಾಮಣಿಯ ಟೆಕಿ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ನ್ಯೂಜೆರ್ಸಿಯಲ್ಲಿ ಇಡಾ ಚಂಡಮಾರುತದಿಂದ ಉಂಟಾದ ಭಾರಿ ಪ್ರವಾಹದಲ್ಲಿ ಇಬ್ಬರು ಭಾರತೀಯ ಸಂಜಾತರು ಸಾವಿಗೀಡಾಗಿದ್ದಾರೆ ಎಂದು ಅಲ್ಲಿನ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಮೃತಪಟ್ಟವರನ್ನು ಚಿಂತಾಮಣಿಯ ಸಾಫ್ಟ್‌ವೇರ್ ಎಂಜಿನಿಯರ್ ಧನುಷ್ ರೆಡ್ಡಿ (35) ಹಾಗೂ ಮಾಲತಿ ಕಾಂಚೆ (45) ಎಂದು ಗುರುತಿಸಲಾಗಿದೆ.

'ಪಾಂಚಜನ್ಯ ಲೇಖನಕ್ಕೂ ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಇನ್ಫೊಸಿಸ್ ಸಂಸ್ಥೆಯು ಭಾರತದ ಆರ್ಥಿಕತೆಯನ್ನು ಅಸ್ತ್ಯವ್ಯಸ್ತಗೊಳಿಸಲು ಉದ್ದೇಶಪೂರ್ವಕವಾಗಿ ಯತ್ನಿಸುತ್ತಿದೆ ಎಂಬ ಆರ್‌ಎಸ್‌ಎಸ್ ಜೊತೆ ಗುರುತಿಸಿಕೊಂಡಿರುವ ಸಾಪ್ತಾಹಿಕ 'ಪಾಂಚಚನ್ಯ'ದಲ್ಲಿ ಲೇಖನ ಕುರಿತು ಪ್ರತಿಕ್ರಿಯಿಸಲು ಆರ್‌ಎಸ್‌ಎಸ್ ನಿರಾಕರಿಸಿದೆ. ಅಂತರ ಕಾಯ್ದುಕೊಳ್ಳಲು ತೀರ್ಮಾನಿಸಿದೆ.

ಆರ್‌ಎಸ್‌ಎಸ್ ವಕ್ತಾರ ಸುನಿಲ್ ಅಂಬೆಕರ್ ಅವರು, ಜಿಎಸ್‌ಟಿ ಮತ್ತು ಐ.ಟಿ. ಕುರಿತು ಇನ್ಫೊಸಿಸ್ ರೂಪಿಸಿರುವ ಪೋರ್ಟಲ್ ಕುರಿತು ವಿವಾದವಿದ್ದು, ಅದನ್ನೇ ಪಾಂಚಜನ್ಯ ಲೇಖನದಲ್ಲಿ ಬಿಂಬಿತವಾಗಿದೆ. ಇದು, ವ್ಯಕ್ತಿಗತ ಹೇಳಿಕೆ. ಸಂಘಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ತಿಳಿಸಿದ್ದಾರೆ.

5 ದಿನ ಗಣೇಶೋತ್ಸವಕ್ಕೆ ಒಪ್ಪಿಗೆ

ಒಂದನೇ ಪುಟದಿಂದ...

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಕೂಡ ಈ ಬೇಡಿಕೆಗೆ ದನಿಗೂಡಿಸಿದ್ದರು.

ಉನ್ನತ ಮಟ್ಟದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಆರ್. ಅಶೋಕ, 'ಸಂಭಾವ್ಯ ಕೋವಿಡ್ ಮೂರನೇ ಅಲೆ ತಪ್ಪಿಸುವ ದೃಷ್ಟಿಯಿಂದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹೆಚ್ಚು ಜಾಗ್ರತೆಯಿಂದ ಇರುವಂತೆ ತಜ್ಞರು ಸಲಹೆ ನೀಡಿದ್ದಾರೆ. ಈ ಕಾರಣದಿಂದ ಹಲವು ಷರತ್ತುಗಳೊಂದಿಗೆ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

ಜಿಲ್ಲಾಧಿಕಾರಿಗಳಿಗೆ ಅಧಿಕಾರ: ಗಡಿ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳ ದೃಢ ಪ್ರಮಾಣ ದರ ಶೇಕಡ 2ಕ್ಕಿಂತ ಕಡಿಮೆಯಾದರೆ, ಪರಿಸ್ಥಿತಿ ಅವಲೋಕಿಸಿ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ ಎಂದು ತಿಳಿಸಿದರು.

ಶಾಲೆ ಮತ್ತು ಕಾಲೇಜುಗಳಲ್ಲಿ ಗಣೇಶೋತ್ಸವಕ್ಕೆ ಅವಕಾಶ ಇಲ್ಲ. ಗಣೇಶೋತ್ಸವಕ್ಕೆ ಅನುಮತಿ ಪಡೆಯುವವರು ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳು, ಸರ್ಕಾರ ವಿಧಿಸುವ ಷರತ್ತುಗಳು ಹಾಗೂ ಸ್ಥಳೀಯ ಆಡಳಿತ, ಪೊಲೀಸರು ಹೊರಡಿಸುವ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯ ಎಂದರು.

ವಾರ್ಡ್‌ಗೆ ಒಂದೇ ಗಣಪತಿ: ಉನ್ನತಮಟ್ಟದ ಸಭೆಯ ಬಳಿಕ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದ ಷರತ್ತುಗಳುಳ್ಳ ಮಾರ್ಗಸೂಚಿಯನ್ನು ಪ್ರಕಟಿಸಿದ್ದಾರೆ. ನಗರ ಪ್ರದೇಶಗಳಲ್ಲಿ ಪ್ರತಿ ವಾರ್ಡ್‌ಗೆ ಒಂದೇ ಸಾರ್ವಜನಿಕ ಗಣೇಶೋತ್ಸವಕ್ಕೆ ಅವಕಾಶ ನೀಡಬೇಕೆಂಬ ಷರತ್ತು ವಿಧಿಸಲಾಗಿದೆ.

'ನಗರ ಪ್ರದೇಶಗಳಲ್ಲಿ ಆಯಾ ವಾರ್ಡ್‌ಗಳಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಿಸುತ್ತಿದ್ದ ಎಲ್ಲ ಸಂಘ, ಸಂಸ್ಥೆಗಳ ಜತೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಸಭೆ ನಡೆಸುತ್ತಾರೆ. ಸಮಾಲೋಚನೆಯ ಬಳಿಕ ಯಾರಿಗೆ ಅವಕಾಶ ನೀಡಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳೇ ಈ ಕುರಿತು ನಿರ್ಧಾರ ಕೈಗೊಳ್ಳಲಿವೆ' ಎಂದು ಅಶೋಕ ಸ್ಪಷ್ಟಪಡಿಸಿದರು.

ಕ್ರಿಮಿನಲ್ ಪ್ರಕರಣದ ಎಚ್ಚರಿಕೆ: ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ–2005 ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 188ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಕಠಿಣ ಕ್ರಮ ಜರುಗಿಸಲಾಗುವುದು ಎಂದು ಆದೇಶದಲ್ಲಿ ಎಚ್ಚರಿಕೆ ನೀಡಲಾಗಿದೆ.

ಕೋವಿಡ್ ಸಾಂಕ್ರಾಮಿಕದ ನಡುವೆಯೇ ಎದುರಾದ ಮತ್ತೊಂದು ಸವಾಲು

ನಿಫಾ: ಸಂಪರ್ಕಿತರ ಮೇಲೆ ನಿಕಟ ನಿಗಾ

ಕೋಯಿಕ್ಕೋಡ್ (ಪಿಟಿಐ): ಕೋಯಿಕ್ಕೋಡ್‌ನಲ್ಲಿ ನಿಫಾ ವೈರಾಣು ಸೋಂಕಿನಿಂದ ಮೃತಪಟ್ಟ 12 ವರ್ಷದ ಬಾಲಕನ ಸಂಪರ್ಕಕ್ಕೆ ಬಂದ 188 ಮಂದಿಯನ್ನು ಗುರುತಿಸಲಾಗಿದೆ.

'ಬಾಲಕನ ಸಂಪರ್ಕಕ್ಕೆ ಬಂದಿದ್ದ ಆಸ್ಪತ್ರೆಯ ಇಬ್ಬರು ಸಿಬ್ಬಂದಿಯಲ್ಲಿ ನಿಫಾ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿವೆ. ಆ ಬಾಲಕನ ಸಂಪರ್ಕಕ್ಕೆ ಬಂದಿದ್ದ ಹಲವರಲ್ಲಿ 20 ಮಂದಿಗೆ ವೈರಸ್ ತಗುಲುವ ಸಾಧ್ಯತೆ ಅತಿಹೆಚ್ಚು' ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

'ಕೋಯಿಕ್ಕೋಡ್‌ನ ಖಾಸಗಿ ಆಸ್ಪತ್ರೆಯ ಸಿಬ್ಬಂದಿ ಒಬ್ಬರಿಗೆ ಮತ್ತು ಕೋಯಿಕ್ಕೋಡ್ ಜಿಲ್ಲಾ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಸಿಬ್ಬಂದಿಯಲ್ಲಿ ನಿಫಾ ಲಕ್ಷಣಗಳು ಕಾಣಿಸಿಕೊಂಡಿವೆ. ಈ ಇಬ್ಬರೂ ಸೇರಿ, ಸೋಂಕು ತಗುಲುವ ಸಾಧ್ಯತೆ ಹೆಚ್ಚು ಇದ್ದ 20 ಮಂದಿಯನ್ನು ಕೋಯಿಕ್ಕೋಡ್ ಜಿಲ್ಲಾ ಆಸ್ಪತ್ರೆಯಲ್ಲಿ ನಿಗಾದಲ್ಲಿ ಇರಿಸಲಾಗಿದೆ. ಆಸ್ಪತ್ರೆಯ ಒಂದು ವಾರ್ಡ್ ಅನ್ನು ನಿಫಾ ವಾರ್ಡ್ ಆಗಿ ಪರಿವರ್ತಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಕೋವಿಡ್ ರೋಗಿಗಳ ಸಂಪರ್ಕಿತರನ್ನು ಪತ್ತೆ ಮಾಡಲು ಅನುಸರಿಸಿದ ಮಾದರಿಯನ್ನೇ ನಿಫಾ ವೈರಸ್ ರೋಗಿಯ ಸಂಪರ್ಕಿತರನ್ನು ಪತ್ತೆ ಮಾಡಲೂ ಬಳಸಲಾಗಿದೆ. ಹೀಗಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಪ್ರಾಥಮಿಕ ಸಂಪರ್ಕಿತರನ್ನು ಪತ್ತೆ ಮಾಡಲು ಸಾಧ್ಯವಾಗಿದೆ. ಸೋಂಕು ತಗಲುವ ಸಾಧ್ಯತೆ ಹೆಚ್ಚು ಇರುವವರನ್ನು ಹೊರತುಪಡಿಸಿ, ಉಳಿದವರೆಲ್ಲರನ್ನೂ ಮನೆಯಲ್ಲಿಯೇ ಕ್ವಾರಂಟೈನ್ ಇರಲು ಸೂಚಿಸಲಾಗಿದೆ. ಅವರಲ್ಲೂ ಲಕ್ಷಣಗಳು ಕಂಡುಬಂದರೆ ಆಸ್ಪತ್ರೆಯ ವಿಶೇಷ ವಾರ್ಡ್‌ಗೆ ದಾಖಲಿಸಲಾಗುತ್ತದೆ' ಎಂದು ಹೇಳಿದ್ದಾರೆ.


ನಿಫಾದಿಂದ ಮೃತಪಟ್ಟ ಬಾಲಕನ ಮೃತದೇಹವನ್ನು ಆರೋಗ್ಯ ಕಾರ್ಯಕರ್ತರು ಕೋಯಿಕ್ಕೋಡ್‌ನ ಕಣ್ಣಂಪರಂಬು ಸ್ಮಶಾನದಲ್ಲಿ ಹೂತರು – ಪಿಟಿಐ ಚಿತ್ರ

ಮುಖ್ಯಾಂಶಗಳು

- ಮೂರು ವರ್ಷಗಳ ನಂತರ ಕಾಣಿಸಿಕೊಂಡ ವೈರಸ್
- ನಿಫಾ ತಡೆಯಲು ಕೋವಿಡ್ ನಿಯಂತ್ರಣ ಕ್ರಮಗಳ ಪಾಲನೆ

ನಿಫಾ ವೈರಸ್‌ನಿಂದ ಮೃತಪಟ್ಟ ಬಾಲಕನ ಅಂತ್ಯಕ್ರಿಯೆಯನ್ನು ಭಾನುವಾರ ಮಧ್ಯಾಹ್ನ ನಡೆಸಲಾಗಿದೆ. ವೈರಸ್ ತಗುಲುವುದನ್ನು ತಡೆಯುವ ಎಲ್ಲಾ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 12 ಅಡಿ ಆಳದ ಗುಂಡಿಯಲ್ಲಿ ಬಾಲಕನ ಶವವನ್ನು ವೈಜ್ಞಾನಿಕ ರೀತಿಯಲ್ಲಿ ಹೂಳಲಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

'2018ರ ಮೇನಲ್ಲಿ ಕೋಯಿಕ್ಕೋಡ್‌ನಲ್ಲಿ ಮೊದಲ ಬಾರಿ ನಿಫಾ ವೈರಸ್ ಕಾಣಿಸಿಕೊಂಡಿತ್ತು. ಈಗ ಎರಡನೇ ಬಾರಿ ನಿಫಾ ವೈರಸ್ ಅದೇ ಜಿಲ್ಲೆಯಲ್ಲಿ ಕಾಣಿಸಿಕೊಂಡಿದ್ದು ಏಕೆ ಎಂಬುದರ ಬಗ್ಗೆ ಅಧ್ಯಯನ ನಡೆಸಲು ತಂಡ ರಚಿಸಲಾಗಿದೆ. ಮುಂದೆ ಮತ್ತೆ ಈ ವೈರಸ್ ಬರುವುದನ್ನು ಹೇಗೆ ತಡೆಯಬಹುದು ಎಂಬುದನ್ನು ಕಂಡುಕೊಳ್ಳಲು ಈ ಅಧ್ಯಯನವು ಸಹಕಾರಿಯಾಗಲಿದೆ' ಎಂದು ಅವರು ಹೇಳಿದ್ದಾರೆ.

'ಹೆದರುವ ಅವಶ್ಯಕತೆ ಇಲ್ಲ'

'ನಿಫಾ ವೈರಸ್ ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆಯಾದರೂ, ಹರಡುವಿಕೆಯ ವ್ಯಾಪ್ತಿ ಅತ್ಯಂತ ಸೀಮಿತವಾದುದು. ಹೀಗಾಗಿ ಹೆಚ್ಚು ದಟ್ಟಣೆ ಇಲ್ಲದ ವಸತಿ ಪ್ರದೇಶಗಳಲ್ಲಿ ಇದು ಹರಡುವ ಸಾಧ್ಯತೆ ಕಡಿಮೆ' ಎಂದು ಕೇರಳ ಆರೋಗ್ಯ ಇಲಾಖೆ ಹೇಳಿದೆ.

'ಸೋಂಕು ತಗುಲಿದ ವ್ಯಕ್ತಿಗೆ ಚಿಕಿತ್ಸೆ ನೀಡಲಾಗುತ್ತಿರುವ ಆಸ್ಪತ್ರೆಯಲ್ಲಿನ ಸಿಬ್ಬಂದಿ ಮತ್ತು ಆಸ್ಪತ್ರೆಗೆ ಬರುವವರಿಗೆ ಸೋಂಕು ಹರಡುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಅಲ್ಲದೆ, ಹೀಗೆ ರೋಗಿಯ ಸಂಪರ್ಕಕ್ಕೆ ಬಂದವರನ್ನು ಪತ್ತೆ ಮಾಡುವುದೂ ಸುಲಭ. ಹೀಗಾಗಿ ಈ ರೋಗವು ಹರಡುವುದನ್ನು ತಡೆಯಬಹುದು. ಇದು ಕೋವಿಡ್‌ನಂತೆ ವ್ಯಾಪಕವಾಗಿ ಹರಡುವುದಿಲ್ಲ' ಎಂದು ಆರೋಗ್ಯ ಇಲಾಖೆ ಹೇಳಿದೆ.

'ನಿಫಾ ರೋಗಿಯ ಪ್ರಾಥಮಿಕ ಸಂಪರ್ಕಕ್ಕೆ ಬಂದವರನ್ನು ಪತ್ತೆ ಮಾಡಿ, ಕ್ವಾರಂಟೈನ್ ಮಾಡುವುದರಿಂದ ಮಾತ್ರವೇ ರೋಗ ಹರಡುವುದನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯ. ಈ ದಿಸೆಯಲ್ಲಿ ನಿಫಾ ಕಾರ್ಯಪಡೆ ಹೆಚ್ಚು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ವೈರಸ್ ತಗುಲಿರುವ ವ್ಯಕ್ತಿಯಲ್ಲಿ ಲಕ್ಷಣಗಳು ಇದ್ದರೂ, ದೇಹದಲ್ಲಿ ವೈರಸ್‌ಗಳ ಸಂಖ್ಯೆ ವಿಪರೀತವಾದರೆ ಮಾತ್ರವೇ ಅದು ಬೇರೆಯವರಿಗೆ ಹರಡುತ್ತದೆ. ಹೀಗಾಗಿ ಪ್ರಾಥಮಿಕ ಸಂಪರ್ಕಕ್ಕೆ ಬಂದಿದ್ದ ವ್ಯಕ್ತಿಗಳಿಗೆ ಮತ್ತು ಅವರಿಂದ ಬೇರೆ ವ್ಯಕ್ತಿಗಳಿಗೆ ಸೋಂಕು ಹರಡುತ್ತದೆ ಎನ್ನಲಾಗದು. ಆದರೆ ಅವರೆಲ್ಲರನ್ನೂ ನಿಗಾದಲ್ಲಿ ಇರಿಸಲಾಗಿದೆ' ಎಂದು ಆರೋಗ್ಯ ಇಲಾಖೆ ಹೇಳಿದೆ.

2,000 ಜನರಿಗೆ ಸೋಂಕು: 2018ರಲ್ಲಿ ಕೇರಳದಲ್ಲಿ ಮೊದಲ ಬಾರಿ ನಿಫಾ ವೈರಸ್ ಕಾಣಿಸಿಕೊಂಡಿದ್ದಾಗ ಕೋಯಿಕ್ಕೋಡ್ ಮತ್ತು ಮಲಪ್ಪುರಂ ಜಿಲ್ಲೆಗಳಲ್ಲಿ ಮಾತ್ರವೇ ಅದು ಹರಡಿತ್ತು. ಆಗ ಒಟ್ಟು 2,000 ಜನರಿಗೆ ವೈರಸ್‌ನ ಲಕ್ಷಣಗಳು ಕಾಣಿಸಿಕೊಂಡಿತ್ತು. ಅವರಲ್ಲಿ 17 ಜನರು ಮೃತಪಟ್ಟಿದ್ದರು.

ಮರಳಿ ಶಾಲೆಗೆ..

ಮಕ್ಕಳನ್ನು ಬದಲಾವಣೆಗೆ ಸಿದ್ಧಗೊಳಿಸಿ

ಅಮೃತ

ಮಕ್ಕಳು ಕಳೆದ ಒಂದೂವರೆ ವರ್ಷದಿಂದ ಶಾಲಾ ತರಗತಿಗಳ ಬಗ್ಗೆ ಅನಿಶ್ಚಿತ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಕೋವಿಡ್ ಒಂದನೇ ಅಲೆ, ಎರಡನೇ ಅಲೆ ಸಾಕಷ್ಟು ಅನಾಹುತ ಮಾಡಿದ್ದು, ಇದರ ಮಧ್ಯೆ ಮೂರನೆಯ ಅಲೆಯ ಬಗ್ಗೆಯೂ ತಜ್ಞರು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ಹೀಗಿರುವಾಗಲೇ ಆರನೇ ತರಗತಿಯಿಂದ ಎಂಟನೆ ತರಗತಿಯ ಮಕ್ಕಳಿಗೆ ತರಗತಿಗಳು ಆರಂಭವಾಗಿದ್ದು, ಶಾಲೆಗೆ ಹೋಗಲು ಸಿದ್ಧವಾಗಿರುವ ಮಕ್ಕಳ ಬಗ್ಗೆ ಪೋಷಕರು ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗಿದೆ.

ಒಂದೂವರೆ ವರ್ಷದಿಂದ ಹೆಚ್ಚು ಕಡಿಮೆ ಮನೆಯೊಳಗೇ ಕಳೆದ, ಆನ್‌ಲೈನ್ ತರಗತಿಗಳ ಮೇಲೆ ಅವಲಂಬಿತರಾಗಿದ್ದ ಮಕ್ಕಳನ್ನು ಈ ಬದಲಾವಣೆಗೆ ಸಿದ್ಧಗೊಳಿಸುವುದು ಪೋಷಕರಿಗೆ ಸ್ವಲ್ಪಮಟ್ಟಿಗೆ ಕಷ್ಟವೇ ಸರಿ.



ಶಾಲೆಗೆ ಮರಳಿ ಹೋಗುವ ಬಗ್ಗೆ ಕೆಲವು ಮಕ್ಕಳಿಗೆ ಖುಷಿಯಿರಬಹುದು. ಮತ್ತೆ ಸ್ನೇಹಿತರನ್ನು ಕಾಣುವುದು, ಅವರ ಜೊತೆ ಆಟವಾಡುವುದು ಯಾರಿಗೆ ಬೇಡ ಹೇಳಿ! ಆದರೆ ಹೆಚ್ಚಿನ ಮಕ್ಕಳಿಗೆ ಇದು ಕೊಂಚ ಕಷ್ಟವೆನಿಸುತ್ತದೆ. ಅಂಥವರಿಗೆ ಪೋಷಕರು ಧೈರ್ಯ ಹೇಳಬೇಕು. ಜೊತೆಗೆ ಪರಿಸ್ಥಿತಿಯ ಬಗ್ಗೆ ಸೂಕ್ಷ್ಮವಾಗಿ ಗಮನಹರಿಸುವಂತೆ ಮಕ್ಕಳಿಗೆ ತಿಳಿಹೇಳಬೇಕು.


- ಕೋವಿಡ್ ಬಗ್ಗೆ ಮಕ್ಕಳಿಗೆ ಸೂಕ್ತ ಮಾಹಿತಿ ನೀಡುವುದಲ್ಲದೇ, ನಿಜವಾದ ಪರಿಸ್ಥಿತಿ ಹೇಗಿದೆ ಎಂಬುದನ್ನು ಮನದಟ್ಟು ಮಾಡುವುದು ಸೂಕ್ತ. ನಮ್ಮ ರಾಜ್ಯದಲ್ಲಿ ಕೆಲವು ಕಡೆ ಕೋವಿಡ್ ಸೋಂಕು ಕಡಿಮೆಯಾಗಿದ್ದರೂ ಕೂಡ, ಪೂರ್ತಿ ನಿಂತಿಲ್ಲ. ಈಗಾಗಲೇ ಡೆಲ್ಟಾ ತಳಿ ಹಲವು ಕಡೆ ಸಮಸ್ಯೆ ಸೃಷ್ಟಿಸುತ್ತಲೇ ಇದೆ. ಸಾಕಷ್ಟು ಮಕ್ಕಳಿಗೂ ಈ ಸೋಂಕು ತಗಲಿದೆ. ಎಲ್ಲವನ್ನೂ ಮಕ್ಕಳಿಗೆ ವಿವರವಾಗಿ ಹೇಳುವ ಅವಶ್ಯಕತೆ ಇಲ್ಲ. ಆದರೆ ಕೋವಿಡ್ ಸಮಸ್ಯೆ ಇನ್ನೂ ಕಡಿಮೆಯಾಗಿಲ್ಲ ಎಂಬುದರ ಬಗ್ಗೆ ಹೇಳಬಹುದು.
- ಮಾಸ್ಕ್ ಧರಿಸಿ ಶಾಲೆಗೆ ಹೋಗುವ ಬಗ್ಗೆ ಅವರಿಗೆ ತಿಳಿಹೇಳಿ. ಇದು ಈಗಿನ ಪರಿಸ್ಥಿತಿಯಲ್ಲಿ ಸಾಮಾನ್ಯ ಎಂದು ವಿವರಿಸಿ. ಪರಿಸ್ಥಿತಿ ಅನಿಶ್ಚಿತವಾಗಿರುವಾಗ ಈ ತರಹದ ಸಂವಹನ ಹೆಚ್ಚು ಮುಖ್ಯವಾಗುತ್ತದೆ.
- ಸಾಧ್ಯವಾದರೆ ಮಕ್ಕಳನ್ನು ಸ್ವತಃ ಶಾಲೆಗೆ ಬಿಟ್ಟು ಬನ್ನಿ. ಹೆಚ್ಚು ಕಡಿಮೆ 18 ತಿಂಗಳುಗಳ ಕಾಲ, 24 ಗಂಟೆಯೂ ಮಕ್ಕಳು ತಮ್ಮ ಪೋಷಕರ ಜೊತೆಗೆ ಕಳೆದಿದ್ದಾರೆ. ಹೆಚ್ಚಿನ ಪೋಷಕರೂ ಮನೆಯಿಂದಲೇ ಕಚೇರಿ ಕೆಲಸ ಮಾಡಿಕೊಂಡಿದ್ದರು. ಆದರೂ ಕೂಡ ತಂದೆ- ತಾಯಿಯನ್ನು ಬಿಟ್ಟಿರಲು ಮಕ್ಕಳಿಗೆ, ಹಾಗೆಯೇ ಮಕ್ಕಳನ್ನು ಕೆಲವು ಗಂಟೆಗಳ ಕಾಲ ಬಿಟ್ಟಿರುವುದು ಪೋಷಕರಿಗೆ ಕಷ್ಟವಾಗಬಹುದು. ಹೀಗಾಗಿ ಮಕ್ಕಳನ್ನು ಆದಷ್ಟು ತಾವೇ ಶಾಲೆಗೆ ಕಳಿಸುವ, ಕರೆದುಕೊಂಡು ಬರುವ ಕೆಲಸ ಮಾಡಿದರೆ ಉತ್ತಮ. ಮಕ್ಕಳಿಗೂ ಇದರಿಂದ ಭದ್ರತೆಯ ಭಾವನೆ ಮೂಡುತ್ತದೆ.

> ಕೋವಿಡ್ 3ನೇ ಅಲೆಯ ಎಚ್ಚರಿಕೆಯ ನಡುವೆ 6ರಿಂದ 8ನೇ ತರಗತಿ ಮಕ್ಕಳಿಗೆ ಶಾಲೆ ಆರಂಭವಾಗಿದೆ. ಆದರೆ ಮಕ್ಕಳನ್ನು ಶಾಲೆಗೆ ಕಳುಹಿಸುವ ಮೊದಲು ಪೋಷಕರು ಕೆಲವೊಂದು ಮುನ್ನೆಚ್ಚರಿಕೆ ವಹಿಸಬೇಕಾದ ಅವಶ್ಯಕತೆ ಇದೆ.



- ಬೆಳಿಗ್ಗೆ ಬೇಗ ಎದ್ದು, ಒಂದಿಷ್ಟು ಸಮಯ ಮಕ್ಕಳ ಜೊತೆ ಕಳೆಯಿರಿ. ಮಕ್ಕಳನ್ನು ಬೆಳಿಗ್ಗೆ ಬೇಗ ಎಬ್ಬಿಸಿ, ಅವರ ಜೊತೆ ಕೋವಿಡ್ ಬಿಟ್ಟು ಬೇರೆ ವಿಷಯದ ಬಗ್ಗೆ ಮಾತನಾಡುತ್ತ, ಅವರಲ್ಲಿ ಆತಂಕವಿದೆಯೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ.
- ಶಾಲೆಗೆ ಭೇಟಿ ಕೊಡಿ. ಮಕ್ಕಳ ಜೊತೆ ಶಾಲಾ ಸಮಯಕ್ಕಿಂತ ಮುಂಚೆಯೇ ತೆರಳಿ ಒಂದಿಷ್ಟು ಸಮಯ ಹೊರಗಡೆ ಕಾಲ ಕಳೆಯಿರಿ. ಅವರ ಸ್ನೇಹಿತರ ಜೊತೆ ದೂರದಿಂದಲೇ ಕೈಯಾಡಿಸಿ ಶುಭಾಶಯ ವಿನಿಮಯ ಮಾಡಿಕೊಳ್ಳಿ. ಸಾಧ್ಯವಾದರೆ ಶಿಕ್ಷಕರನ್ನೂ ಭೇಟಿ ಮಾಡಿ ಆದಷ್ಟು ಪರಿಸ್ಥಿತಿ ತಿಳಿಯಾಗಿದೆ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿಸಿ.

ಆದರೂ ಕೂಡ ಮಕ್ಕಳಿಗೆ ಶಾಲೆಯಲ್ಲಿ ಮೊದಲಿನಂತೆ ಇರುವಂತಾಗಲು ಸ್ವಲ್ಪ ಸಮಯ ಬೇಕು. ಒಂದೆರಡು ವಾರಗಳಲ್ಲಿ ಇಂತಹ ಆತಂಕ, ಭಯ ದೂರವಾಗಲು ಒಂದಿಷ್ಟು ಹೆಚ್ಚಿನ ಬೆಂಬಲವೇ ಬೇಕಾಗಬಹುದು.



ಕೃತಕ ಬುದ್ಧಿಮತ್ತೆ ಬಳಸಿ

ರೆಸ್ಯೂಮೆ ತಯಾರಿಸುವುದು ಹೇಗೆ?

ಮನಸ್ವಿ

ಪದವಿ ವಿದ್ಯಾಭ್ಯಾಸ ಮುಗಿದ ತಕ್ಷಣ ಕೆಲವರು ಉನ್ನತ ಶಿಕ್ಷಣದತ್ತ ಸಾಗಿದರೆ ಇನ್ನೂ ಹಲವರು ಉದ್ಯೋಗ ಹುಡುಕುವಲ್ಲಿ ನಿರತರಾಗಿರುತ್ತಾರೆ. ಉದ್ಯೋಗ ಹುಡುಕಲು ಚಿಂತನೆ ನಡೆಸುವವರು ಮೊದಲು ಗಮನ ಹರಿಸಬೇಕಾದದ್ದು ರೆಸ್ಯೂಮೆ ಬಗ್ಗೆ. ರೆಸ್ಯೂಮೆ ಎಂಬುದು ಉದ್ಯೋಗಕ್ಕೆ ಮೊದಲ ಮೆಟ್ಟಿಲು ಕೂಡ ಹೌದು. ಹಿಂದೆಲ್ಲಾ ರೆಸ್ಯೂಮೆಯನ್ನು ಕೈಯಲ್ಲಿ ಬರೆದು ತಯಾರಿಸುತ್ತಿದ್ದರು. ಆಮೇಲೆ ರೆಸ್ಯೂಮೆ ಸ್ವರೂಪವನ್ನು ಟೈಪ್ ಮಾಡಿ ಪ್ರಿಂಟ್ ತೆಗೆಯುವ ಅಥವಾ ರೆಸ್ಯೂಮೆಯನ್ನು ಮೇಲ್ ಮಾಡುವ ಪರಿಪಾಠವಿತ್ತು. ಆದರೆ ಈಗ ಕಾಲ ಬದಲಾಗಿದೆ. ಈಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಕೃತಕ ಬುದ್ಧಿಮತ್ತೆ) ಆಧರಿಸಿದ ರೆಸ್ಯೂಮೆಗಳಿಗೆ ಒತ್ತು ನೀಡುತ್ತಿವೆ ಕಂಪನಿಗಳು. ಇತ್ತೀಚೆಗೆ ಕಂಪನಿಗಳು ಸಂದರ್ಶನ ಹಾಗೂ ನೇಮಕಾತಿ ಪ್ರಕ್ರಿಯೆಯನ್ನು ಸುವ್ಯವಸ್ಥಿತಗೊಳಿಸಲು ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ವಿಧಾನವನ್ನು ಹೆಚ್ಚು ಅವಲಂಬಿಸಿವೆ.

ಐಟಿ ಕಂಪನಿಗಳಲ್ಲಿ ಉದ್ಯೋಗಕ್ಕೆ ಸೇರಲು ಬಯಸುವವರು ಎಐ ಆಧಾರಿತ ರೆಸ್ಯೂಮೆಯ ಮೇಲೆ ಹೆಚ್ಚು ಗಮನ ಹರಿಸಬೇಕು. ರೆಸ್ಯೂಮೆ ಆಯ್ಕೆಯಾದರಷ್ಟೇ ಮುಂದಿನ ಹಂತದ ನೇಮಕಾತಿ ಪ್ರಕ್ರಿಯೆಗಳಿಗೆ ಆಯ್ಕೆ ಆಗಲು ಸಾಧ್ಯ. ಆ ಕಾರಣಕ್ಕೆ ಕಂಪನಿಗಳು ಎಐ ರೆಸ್ಯೂಮೆ ಸ್ಕ್ರೀನಿಂಗ್ ಟೂಲ್‌ಗಳ ಮೇಲೆ ಹೆಚ್ಚು ಗಮನ ಹರಿಸುತ್ತವೆ. ಮೊದಲೆಲ್ಲಾ ರೆಸ್ಯೂಮೆಗಳನ್ನು ಮಾನವ ಸಂಪನ್ಮೂಲ ವಿಭಾಗದವರು ಓದಿ ಆಯ್ಕೆ ಮಾಡುವ ಪ್ರಕ್ರಿಯೆ ಇತ್ತು. ಆದರೆ ಈಗ ರೆಸ್ಯೂಮೆಗಳನ್ನು ಸ್ಕ್ಯಾನ್ ಮಾಡುವ ಮೂಲಕ ಅದರಲ್ಲಿ ಇರುವ ಅಂಶಗಳನ್ನು ಪರಿಶೀಲನೆ ಮಾಡಲಾಗುತ್ತದೆ. ಹಲವು ಕಂಪನಿಗಳಲ್ಲಿ ಸ್ವಯಂಚಾಲಿತ ಫಿಲ್ಟರ್‌ಗಳು ಜಾರಿಯಲ್ಲಿವೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ ಈಗ ಹೆಚ್ಚು ಪ್ರಚಲಿತದಲ್ಲಿರುವ ಕಾರಣ ರೆಸ್ಯೂಮೆಯಲ್ಲಿ ಕೃತಕ ಬುದ್ಧಿಮತ್ತೆಯನ್ನು ಸೇರಿಸುವುದು ಅವಶ್ಯವಾಗಿದೆ.

ಕೃತಕ ಬುದ್ಧಿಮತ್ತೆ ಆಧರಿತ ರೆಸ್ಯೂಮೆ ಎಂದರೆ ಉದ್ಯೋಗಕ್ಕೆ ಸೇರ ಬಯಸುವ ಅಭ್ಯರ್ಥಿಗಳು ಕಂಪನಿ ವೆಬ್‌ಸೈಟ್‌ಗೆ ಭೇಟಿ ನೀಡಿ ಅಲ್ಲಿನ ಉದ್ಯೋಗ ಪೋರ್ಟಲ್‌ನಲ್ಲಿ ಕೇಳಿರುವ ವಿವರಗಳನ್ನು ಭರ್ತಿ ಮಾಡಬೇಕು. ಅದರಲ್ಲಿ ವೈಯಕ್ತಿಕ ವಿವರ, ವಿದ್ಯಾಭ್ಯಾಸ, ಅನುಭವ ಮುಂತಾದ ಎಲ್ಲಾ ವಿವರಗಳನ್ನು ತುಂಬಿಸಲು ಕಾಲಂಗಳಿರುತ್ತವೆ. ಕೊನೆಯಲ್ಲಿ ರೆಸ್ಯೂಮೆಯನ್ನು ಅಪ್‌ಲೋಡ್ ಮಾಡುವ ಅವಕಾಶ ಇರುತ್ತದೆ.

ಹೀಗಿರಲಿ ರೆಸ್ಯೂಮೆ

ರೆಸ್ಯೂಮೆಯಲ್ಲಿ ವಿವಿಧ ವಿನ್ಯಾಸ, ಬಣ್ಣ ಸಂಯೋಜನೆ ಹಾಗೂ ವಿವರವಾದ ಮಾಹಿತಿ ನೀಡುವ ಬದಲು ಸರಳ ಹಾಗೂ ನೇರವಾದ ಮಾಹಿತಿ ಇರುವಂತೆ ತಯಾರಿಸಬೇಕು. ಮೊದಲು ಅತಿ ನೀರಸವಾದ ರೆಸ್ಯೂಮೆಯನ್ನು ರಚಿಸಲಾಗುತ್ತಿತ್ತು. ಆದರೆ ಈಗ ಚಿಕ್ಕದಾಗಿ, ಆಕರ್ಷಕವಾಗಿ ತಯಾರಿಸಿದ ರೆಸ್ಯೂಮೆಗಳು ಸಂದರ್ಶಕರ ಗಮನ ಸೆಳೆಯುತ್ತವೆ.

- ರೆಸ್ಯೂಮೆಯಲ್ಲಿ ವಿವರಗಳನ್ನು ಸೇರಿಸಲು ಸಣ್ಣದಾಗಿ, ವಿವರಣಾತ್ಮಕ ವಾಕ್ಯಗಳನ್ನು ಬಳಸಿ.
- ನಿಮ್ಮ ಕೌಶಲಗಳನ್ನು ಸ್ಪಷ್ಟವಾಗಿ ನಮೂದಿಸಿ.
- ನಿಮ್ಮ ಕಲಿಕೆಯ ವಿವರ, ಅದಕ್ಕೆ ಸಂಬಂಧಿಸಿದ ಸರ್ಟಿಫಿಕೇಟ್‌ಗಳು ಹಾಗೂ ನಿಮ್ಮ ಅನುಭವಗಳ ಕುರಿತು ವಿವರವಾಗಿ ತಿಳಿಸಿ.

ರೆಸ್ಯೂಮೆಯನ್ನು ಅಲ್ಗಾರಿದಮ್ ನಿರ್ಧರಿಸುವುದರಿಂದ ನಮ್ಮ ಕೌಶಲಗಳನ್ನು ಅದೇ ನಿರ್ಧರಿಸಿ ರೆಸ್ಯೂಮೆಗೆ ಅಂಕವನ್ನು ನೀಡುತ್ತದೆ. ಶೇ 90 ರಿಂದ 100 ಅಂಕಗಳಿಸಿದ ರೆಸ್ಯೂಮೆ ಕಂಪನಿಗೆ ಸೂಕ್ತವಾಗಿದೆ ಎಂದು ಅರ್ಥ.

ರೆಸ್ಯೂಮೆಯ ಬಹು ಆವೃತ್ತಿಯನ್ನು ರಚಿಸಿ

ಕೃತಕ ಬುದ್ಧಿಮತ್ತೆಗಾಗಿ ರೆಸ್ಯೂಮೆಯನ್ನು ಒಮ್ಮೆ ಸುವ್ಯವಸ್ಥಿತಗೊಳಿಸಿದ್ದರೆ ಇದು ಅಲ್ಗಾರಿದಮ್ ಆಧಾರದ ಮೇಲೆ ರಚಿಸಲಾಗಿರುತ್ತದೆ. ಹಾಗಾಗಿ ಮಾನವ ಸಂಪನ್ಮೂಲ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಇನ್ನೊಂದು ಆವೃತ್ತಿಯ ರೆಸ್ಯೂಮೆಯನ್ನು ಕೂಡ ತಯಾರಿಸಿ ಇರಿಸಿಕೊಳ್ಳಿ.

ಎಐ ಮೂಲಕ ಮರುಪರೀಕ್ಷೆ ನಡೆಸಿ

ಜಾಬ್ ಸೈಟ್‌ಗಳಲ್ಲಿ ಕೃತಕ ಬುದ್ಧಿಮತ್ತೆ ಅಥವಾ ಎಐ ಮೂಲಕ ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದರೆ ಅದನ್ನು ಇನ್ನೊಮ್ಮೆ ಪರಿಶೀಲಿಸಿ ಅಪ್‌ಲೋಡ್ ಮಾಡಿ. ಕೃತಕ ಬುದ್ಧಿಮತ್ತೆ ವಿಧಾನದ ಮೂಲಕ ಅರ್ಜಿ ಸಲ್ಲಿಸಿದ್ದರೆ ನಿಮ್ಮ ರೆಸ್ಯೂಮೆ ಹಾಗೂ ವಿವರಕ್ಕೆ ಸಂಬಂಧಿಸಿ ಅಂಕಗಳನ್ನು ಕೂಡ ಅದು ನೀಡಿರುತ್ತದೆ. ಇದು ಎಟಿಎಸ್ ಅನ್ನು ಉತ್ತಮಗೊಳಿಸಲು ನಿಮಗೆ ಸಹಾಯ ಮಾಡುತ್ತದೆ. ಅಲ್ಗಾರಿದಮ್ ಬಳಕೆದಾರರಿಗೆ ವರ್ಗಾಯಿಸಬಹುದಾದ ಕೌಶಲಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಒಂದು ವೇಳೆ ನಿಮ್ಮ ಕೌಶಲ ಉದ್ಯೋಗದಾತರಿಗೆ ಹೊಂದಾಣಿಕೆಯಾಗದೇ ಇದ್ದರೆ ಇದು ನಿಮಗೆ ಅಪ್‌ಲೋಡ್ ಮಾಡುವ ಹಂತದಲ್ಲಿ ತಿಳಿಸುತ್ತದೆ.

ಪ್ರಯತ್ನದಿಂದ ಪರಿಪೂರ್ಣತೆ

ಕೃತಕ ಬುದ್ಧಿಮತ್ತೆ ರೆಸ್ಯೂಮೆಗೆ ಮಾತ್ರವಲ್ಲ, ಸಂದರ್ಶನ ತಯಾರಿಯಲ್ಲೂ ನಮಗೆ ಸಹಾಯ ಮಾಡುತ್ತದೆ. ವರ್ಚುವಲ್ ಸಂದರ್ಶನ ಮಾಡುವ ಕಂಪನಿಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳಲಾಗುತ್ತದೆ. ಹಾಗಾಗಿ ಸಂದರ್ಶನ ತಯಾರಿಯಲ್ಲೂ ಈ ವಿಧಾನವನ್ನು ಅನುಸರಿಸಿ.

ರೆಸ್ಯೂಮೆಯಲ್ಲಿ ಸೇರಿಸಬಹುದಾದ ಕೃತಕ ಬುದ್ಧಿಮತ್ತೆ ಕೌಶಲಗಳ ವಿಧಗಳು ಹೀಗಿವೆ

- ಅಪ್ಲೈಡ್ ಮ್ಯಾಥಮ್ಯಾಟಿಕ್ಸ್: ಪ್ರೊಬೆಬಲಿಟಿ ಹಾಗೂ ಸ್ಟ್ಯಾಟಿಸ್ಟಿಕ್ಸ್
- ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್: ಸಿ + +, ಜಾವಾ, ಪೈಥಾನ್
- ಯೂನಿಕ್ಸ್ ಟೂಲ್‌ಸೆಟ್ ಕೌಶಲಗಳು
- ರೋಬೊಟಿಕ್ಸ್
- ಕಂಪ್ಯೂಟರ್ ವಿಷನ್
- ಮಷೀನ್ ಲರ್ನಿಂಗ್: ಅಲ್ಗಾರಿದಮ್ ಹಾಗೂ ಲೈಬ್ರರೀಸ್
- ಡೇಟಾ ಸೈನ್ಸ್
- ಡೈನಾಮಿಕ್ ಪ್ರೋಗ್ರಾಮಿಂಗ್
- ಕ್ರಿಟಿಕಲ್ ಥಿಂಕಿಂಗ್
- ಕ್ರಿಯೇಟಿವಿಟಿ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -53

716) ಹೊಂದಿಸಿ ಬರೆಯಿರಿ.

ಜೀವಿ	ಸರಾಸರಿ ಆಯಸ್ಸು
ಅ. ಬುಧ	1. ಕೆಂಪು
ಆ. ಶುಕ್ರ	2. ಕಂದು
ಇ. ಭೂಮಿ	3. ಹಳದಿ
ಈ. ಮಂಗಳ	4. ನೀಲಿ

	ಅ	ಆ	ಇ	ಈ
ಎ)	2	3	4	1
ಬಿ)	2	3	1	4
ಸಿ)	1	2	3	4
ಡಿ)	2	1	3	4

717) ಮಾನವನ ದೇಹದಲ್ಲಿನ ಅವುಗಳ ಸರಾಸರಿ ಶೇಕಡಾವಾರು ಪ್ರಮಾಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಅವರೋಹಣ ಕ್ರಮವಾಗಿದೆ?

ಎ) ಆಮ್ಲಜನಕ, ಕಾರ್ಬನ್, ಹೈಡ್ರೋಜನ್, ಸಾರಜನಕ, ಕ್ಯಾಲ್ಸಿಯಂ

ಬಿ) ಕಾರ್ಬನ್, ಆಮ್ಲಜನಕ, ಹೈಡ್ರೋಜನ್, ಕ್ಯಾಲ್ಸಿಯಂ, ಸಾರಜನಕ

ಸಿ) ಕಾರ್ಬನ್, ಆಮ್ಲಜನಕ, ಕ್ಯಾಲ್ಸಿಯಂ, ಹೈಡ್ರೋಜನ್, ಸಾರಜನಕ

ಡಿ) ಆಮ್ಲಜನಕ,ಕಾರ್ಬನ್, ಕ್ಯಾಲ್ಸಿಯಂ, ಹೈಡ್ರೋಜನ್, ಸಾರಜನಕ

718) ಕೆಳಗಿನವುಗಳನ್ನು ಆಯಾ ರಾಸಾಯನಿಕ ಹೆಸರುಗಳೊಂದಿಗೆ ಹೊಂದಿಸಿ ಮತ್ತು ಸರಿಯಾದ ಸಂಕೇತ ಆಯ್ಕೆಮಾಡಿ:

ಸಾಮಾನ್ಯ ಹೆಸರುಗಳು		ರಾಸಾಯನಿಕ ಸೂತ್ರಗಳು
1. ವೈಟ್ ವಿಟ್ರಿಯಾಲ್	-	ಎ. FeSo4.7H2O
2. ಗ್ರೀನ್ ವಿಟ್ರಿಯಾಲ್	-	ಬಿ. CuSo4.5H2O
3. ರೆಡ್ ವಿಟ್ರಿಯೊಲ್	-	ಸಿ. ZnSo4.7H2O
4. ಬ್ಲೂ ವಿಟ್ರಿಯೊಲ್	-	ಡಿ. K3Fe (CN)6

	ಎ	ಬಿ	ಸಿ	ಡಿ
ಎ)	1	2	3	4
ಬಿ)	3	4	1	2
ಸಿ)	2	4	1	3
ಡಿ)	3	2	4	1

719) ನ್ಯೂಟ್ರಾನ್‌ಗಳು ಮತ್ತು ಪ್ರೋಟಾನ್‌ಗಳ ಸಂಖ್ಯೆಯಲ್ಲಿ ಒಂದೇ ವ್ಯತ್ಯಾಸವನ್ನು ಹೊಂದಿರುವ ವಿಭಿನ್ನ ಅಂಶಗಳ ಪರಮಾಣುಗಳನ್ನು ಹೀಗೆನ್ನಲಾಗುತ್ತದೆ

ಎ) ಐಸೊಟೋನ್‌ಗಳು

ಬಿ) ಐಸೋಹೈಟ್‌ಗಳು

ಸಿ) ಐಸೋಡಯಾಫಿರ್‌ಗಳು

ಡಿ) ಐಸೊಬಾರ್‌ಗಳು

720) 14. ಈ ಕೆಳಗಿನ ವಸ್ತುಗಳನ್ನು ಅವು ಹೊಂದಿರುವ ಆಯಾ ಆಮ್ಲದೊಂದಿಗೆ ಹೊಂದಿಸಿ ಮತ್ತು ಸರಿಯಾದ ಸಂಕೇತ ಆಯ್ಕೆಮಾಡಿ:

ವಸ್ತುಗಳು	ಆಮ್ಲ
1. ದ್ರಾಕ್ಷಿ	ಎ. ಬೋರಿಕ್ ಆಮ್ಲ
2. ನೇತ್ರಮಾರ್ಜಕ	ಬಿ. ಲ್ಯಾಕ್ಟಿಕ್ ಆಮ್ಲ
3. ಹುಳಿ ಹಾಲು	ಸಿ. ಟಾರ್ಟರಿಕ್ ಆಮ್ಲ
4. ರಾನ್ಸಿಡ್ ಬೆಣ್ಣೆ	ಡಿ. ಅಸಿಟಿಕ್ ಆಮ್ಲ
5. ವಿನೆಗರ್	ಇ. ಬ್ಯುಟರಿಕ್ ಆಮ್ಲ

	ಎ	ಬಿ	ಸಿ	ಡಿ	ಇ
ಎ)	4	3	5	1	2
ಬಿ)	4	3	1	2	5
ಸಿ)	2	3	1	5	4
ಡಿ)	2	3	4	5	1

721) ವಜ್ರಕ್ಕೆ ಸಂಬಂಧಿಸಿದ ಯಾವ ಹೇಳಿಕೆ ಸುಳ್ಳು?

ಎ) ವಜ್ರದ ಸ್ಫಟಿಕ ದೈತ್ಯ ಅಣುವಿನ ಉದಾಹರಣೆ ಆಗಿದೆ

ಬಿ) ಇದು ವಿದ್ಯುತ್‌ಶಕ್ತಿಯ ಉತ್ತಮ ವಾಹಕವಾಗಿದೆ

ಸಿ) ಇದು ಹೆಚ್ಚಿನ ವಕ್ರೀಕಾರಕ ಸೂಚಿಯನ್ನು ಹೊಂದಿದೆ

ಜ) ಇದು ಬೆಳಕು ಮತ್ತು ಎಕ್ಸರೇಗಳು ಹಾದುಹೋಗಲು ಅನುವು ಮಾಡಿಕೊಡುತ್ತದೆ

722) ಈ ಕೆಳಗಿನ ಯಾವುದನ್ನು ‘ಪೈರೋಮೀಟರ್’ ಎಂದು ಕರೆಯಲಾಗುತ್ತದೆ?

ಎ) ಥರ್ಮೋ-ಎಲೆಕ್ಟ್ರಿಕ್ ಥರ್ಮಾಮೀಟರ್

ಬಿ) ವಿಕಿರಣ ಥರ್ಮಾಮೀಟರ್

ಸಿ) ಗ್ಯಾಸ್ ಥರ್ಮಾಮೀಟರ್

ಡಿ) ದ್ರವ ಥರ್ಮಾಮೀಟರ್

723) ದೊಡ್ಡ ಕಟ್ಟಡಗಳಲ್ಲಿ ಬಳಸಲಾಗುವ ಕೇಂದ್ರ ತಾಪನ ವ್ಯವಸ್ಥೆಯಲ್ಲಿ ಶಾಖ ಪ್ರಸರಣದ ಕೆಳಗಿನ ವಿಧಾನಗಳಲ್ಲಿ ಯಾವುದು ಕೆಲಸ ಮಾಡುತ್ತದೆ?

ಎ) ವಹನ ಬಿ) ಸಂವಹನ

ಸಿ) ವಿಕಿರಣ ಡಿ) ಪ್ರಸರಣದ ಎಲ್ಲಾ ಮೂರು ವಿಧಾನಗಳು

724) ಈ ಕೆಳಗಿನವುಗಳಲ್ಲಿ ಯಾವುದು ಹೆಚ್ಚಿನ ನಿರ್ದಿಷ್ಟ ಶಾಖ ಸಾಮರ್ಥ್ಯವನ್ನು ಹೊಂದಿದೆ?

ಎ) ಮಂಜುಗಡ್ಡೆ ಬಿ) ಪ್ಯಾರಾಫಿನ್

ಸಿ) ನೀರು ಡಿ) ಗ್ಲಿಸರಿನ್

725) ಹೊರಗೆ ಏನು ನಡೆಯುತ್ತಿದೆ ಎಂಬುದನ್ನು ವೀಕ್ಷಿಸಲು ಈ ಕೆಳಗಿನ ಯಾವ ಉಪಕರಣವನ್ನು ಕಂದಕದಲ್ಲಿ ಬಳಸಲಾಗುತ್ತದೆ?

ಎ) ಸರಳ ಪೆರಿಸ್ಕೋಪ್ ಬಿ) ವಿವಿಧ ಚಿತ್ರದರ್ಶಕ

ಸಿ) ಸ್ಪೆಕ್ಟ್ರೋಮೀಟರ್ ಡಿ) ಕ್ಲಿನೋಸ್ಟಾಟ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ-52 ರ ಉತ್ತರ: 706. ಸಿ, 707. ಸಿ, 708. ಸಿ, 709. ಡಿ, 710. ಸಿ, 711. ಬಿ, 712. ಬಿ, 713. ಬಿ, 714. ಸಿ, 715. ಬಿ

ವಿದ್ಯಾರ್ಥಿ ವೇತನ ಕೈಪಿಡಿ

ಎನ್‌ಐಟಿ ತಿರುಚಿರಾಪಲ್ಲಿ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (ಡಿಇಇಇ) ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- **ವಿವರ:** ಬಿಇ/ ಬಿಟೆಕ್ ಮಾಡಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** 30 ವರ್ಷದ ಒಳಗಿನವರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಎಲೆಕ್ಟ್ರಾನಿಕ್ಸ್/ ಪವರ್ ಸಿಸ್ಟಮ್/ ಸಿಎಸ್‌ಇ ಯಲ್ಲಿ ಎಂ.ಇ/ ಎಂ.ಟೆಕ್ ಮುಗಿಸಿರಬೇಕು. ಈ ಪದವಿಗಳಿಗೆ ನಡೆದ ಪರೀಕ್ಷೆಗಳಲ್ಲಿ ಕನಿಷ್ಠ ಶೇ 70ರಷ್ಟು ಅಂಕ ಪಡೆದಿರಬೇಕು.
- **ಆರ್ಥಿಕ ಸಹಾಯ:** ತಿಂಗಳಿಗೆ 31 ಸಾವಿರದ ಜತೆಗೆ ಎಚ್‌ಆರ್‌ಎ ಶೇ 16ರಷ್ಟು
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 10 ಸೆಪ್ಟೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/DER3


ಎನ್‌ಎಸ್‌ಪಿ ಪ್ರೀ ಸ್ಕಾಲರ್‌ಶಿಪ್ ಸ್ಕೀಮ್ ಫಾರ್ ಮೈನಾರಿಟೀಸ್ 2021-22

- **ವಿವರ:** ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ವಿದ್ಯಾಭ್ಯಾಸವನ್ನು ಉತ್ತೇಜಿಸುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಬೌದ್ಧರು, ಜೈನ, ಪಾರ್ಸಿ ಸಮುದಾಯದ ಮಕ್ಕಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಸಮುದಾಯದ 1ನೇ ತರಗತಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಂತಿಮ ಪರೀಕ್ಷೆಗಳಲ್ಲಿ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 1 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ದಾಖಲಾತಿ ಶುಲ್ಕ, ಟ್ಯೂಷನ್ ಶುಲ್ಕ ಮತ್ತು ನಿರ್ವಹಣಾ ಖರ್ಚು
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ನವೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/PRM6

ಕೃಪೆ: buddy4study.com

ಅಪರಾಧ ಶಾಸ್ತ್ರ ಕೋರ್ಸ್: ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್‌ಕುಮಾರ್

1. ನಾನು ಪಿಯುಸಿ ಓದುತ್ತಿದ್ದೇನೆ. ಮುಂದೆ ಅಪರಾಧ ಶಾಸ್ತ್ರ ಮತ್ತು ಮನಶ್ಶಾಸ್ತ್ರ ವಿಷಯದಲ್ಲಿ ಆಸಕ್ತಿ ಇದೆ. ಈ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಸಿ.

ಕೋಮಲ್ ಎಂ, ಊರು ತಿಳಿಸಿಲ್ಲ.

ಅಪರಾಧ ಶಾಸ್ತ್ರದ ಅಧ್ಯಯನದಲ್ಲಿ ಅಪರಾಧ, ನಡವಳಿಕೆಯ ಕಾರಣಗಳು ಮತ್ತು ತಡೆಗಟ್ಟುವಿಕೆ, ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ, ಕಾನೂನು, ಮನೋವಿಶ್ಲೇಷಣೆ ಇತ್ಯಾದಿ ವಿಷಯಗಳಿರುತ್ತವೆ. ಮನಶ್ಶಾಸ್ತ್ರ, ವಿಧಿ ವಿಜ್ಞಾನ, ಸಮಾಜ ಶಾಸ್ತ್ರ, ಅಪರಾಧ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳು. ಅಪರಾಧ ಶಾಸ್ತ್ರದ ಪದವಿ ಕೋರ್ಸ್‌ಗಳನ್ನು ಸಾಮಾನ್ಯವಾಗಿ ವಿಜ್ಞಾನ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಪಿಯುಸಿ ನಂತರ ಮಾಡಬಹುದು. ಈಗ ಅನುಷ್ಠಾನಗೊಳ್ಳುತ್ತಿರುವ ನೂತನ ಶಿಕ್ಷಣ ನೀತಿಯ ಅನುಸಾರ ಐಚ್ಛಿಕ ವಿಷಯವಾಗಿಯೂ ಅಧ್ಯಯನ ಮಾಡುವ ಸಾಧ್ಯತೆ ಇದೆ.

ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸ್ವಾಭಾವಿಕವಾದ ಒಲವು ಮತ್ತು ಆಸಕ್ತಿಯಿದ್ದು ವಿವೇಚನೆ, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ, ತಾರ್ಕಿಕ ಪ್ರತಿಪಾದನಾ ಕೌಶಲ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ, ಸಮಯ ಪ್ರಜ್ಞೆ ಇತ್ಯಾದಿ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಬೇಡಿಕೆಯಿರುವ ಈ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಲು ಸ್ನಾತಕೋತ್ತರ ಪದವಿಯನ್ನು ಮಾಡುವುದು ಒಳ್ಳೆಯದು. ವಿದ್ಯಾಭ್ಯಾಸದ ನಂತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಕಾಲೇಜುಗಳಲ್ಲಿ ವೃತ್ತಿಯನ್ನು ಅರಸಬಹುದು.

2. ನಾನು ಬಿಎ ಅಂತಿಮ ವರ್ಷದ ವಿದ್ಯಾರ್ಥಿ. ಬಿಎಡ್, ಎಂಎಸ್‌ಡಬ್ಲ್ಯು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಾವುದನ್ನು ಮಾಡಿದರೆ ಬೇಗನೆ ಜೀವನದಲ್ಲಿ ಉತ್ತಮವಾದ ಸ್ಥಾನ ಗಳಿಸಬಹುದು ಎಂಬುದನ್ನು ತಿಳಿಸಿ.

ಹಣಮಂತ ಜಮಾದಾರ, ಕಲಬುರ್ಗಿ.

ಯಾವುದೇ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಇವೆಲ್ಲವನ್ನೂ ನಿಮ್ಮಲ್ಲಿ ಬೆಳೆಸಿಕೊಂಡರೆ, ಸ್ವಾಭಾವಿಕವಾಗಿಯೇ ನಿಮ್ಮ ಕಾರ್ಯಾಚರಣೆ ನಿರೀಕ್ಷೆಯಂತಿರುತ್ತದೆ ಮತ್ತು ಕಾಲಕ್ರಮೇಣ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಬಹುದು.

ಹಾಗಾಗಿ, ನಿಮ್ಮ ಸಾಮರ್ಥ್ಯ, ಪ್ರತಿಭೆ ಮತ್ತು ಆಸಕ್ತಿಯ ಆಧಾರದ ಮೇಲೆ ನಿಮಗೆ ಸರಿಹೊಂದುವ, ಇಷ್ಟಪಡುವ ವೃತ್ತಿಯನ್ನು ಗುರುತಿಸಿ, ಸಂಬಂಧಪಟ್ಟ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಿ. ಸಾಧ್ಯವಾದರೆ, ಯುಪಿಎಸ್‌ಸಿ ಪರೀಕ್ಷೆಯ ಮುಖಾಂತರ ಐಎಎಸ್ ಅಧಿಕಾರಿಯಾಗಲು ಪ್ರಯತ್ನಿಸಿ.

3. ನಾನು ಪಿಎಸ್‌ಐ ಪರೀಕ್ಷೆಗೆ ತಯಾರಾಗುತ್ತಿದ್ದೇನೆ. ಇದರ ಸಂಪೂರ್ಣ ವಿಷಯಸೂಚಿ ಬಗ್ಗೆ ತಿಳಿಸಿ.

ಗುರುದೇವ್ ಎಂ, ಊರು ತಿಳಿಸಿಲ್ಲ.

ಕರ್ನಾಟಕ ಪಿಎಸ್‌ಐ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

4. ನಾನು 28 ವರ್ಷದ ಸಿಎಸ್ ಎಂಜಿನಿಯರಿಂಗ್ ಪದವೀಧರ. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಆಸಕ್ತಿಯಿದೆ. ಆದರೆ ಪ್ರಸ್ತುತ ಒಂದು ಪ್ರತಿಷ್ಠಿತ ಪತ್ರಿಕೆಯಲ್ಲಿ ವರದಿಗಾರನಾಗಿದ್ದೇನೆ. ಈ ಕೆಲಸದಲ್ಲಿ ಪೂರ್ಣ ವಿಶ್ವಾಸವಿಲ್ಲ. ನನ್ನ ಮುಂದಿನ ನಿರ್ಧಾರಗಳ ಬಗ್ಗೆ ಗೊಂದಲವಿದೆ, ನಾನು ಏನು ಮಾಡಿದರೆ ಒಳಿತು ಎಂಬುದರ ಬಗ್ಗೆ ದಯವಿಟ್ಟು ತಿಳಿಸಿ.

ವಿಜಯ್‌ಕುಮಾರ್ ಜಿ.ಆರ್., ಊರು ತಿಳಿಸಿಲ್ಲ.

ಆಸಕ್ತಿ ಮತ್ತು ಆತ್ಮವಿಶ್ವಾಸವಿಲ್ಲದ ವೃತ್ತಿಯಿಂದ ಬದುಕು ನೀರಸವಾಗುತ್ತದೆ. ಆದ್ದರಿಂದಲೇ, ಸಾಮರ್ಥ್ಯ ಮತ್ತು ಆಸಕ್ತಿಯ ಆಧಾರದ ಮೇಲೆ ವೃತ್ತಿಯ ಆಯ್ಕೆಯಿರಬೇಕು. ಮುಖ್ಯವಾಗಿ, ನಿಮ್ಮ ಈಗಿನ ವೃತ್ತಿಯಲ್ಲಿ ವಿಶ್ವಾಸ ಕಳೆದುಕೊಳ್ಳಲು ಕಾರಣಗಳನ್ನು ಗುರುತಿಸಿ, ನಿಮ್ಮ ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಂಡು ಈಗಿರುವ ವೃತ್ತಿಯನ್ನು ಮುಂದುವರಿಸಬಹುದೇ ಎಂದು ಪರಿಶೀಲಿಸಿ.

ಸಿಎಸ್ ಬೇಡಿಕೆಯಲ್ಲಿರುವ ಕ್ಷೇತ್ರ. ಹಾಗಾಗಿ, ಈ ಕ್ಷೇತ್ರದಲ್ಲಿನ ನಿಮ್ಮ ಜ್ಞಾನ ಮತ್ತು ವೃತ್ತಿ ಸಂಬಂಧಿತ ಕೌಶಲಗಳನ್ನು ಪರಿಷ್ಕರಿಸಿ ಖಾಸಗಿ ಕ್ಷೇತ್ರದಲ್ಲಿ ಅಥವಾ ಯುಪಿಎಸ್‌ಸಿ/ ಕೆಪಿಎಸ್‌ಸಿಗಳಂತಹ ಪರೀಕ್ಷೆಗಳ ಮುಖಾಂತರ ಸರ್ಕಾರಿ ವೃತ್ತಿಯನ್ನು ಅರಸಿ. ಇನ್ನೂ ಗೊಂದಲಗಳಿದ್ದರೆ, ವೃತ್ತಿ ಸಮಾಲೋಚಕರನ್ನು ಸಂಪರ್ಕಿಸಿ.

5. ಸರ್, ನನಗೆ ಬಿಎಸ್‌ಸಿ (ಸಿಬಿಝೆಡ್) ಪದವಿ ಮುಗಿಸಿದ ಮೇಲೆ ಎಂಎಸ್‌ಸಿ ಕುರಿತು ಆಸಕ್ತಿ ಇಲ್ಲ. ಬೇರೆ ಯಾವ ಕೋರ್ಸ್ ಮಾಡಬಹುದು ತಿಳಿಸಿ.

ವಿಷ್ಣು ನಾಯಕ್, ಊರು ತಿಳಿಸಿಲ್ಲ.

ಬಿಎಸ್‌ಸಿ ನಂತರ ನಿಮ್ಮ ಭವಿಷ್ಯದ ಯೋಜನೆಯ ಪ್ರಕಾರ ಮಾಡಬಹುದಾದ ಕೋರ್ಸ್/ ವೃತ್ತಿಗಳೆಂದರೆ ಎಂಬಿಎ, ಬಿಎಡ್, ಎಂಎಸ್‌ಸಿ (ಅಸಂಪ್ರದಾಯಿಕ ವಿಷಯಗಳು- ಪರಿಸರ ವಿಜ್ಞಾನ, ಜೀವ ವಿಜ್ಞಾನ, ಆಹಾರ ವಿಜ್ಞಾನ, ಅರಣ್ಯ ಶಾಸ್ತ್ರ, ವಿಧಿ ವಿಜ್ಞಾನ, ತಳಿ ವಿಜ್ಞಾನ ಇತ್ಯಾದಿ), ಇಂಟಗ್ರೇಟೆಡ್ ಪಿಎಚ್‌ಡಿ, ಪ್ಯಾರಾ ಮೆಡಿಕಲ್ ಮತ್ತು ಕ್ಲಿನಿಕಲ್ ಕೋರ್ಸ್‌ಗಳು, ಕೃಷಿ ಸಂಶೋಧನೆ ಕೋರ್ಸ್‌ಗಳು ಮತ್ತು ಅನೇಕ ಅಲ್ಪಾವಧಿ ಕೋರ್ಸ್‌ಗಳೂ ಇವೆ. ನೇರವಾಗಿ ಸ್ಪರ್ಧಾತ್ಮಕ ಕೋರ್ಸ್‌ಗಳ ಮುಖಾಂತರ ನಿಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಳ್ಳೆಯ ಮೌಲ್ಯಗಳು ಅಯಸ್ಕಾಂತವಿದ್ದಂತೆ- ಅವು ಒಳ್ಳೆಯ ವ್ಯಕ್ತಿಗಳನ್ನು ತಮ್ಮತ್ತ ಸೆಳೆಯುತ್ತವೆ.

–ಜಾನ್ ವುಡನ್

ಐಸಿಎಚ್‌ಆರ್: ಪೋಸ್ಟರ್ ವಿವಾದ ನೆಹರೂ ಭಾವಚಿತ್ರ ಬಿಟ್ಟಿದ್ದು ಅಕ್ಷಮ್ಯ

ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸಂಬಂಧಿಸಿದಂತೆ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯು (ಐಸಿಎಚ್‌ಆರ್) ಸಿದ್ಧಪಡಿಸಿದ ಪೋಸ್ಟರ್‌ನಲ್ಲಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರ ಇಲ್ಲದಿರುವುದು ಆ ಸಂಸ್ಥೆಯ ಸಣ್ಣತನವನ್ನು, ಬೇಜವಾಬ್ದಾರಿತನವನ್ನು ತೋರಿಸಿದೆ. ಸಂಸ್ಥೆಯು ಆಡಳಿತ ನಡೆಸುತ್ತಿರುವವರ ಅಡಿಯಾಳಿನಂತೆ ವರ್ತಿಸುತ್ತಿರುವುದನ್ನು ಕೂಡ ಇದು ತೋರಿಸುತ್ತಿದೆ. ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಈ ಭಿತ್ತಿಪತ್ರವನ್ನು ಪ್ರಕಟಿಸಲಾಗಿದೆ. ಇತಿಹಾಸದ ಕುರಿತ ಸಂಶೋಧನೆಗೆ ಮುಡಿಪಾಗಿರುವ ಸಂಸ್ಥೆಯೊಂದಕ್ಕೆ ಶೋಭೆ ತರುವ ನಡೆ ಇದಲ್ಲ. ಸ್ವಾತಂತ್ರ್ಯವನ್ನು ಸಂಭ್ರಮಿಸುವ ಉದ್ದೇಶದಿಂದ ಈ ಭಿತ್ತಿಪತ್ರ ರೂಪಿಸಲಾಗಿದೆ. ದೇಶದ ಸ್ವಾತಂತ್ರ್ಯ ಹೋರಾಟಗಾರರ ಪೈಕಿ ಪ್ರಮುಖರನ್ನು ಗೌರವಿಸುವ ಉದ್ದೇಶ ಕೂಡ ಇದಕ್ಕೆ ಇದೆ. ಈ ಭಿತ್ತಿಪತ್ರದಲ್ಲಿ ಎಂಟು ಜನ ನಾಯಕರ ಚಿತ್ರಗಳು ಇವೆ. ಮಹಾತ್ಮ ಗಾಂಧಿ, ರಾಜೇಂದ್ರ ಪ್ರಸಾದ್, ಡಾ.ಬಿ.ಆರ್. ಅಂಬೇಡ್ಕರ್, ಸರ್ದಾರ್ ವಲ್ಲಭಭಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಮದನ್ ಮೋಹನ್ ಮಾಳವೀಯ, ವಿ.ಡಿ.ಸಾವರ್ಕರ್ ಭಾವಚಿತ್ರಗಳು ಇದರಲ್ಲಿ ಇವೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ನಿಭಾಯಿಸಿದ್ದ, ದೇಶದ ಮೊದಲ ಪ್ರಧಾನಿ ಆಗಿದ್ದ ನೆಹರೂ ಅವರ ಚಿತ್ರ ಇಲ್ಲ. ಕೈಬಿಟ್ಟಿರುವುದು ನೆಹರೂ ಅವರ ಚಿತ್ರವನ್ನು ಮಾತ್ರವೇ ಅಲ್ಲ. ನಾಯಕರ ಸಾಲಿನಲ್ಲಿ ಮುಸ್ಲಿಂ ಸಮುದಾಯದವರ ಚಿತ್ರ ಇಲ್ಲ. ದಕ್ಷಿಣ ಭಾರತದ ಯಾವೊಬ್ಬ ನಾಯಕನ ಚಿತ್ರವೂ ಇದರಲ್ಲಿ ಇಲ್ಲ; ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಯಾವ ಮಹಿಳೆಯ ಚಿತ್ರವೂ ಇಲ್ಲ. ಭಾರತವು ಬಹುಜನರ ನಾಡು. ಬಹುತ್ವವೇ ಇಲ್ಲಿನ ಶಕ್ತಿ. ಇಂದಿನ ಆಳುವ ವರ್ಗವು ಭಾರತವನ್ನು ಏಕರೂಪಿ ರಾಷ್ಟ್ರವನ್ನಾಗಿ ಚಿತ್ರಿಸಲು ಎಷ್ಟೇ ಪ್ರಯತ್ನಿಸಿದರೂ, ಇಲ್ಲಿನ ಬಹುತ್ವ ಹಾಗೂ ಬಹುತ್ವದಲ್ಲಿ ಇರುವ ಶಕ್ತಿಯನ್ನು ನಿರಾಕರಿಸಲು ಸಾಧ್ಯವಿಲ್ಲ. ಹಾಗಾಗಿ, ಎಲ್ಲರೂ ಸೇರಿ ನಡೆಸಿದ ಹೋರಾಟದ ಫಲವಾಗಿ ಸಿಕ್ಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪೋಸ್ಟರ್ ರೂಪಿಸುವಾಗ ಬಹುತ್ವದ ಬಗ್ಗೆಯೂ ಆಲೋಚಿಸಬೇಕಿತ್ತು.



ಇತಿಹಾಸವು ರಾಜಕೀಯದ ಅಡಿಯಾಳು ಆಗಬಾರದು. ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸಂಬಂಧಿಸಿದಂತೆ ಮೊದಲು ಬಿಡುಗಡೆ ಮಾಡಿದ ಪೋಸ್ಟರ್‌ನಲ್ಲಿ ನೆಹರೂ ಅವರ ಚಿತ್ರ ಕೈಬಿಡುವ ಮೂಲಕ ಸಂಸ್ಥೆಯು ತಪ್ಪು ಸಂದೇಶವನ್ನು ರವಾನಿಸಿದೆ

ಭಾರತದ ಸ್ವಾತಂತ್ರ್ಯ ಹೋರಾಟವನ್ನು ಸಹಸ್ರಾರು ತೊರೆಗಳನ್ನು ತನ್ನ ಒಡಲೊಳಕ್ಕೆ ಸೇರಿಸಿಕೊಂಡು ಹರಿಯುವ ಗಂಗೆಗೆ ಹೋಲಿಸಿದ್ದಾರೆ ಕವಿ ಮನಸ್ಸಿನ ವ್ಯಕ್ತಿಗಳು. ಇಡೀ ಸ್ವಾತಂತ್ರ್ಯ ಹೋರಾಟವು ಒಂದು ಮಹಾಕಾವ್ಯಕ್ಕೆ ಸಮ ಎಂದು ಕರೆದಿದ್ದೂ ಇದೆ. ದೇಶದ ಸ್ವಾತಂತ್ರ್ಯ ಹೋರಾಟವು ಬೇರೆ ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲದ ಮಹಾಕಾವ್ಯ ಎನ್ನುವುದಾದರೆ, ಆ ಕಾವ್ಯದಲ್ಲಿ ನೆಹರೂ ಒಬ್ಬ ಪ್ರಮುಖ ಪಾತ್ರಧಾರಿ ಎಂಬುದನ್ನು ಮರೆಯುವಂತಿಲ್ಲ. ನೆಹರೂ ಅವರ ರಾಜಕೀಯ ತೀರ್ಮಾನಗಳ ಬಗ್ಗೆ ಇಂದು ಹಲವು ದೃಷ್ಟಿಕೋನಗಳಿಂದ, ಹಲವು ಸೈದ್ಧಾಂತಿಕ ನೆಲೆಗಳಿಂದ ಚರ್ಚೆಗಳು ನಡೆದಿರಬಹುದು. ಆದರೆ, ವಸ್ತುನಿಷ್ಠ ಚರ್ಚೆಯು ಅವರು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯನ್ನು ನಿರಾಕರಿಸುವುದಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ನೆಹರೂ ಅವರು ಸರಿಸುಮಾರು 10 ವರ್ಷ ಜೈಲುವಾಸ ಅನುಭವಿಸಿದರು. ಎಲ್ಲ ವರ್ಗಗಳಿಗೆ ಸೇರಿದ ಜನರ ಪ್ರೀತಿಯನ್ನು ಸಂಪಾದಿಸಿದವರು. ದೇಶದ ಇತಿಹಾಸವನ್ನು ಗಮನದಲ್ಲಿ ಇರಿಸಿಕೊಂಡು, ಭವಿಷ್ಯದಲ್ಲಿ ಏನು ಮಾಡಬೇಕು ಎಂಬ ಆಲೋಚನೆಗಳು ನೆಹರೂ ಅವರಲ್ಲಿದ್ದವು. ದೇಶದ ಸಮಕಾಲೀನ ಸ್ಥಿತಿ ಹಾಗೂ ಭವಿಷ್ಯದ ಆಕಾಂಕ್ಷೆಗಳ ಬಗ್ಗೆ ಅವರಲ್ಲಿ ಅರಿವು ಇತ್ತು. ಸ್ವಾತಂತ್ರ್ಯ ದೊರೆತ ಹೊಸದರಲ್ಲಿ ದೇಶದ ನೀತಿಗಳನ್ನು ರೂಪಿಸಿದ್ದು ನೆಹರೂ ಅವರಲ್ಲಿದ್ದ ಆಲೋಚನೆಗಳು. ನೆಹರೂ ಅವರ ಆಲೋಚನೆಗಳ ಬಗ್ಗೆ, ಅವರು ಪ್ರತಿಪಾದಿಸಿದ್ದ ಸಿದ್ಧಾಂತಗಳ ಬಗ್ಗೆ ಬಿಜೆಪಿಯ ಹಲವು ನಾಯಕರಿಗೆ ಆಕ್ಷೇಪಗಳು ಇವೆ ಎಂಬುದು ನಿಜ. ಅದನ್ನು ಅವರು ಸಾರ್ವಜನಿಕವಾಗಿಯೇ ಹೇಳಿಕೊಂಡಿದ್ದೂ ಇದೆ. ಹೀಗಾಗಿಯೇ, ನೆಹರೂ ಹೆಸರನ್ನು ಇತಿಹಾಸದಿಂದ ಅಳಿಸಿಹಾಕುವ ಯತ್ನ ನಡೆದಿದೆ, ಜನರ ಸ್ಮೃತಿಪಟಲದಲ್ಲಿ ಅವರ ಬಗ್ಗೆ ನಕಾರಾತ್ಮಕ ಚಿತ್ರಣ ನೀಡುವ ಯತ್ನವೂ ಆಗಿದೆ.

ಇತಿಹಾಸವು ರಾಜಕೀಯದ ಅಡಿಯಾಳು ಆಗಬಾರದು. ಇತಿಹಾಸದ ಅಧ್ಯಯನಕ್ಕೆ ಇರುವ ವೃತ್ತಿಪರ ವೇದಿಕೆಯಾಗಿರುವ ಐಸಿಎಚ್‌ಆರ್, ಸರ್ಕಾರದ ಅಥವಾ ಆಡಳಿತಾರೂಢ ಪಕ್ಷದ ತಾಳಕ್ಕೆ ಹೆಜ್ಜೆ ಹಾಕಬೇಕಾಗಿಲ್ಲ. ಸರ್ಕಾರದ ಇಷ್ಟಗಳಿಗೆ ಅನುಗುಣವಾಗಿ ಇತಿಹಾಸದ ಘಟನೆಗಳನ್ನು ಚಿತ್ರಿಸುವ, ಐತಿಹಾಸಿಕ ವ್ಯಕ್ತಿಗಳ ಸಾಧನೆಗಳನ್ನು ಮರೆಮಾಚುವ ಕೆಲಸವನ್ನೂ ಅದು ಮಾಡಬೇಕಾಗಿಲ್ಲ. ಮುಂದಿನ ದಿನಗಳಲ್ಲಿ ಇನ್ನಷ್ಟು ಭಿತ್ತಿಪತ್ರಗಳನ್ನು ಪ್ರಕಟಿಸಬೇಕಿದೆ, ಅವುಗಳಲ್ಲಿ ನೆಹರೂ ಅವರ ಚಿತ್ರ ಇರುತ್ತದೆ ಎಂದು ಸಂಸ್ಥೆಯು ಹೇಳಿದೆ. ಆದರೆ ಅಮೃತ ಮಹೋತ್ಸವಕ್ಕೆ ಸಂಬಂಧಿಸಿದಂತೆ ಮೊದಲು ಬಿಡುಗಡೆ ಮಾಡಿದ ಭಿತ್ತಿಪತ್ರದಲ್ಲಿ ನೆಹರೂ ಅವರ ಚಿತ್ರ ಕೈಬಿಡುವ ಮೂಲಕ ಸಂಸ್ಥೆಯು ತಪ್ಪು ಸಂದೇಶವನ್ನು ರವಾನಿಸಿ ಆಗಿದೆ. ಆಡಳಿತಾರೂಢ ಪಕ್ಷದ ರಾಜಕೀಯಕ್ಕೆ ಯಾರ ಹೆಸರು ಎಷ್ಟರಮಟ್ಟಿಗೆ ಸಹಕಾರಿ ಆಗಬಲ್ಲದು ಎಂಬುದನ್ನು ಆಧರಿಸಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಗಳನ್ನು ಅಳೆಯಲಾಗುತ್ತದೆ ಎಂಬ ಸಂದೇಶ ಅದು. ಈ ರೀತಿ ಆಗಿರುವುದು ತೀರಾ ದುರದೃಷ್ಟಕರ. ಹಲವು ಸೈದ್ಧಾಂತಿಕ ಹಿನ್ನೆಲೆಗಳನ್ನು ಹೊಂದಿದ್ದ ನಾಯಕರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ. ಅವರ ಸಂಪ್ರದಾಯ, ಆಚರಣೆ, ಸಂಸ್ಕೃತಿ ಬೇರೆ ಬೇರೆ ಆಗಿದ್ದವು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ದೇಶದ ಸ್ವಾತಂತ್ರ್ಯವನ್ನು ಸಂಭ್ರಮಿಸುವುದು ಅಂದರೆ ಅವರೆಲ್ಲರನ್ನೂ ಗೌರವಿಸುವ ಕೆಲಸ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ದಿನದ ಟ್ವೀಟ್



ಪ್ರಶಂಸಾರ್ಹರು

ತಮ್ಮ ನೆನಪಿನಶಕ್ತಿಯ ಬಲದಿಂದಲೇ ಬೋರ್ಡ್ ಮೇಲೆ ಹಾಗೇ ಬರೆದು ಕಲಿಸುತ್ತಿದ್ದ ನನ್ನ ಹಲವಾರು ಪ್ರೊಫೆಸರುಗಳು ಭಾರತ ಮತ್ತು ಅಮೆರಿಕದಲ್ಲಿ ಇದ್ದಾರೆ. ಸ್ಲೈಡ್‌ಗಳು ಇರುತ್ತಿರಲಿಲ್ಲ, ಟಿಪ್ಪಣಿಗಳು ಇರುತ್ತಿರಲಿಲ್ಲ, ಪೆಯಿಂಟ್‌ಬ್ರಷ್‌ನ ವಿನ್ಯಾಸಗಳಂತೆ ಸಮೀಕರಣಗಳು ಸಾಲುಸಾಲಾಗಿ ಹೊರಹೊಮ್ಮುತ್ತಿದ್ದವು. ಅವರು ಅಪರೂಪಕ್ಕೊಮ್ಮೆ ತಪ್ಪು ಮಾಡುತ್ತಿದ್ದರು. ತಾಂತ್ರಿಕ ತೀವ್ರತೆಯ ಈ ಯುಗದಲ್ಲಿ, ಶಿಕ್ಷಕರ ದಿನಾಚರಣೆಯಂದು ನಾನು ಅವರನ್ನು ಮೆಚ್ಚುಗೆಯಿಂದ ಸ್ಮರಿಸುತ್ತೇನೆ.

ಭ್ರಮರ್ ಮುಖರ್ಜೀ, ವಿಜ್ಞಾನಿ

ಕಿಡಿನುಡಿ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಸೋನಿಯಾ ಗಾಂಧಿ, ರಾಹುಲ್ ಅಥವಾ ಪ್ರಿಯಾಂಕಾ ಜತೆ ಭಿನ್ನಾಭಿಪ್ರಾಯ ಇರಬಹುದು. ಆದರೆ, ನೆಹರೂ ವಿರುದ್ಧ ಯಾಕೆ ದ್ವೇಷ? ನೆಹರೂ ಅಂದು ಸ್ಥಾಪಿಸಿದ ಸಂಸ್ಥೆಗಳನ್ನು ಹಣಕ್ಕಾಗಿ ಈಗಿನ ಸರ್ಕಾರ ಮಾರಾಟ ಮಾಡುತ್ತಿದೆ.



ಸಂಜಯ್ ರಾವುತ್, ಶಿವಸೇನಾ ವಕ್ತಾರ

25 ವರ್ಷಗಳ ಹಿಂದೆ

ಶುಕ್ರವಾರ, 6-9-1996

• ಬೆಂಬಲ ವಾಪಸ್ ಭಯವಿಲ್ಲ: ಪ್ರಧಾನಿ ಪಟ್ಟದ ಅಪಾಯ ಚಿಂತೆ ಇಲ್ಲ

ನವದೆಹಲಿ, ಸೆ. 5 (ಪಿಟಿಐ, ಯುಎನ್ಐ)- ಕೇಂದ್ರದ ಸಂಯುಕ್ತರಂಗ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಕಾಂಗ್ರೆಸ್ ವಾಪಸು ಪಡೆಯುವ ಸಾಧ್ಯತೆ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಪ್ರಧಾನಿ ಎಚ್.ಡಿ. ದೇವೇಗೌಡ ಅವರು, 'ಪ್ರಧಾನಿ ಸ್ಥಾನದಲ್ಲಿ ಎಷ್ಟು ದಿನ ಮುಂದುವರಿಯುತ್ತೇನೆ ಎನ್ನುವುದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ' ಎಂದು ಹೇಳಿದ್ದಾರೆ.

ಉತ್ತರಪ್ರದೇಶ ಚುನಾವಣೆಯಲ್ಲಿ ಕಾಂಗ್ರೆಸ್-ಬಿಎಸ್‌ಪಿ ಮೈತ್ರಿಯಿಂದಾಗಿ ಬಹುಮತ ಬಂದರೆ ಕೇಂದ್ರ ಸರ್ಕಾರಕ್ಕೆ ಕಾಂಗ್ರೆಸ್ ನೀಡಿರುವ ಬೆಂಬಲ ವಾಪಸು ಪಡೆಯುತ್ತದೆ ಎಂಬ ವರದಿಯ ಹಿನ್ನೆಲೆಯಲ್ಲಿ ಪ್ರಧಾನಿ ಅವರ ಈ ಹೇಳಿಕೆ ಮಹತ್ವದ್ದಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 6-9-1971

• ಸರ್ಕಾರಿ ಸಾಲಪತ್ರಗಳಲ್ಲಿ ಬಂಡವಾಳ: ಸಾಮಾನ್ಯ ವಿಮಾ ಸಂಸ್ಥೆಗಳಿಗೆ ಕೇಂದ್ರದ ಸೂಚನೆ

ನವದೆಹಲಿ, ಸೆ. 5– ಸರ್ಕಾರಿ ಸಾಲಪತ್ರ ಮುಂತಾದ ಅಂಗೀಕೃತ ವರ್ಗಗಳಲ್ಲಿ ಬಂಡವಾಳವನ್ನು ತೊಡಗಿಸಬೇಕೆಂದು ಎಂದು ಸಾಮಾನ್ಯ ವಿಮಾ ಸಂಸ್ಥೆಗಳ ಬಂಡವಾಳ ಹೂಡಿಕೆ ಬಗ್ಗೆ ಸರ್ಕಾರ ರೂಪಿಸಿರುವ ನೀತಿ ನಿರ್ದೇಶನಗಳಲ್ಲಿ ಒತ್ತಿ ಹೇಳಲಾಗಿದೆ.

ಈ ನಿರ್ದೇಶನಗಳನ್ನು ಶೀಘ್ರದಲ್ಲಿಯೇ ಪ್ರಕಟಗೊಳಿಸಲಾಗುವುದು. ಸಾಮಾನ್ಯ ವಿಮಾ ಸಂಸ್ಥೆಗಳಲ್ಲಿ ಬಂಡವಾಳವಾಗಿ ತೊಡಗಿಸಲು ಸರ್ಕಾರದ ನಿರೀಕ್ಷೆಯಂತೆ ಪ್ರತಿವರ್ಷ 15 ಕೋಟಿ ರೂ.ಗಳಷ್ಟು ಹೆಚ್ಚುವರಿಯಾಗುವ ಅಂದಾಜು ಮಾಡಲಾಗಿದೆ.

• ಭಾರತ- ರಷ್ಯಾ ಒಪ್ಪಂದ: ಕಟುಟೀಕೆ

ನವದೆಹಲಿ, ಸೆ. 5– ಸಂಸತ್ತಿನ ವಿರೋಧ ಪಕ್ಷಗಳ ಸದಸ್ಯರು, ಇಂದು ಇಲ್ಲಿ ಏರ್ಪಡಿಸಿದ್ದ ವಿಚಾರಗೋಷ್ಠಿಯೊಂದರಲ್ಲಿ ಭಾರತ- ರಷ್ಯಾ ಮೈತ್ರಿ ಒಪ್ಪಂದವನ್ನು ಒಂದೇ ಸಮನೆ ತೀವ್ರವಾಗಿ ಟೀಕಿಸಿದರು.

ಸ್ವತಂತ್ರ ಪಕ್ಷದ ನಾಯಕರುಗಳಾದ ಶ್ರೀ ಮೀನುಮಸಾನಿ, ಶ್ರೀ ಪೀಲೂಮೋದಿ ಮತ್ತು ಜನಸಂಘದ ನಾಯಕ ಶ್ರೀ ಬಲರಾಜ ಮಧೋಕ್ ಅವರು ಮಾತನಾಡುತ್ತಾ, 'ಈ ಒಪ್ಪಂದದ ಭಾರತ ರಷ್ಯಾ ಪ್ರಭಾವಕ್ಕೊಳಗಾಗಿ, ರಷ್ಯಾದ ಬಾಲಬಡುಕ ರಾಷ್ಟ್ರವನ್ನಾಗಿ ಮಾಡುತ್ತದೆ' ಎಂದರು.

ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆಯೆಡೆಗೆ ನಡೆಯುವುದು ಭಾರತಕ್ಕೆ ಅಂಥಾ ಕಷ್ಟವೇನಲ್ಲ

ತಣಿಯದ ತಾಳೆ ಎಣ್ಣೆಯ ದಾಹ



ವಿಶ್ಲೇಷಣೆ

ವಿ. ಗಾಯತ್ರಿ

ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 15ರಂದು ಎಣ್ಣೆ ತಾಳೆ ಬೇಸಾಯಕ್ಕೆ ₹ 11 ಸಾವಿರ ಕೋಟಿ ಪ್ರೋತ್ಸಾಹಧನವನ್ನು ಘೋಷಿಸಿ, 6.5 ಲಕ್ಷ ಹೆಕ್ಟೇರ್ ಭೂಮಿಯನ್ನು ಈ ಬೇಸಾಯದಡಿ ತರಲು ಉದ್ದೇಶಿಸಿರುವುದಾಗಿ ತಿಳಿಸಿದರು. ಮುಂದಿನ 15 ವರ್ಷಗಳಲ್ಲಿ ತಾಳೆ ಎಣ್ಣೆಯ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಸದ್ಯ ಭಾರತವು ತನ್ನ ಅಗತ್ಯದ ಖಾದ್ಯತೈಲದ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದು, ಇದರಲ್ಲಿ ಶೇ 40ರಷ್ಟು ತಾಳೆ ಎಣ್ಣೆಯಾಗಿದೆ.

ಭಾರತ ಪ್ರಪಂಚದಲ್ಲೇ ಅತಿಹೆಚ್ಚು ತಾಳೆ ಎಣ್ಣೆ ಬಳಕೆ ಮಾಡುತ್ತಿದ್ದು, ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ವರ್ಷಕ್ಕೆ 1.84 ಕೋಟಿ ಟನ್ ಆಮದು ಮಾಡಿಕೊಳ್ಳುತ್ತದೆ. ಸದ್ಯದ ಬಳಕೆಯ ಪ್ರಮಾಣದಲ್ಲಿ ಭಾರತಕ್ಕೆ 2.5 ಕೋಟಿ ಟನ್ ಖಾದ್ಯತೈಲದ ಅವಶ್ಯಕತೆ ಇದ್ದು, 1.5 ಕೋಟಿ ಟನ್ ಮಾತ್ರ ನಮ್ಮಲ್ಲಿ ಉತ್ಪಾದನೆಯಾಗುತ್ತಿದೆ. ಇದು ಮುಖ್ಯವಾಗಿ ಎಣ್ಣೆಕಾಳುಗಳಿಂದ ಬರುತ್ತಿದೆ.

ಪ್ರಪಂಚದಲ್ಲೇ ಅತ್ಯಂತ ಜನಪ್ರಿಯವಾಗಿರುವ ತಾಳೆ ಎಣ್ಣೆ ಸದ್ಯ ಜಾಗತಿಕ ಮಾರುಕಟ್ಟೆಯಲ್ಲಿ 7.7 ಕೋಟಿ ಟನ್ ಲಭ್ಯವಿದ್ದು, 2024ರ ವೇಳೆಗೆ 10.76 ಕೋಟಿ ಟನ್‌ನ ನಿರೀಕ್ಷೆ ಹೊಂದಲಾಗಿದೆ. ಇದರ ಶೇ 68ರಷ್ಟು ಪಾಲು ಆಹಾರದಲ್ಲಿ, ಶೇ 25ರಷ್ಟು ಕೈಗಾರಿಕೆಯಲ್ಲಿ ಮತ್ತು ಶೇ 5ರಷ್ಟು ಜೈವಿಕ ಇಂಧನದಲ್ಲಿ ಬಳಕೆಯಾಗುತ್ತದೆ. ತಾಳೆ ಎಣ್ಣೆಯ ವಿಶಿಷ್ಟ ಗುಣಗಳಿಂದ ಅದನ್ನು ಅಲಂಕಾರ ಸಾಮಗ್ರಿ, ಸಿದ್ಧ ಆಹಾರ ಮತ್ತು ಡಿಟರ್ಜೆಂಟ್ ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸುತ್ತಾರೆ. ಜೈವಿಕ ಇಂಧನದಲ್ಲಿ ಇದರ ಬೇಡಿಕೆ ಅಧಿಕವಾಗಿದೆ.

ಇದರ ಹೆಕ್ಟೇರ್‌ವಾರು ಉತ್ಪಾದನೆಯು ಎಣ್ಣೆಕಾಳುಗಳಿಗಿಂತ ಹತ್ತು ಪಟ್ಟು ಹೆಚ್ಚು. ಅಗ್ಗವಾಗಿ ದೊರಕುವ 'ಸರ್ವಗುಣ ಸಂಪನ್ನ' ತಾಳೆ ಎಣ್ಣೆಗೆ ಜಾಗತಿಕ ಬೇಡಿಕೆ ಗಗನಕ್ಕೇರಿ ಆಮದು ಸುಂಕವನ್ನು ಕನಿಷ್ಠಗೊಳಿಸಿದ್ದರಿಂದ, ಕೆಲ ಉಷ್ಣವಲಯದ ದೇಶಗಳು ಇದರ ಬೇಸಾಯಕ್ಕೆ ಮುಗಿಬಿದ್ದವು.

ಎಣ್ಣೆ ತಾಳೆಯು ಭೂಮಧ್ಯ ರೇಖೆಯ 20 ಡಿಗ್ರಿ ಒಳಗಡೆ ಬರುವ ಪ್ರದೇಶದಲ್ಲಷ್ಟೇ ಬೆಳೆಯುತ್ತದೆ. ದುರಂತವೆಂದರೆ, ಇಲ್ಲಿ ಸರ್ವಶ್ರೇಷ್ಠ ಮಳೆಕಾಡುಗಳಿದ್ದು ಪ್ರಪಂಚದ ಶೇ 80ರಷ್ಟು ಜೀವವೈವಿಧ್ಯವನ್ನು ಹೊಂದಿವೆ. ಪ್ರಪಂಚದ ತಾಳೆ ಎಣ್ಣೆಯ ಶೇ 80ರಷ್ಟು ಉತ್ಪಾದನೆ ಮಾಡಿ ರಫ್ತು ಮಾಡುತ್ತಿರುವ ಇಂಡೊನೇಷ್ಯಾ ಮತ್ತು ಮಲೇಷ್ಯಾ, ಎಣ್ಣೆ ತಾಳೆ ಬೇಸಾಯಕ್ಕೆ ತಮ್ಮ ಅಮೂಲ್ಯ ಮಳೆಕಾಡಿನ ಅರ್ಧ ಭಾಗವನ್ನು ಈಗಾಗಲೇ ಕಳೆದುಕೊಂಡಿವೆ. ಇಂಡೊನೇಷ್ಯಾದಲ್ಲಿ 2002ರಿಂದ 2020ರವರೆಗೆ ಸುಮಾರು 92.69 ಲಕ್ಷ ಹೆಕ್ಟೇರ್ ಮತ್ತು ಮಲೇಷ್ಯಾದಲ್ಲಿ ಶೇ 47ರಷ್ಟು ಕಾಡಿನ ನಾಶವಾಗಿದೆ. ಅರಣ್ಯವನ್ನು ನಂಬಿ ಬದುಕುವ ಜನರ ಬದುಕು ಮೂರಾಬಟ್ಟೆಯಾಗಿದೆ. ರೈತರು ಎಣೆಯಿಲ್ಲದ ಸಂಕಷ್ಟಕ್ಕೊಳಗಾಗಿದ್ದಾರೆ. ಇಷ್ಟಿದ್ದೂ ತಾಳೆ ಎಣ್ಣೆಗೆ ಮಾತ್ರ ಜಾಗತಿಕ ಬೇಡಿಕೆ ಹೆಚ್ಚುತ್ತಲೇ ಇದೆ. ಬಡ ದೇಶಗಳಲ್ಲಿ ಖಾದ್ಯತೈಲ ಮತ್ತು ಶ್ರೀಮಂತ ದೇಶಗಳಲ್ಲಿ ವಿವಿಧ ಕೈಗಾರಿಕೆಗಳಿಗೆ ಇದೇ ಮುಖ್ಯ ಆಧಾರವಾಗಿದೆ.

ಭಾರತದಲ್ಲಿ ತಾಳೆ ಎಣ್ಣೆ ಉತ್ಪಾದನೆ ಹೆಚ್ಚಿಸಲು ಕೇಂದ್ರ ಸರ್ಕಾರ 2014- 15ರಲ್ಲಿ 'ನ್ಯಾಷನಲ್ ಮಿಷನ್ ಆನ್ ಆಯಿಲ್‌ಸೀಡ್ಸ್ ಆ್ಯಂಡ್ ಆಯಿಲ್ ಪಾಮ್' (NMOOP) ಸ್ಥಾಪಿಸಿ 2018-19ರಲ್ಲಿ ಅದನ್ನು 'ರಾಷ್ಟ್ರೀಯ ಆಹಾರ ಭದ್ರತಾ ಮಿಷನ್' ಜೊತೆ ವಿಲೀನಗೊಳಿಸಿತು. 2019ರಲ್ಲಿ ಕೇಂದ್ರ ಕೃಷಿ ಸಚಿವರು, ದೇಶದ 19 ರಾಜ್ಯಗಳ 19.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆ ತಾಳೆ ಬೆಳೆಯುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ತಾಳೆ ಎಣ್ಣೆ ಉತ್ಪಾದನೆ ಶೇ 45ರಷ್ಟು ಹೆಚ್ಚಾಗಿರುವುದಾಗಿ ಘೋಷಿಸಿದರು. ಆದರೆ ವಾಸ್ತವದಲ್ಲಿ ಎಣ್ಣೆ ತಾಳೆ ಬೆಳೆಯುತ್ತಿದ್ದದ್ದು 16 ರಾಜ್ಯಗಳ 3.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಅದರಲ್ಲಿ ಫಸಲು ಕೊಡುತ್ತಿದ್ದ ಪ್ರದೇಶ 8 ರಾಜ್ಯಗಳ 1.35 ಲಕ್ಷ ಹೆಕ್ಟೇರ್ ಮಾತ್ರ.

ದೇಶದಲ್ಲಿ ಎಣ್ಣೆ ತಾಳೆ ಬೇಸಾಯ ನೆಲ ಕಚ್ಚಿರುವುದನ್ನು ಸಚಿವರು ಮರೆಮಾಚಿದ್ದರು. ನೆಲಕಚ್ಚಲು ಕಾರಣಗಳೂ ಸ್ಪಷ್ಟವಾಗಿದ್ದವು. ಎಣ್ಣೆ ತಾಳೆ ಫಸಲು ಕೊಡಲು ಏಳು ವರ್ಷ ಬೇಕು. ಆ ಅವಧಿಯಲ್ಲಿ ರೈತರಿಗೆ ಆದಾಯ ಶೂನ್ಯ. ಮುಂದೆ ಇಳುವರಿ ಖಾತರಿ ಇಲ್ಲ. ಛತ್ತೀಸಗಡದಲ್ಲಿ ಅರ್ಧಕ್ಕರ್ಧ ಮರಗಳು ಫಲವನ್ನೇ ಕೊಡಲಿಲ್ಲ. ಕರ್ನಾಟಕದಲ್ಲಿ ಹಣ್ಣಿನ ಇಳುವರಿ ಮತ್ತು ಕಚ್ಚಾ ಎಣ್ಣೆ ಪ್ರಮಾಣ ತೀರಾ ಕಡಿಮೆ. ಸಮತಟ್ಟು ಭೂಮಿ, ಅಧಿಕ ಗೊಬ್ಬರ ಬೇಡುವ ಈ ಬೆಳೆಗೆ ಗಿಡವೊಂದಕ್ಕೆ ದಿನಕ್ಕೆ 300 ಲೀಟರ್ ನೀರು ಬೇಕು. ಕೀಟರೋಗ ಬಾಧೆಗೆ ಮಿತಿಯಿಲ್ಲದೆ ರಾಸಾಯನಿಕ ಸಿಂಪಡಣೆ. ಸ್ವತಂತ್ರ ಮಾರುಕಟ್ಟೆ ಇಲ್ಲದ ಇದನ್ನು ಸಸಿ ಕೊಟ್ಟ ಕಂಪನಿಗೇ ಮಾರಬೇಕು.



ಮೂರು ವರ್ಷದಲ್ಲಿ ಸ್ಥಳೀಯವಾಗಿ ಸಂಸ್ಕರಣಾ ಘಟಕ ತೆಗೆಯುವ ಆಶ್ವಾಸನೆಯೊಂದಿಗೆ ರೈತರಿಗೆ ಸಸಿ ಕೊಡುವ ಕಂಪನಿಗಳು ಫಸಲು ಕೈಗೆ ಬಂದರೂ ಸುಳಿವೇ ಇರುವುದಿಲ್ಲ. ರೈತರು ಬಹುದೂರ ಸಾಗಣೆ ಮಾಡಿ ತಲುಪಿಸುವ ವೇಳೆಗೆ ಹಣ್ಣು ಗುಣಮಟ್ಟ ಕಳೆದುಕೊಂಡು ತಿರಸ್ಕೃತವಾಗುವುದೇ ಹೆಚ್ಚು. ಎಣ್ಣೆ ತಾಳೆಯ ಕಟಾವು, ನಾಟಿ ಮತ್ತು ಸಂಸ್ಕರಣೆಗಳಲ್ಲಿ ಬೃಹತ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದುವರೆಗೂ ಅದರ ಶೇ 10ರಷ್ಟು ಮಾತ್ರ ಕೈಗಾರಿಕಾ ಕಚ್ಚಾ ವಸ್ತುವಾಗಿ ಬಳಕೆಯಾಗುತ್ತಿದೆ. ಎಣ್ಣೆ ತಾಳೆ ಬೇಸಾಯದಲ್ಲಿ ಉತ್ಸಾಹದಿಂದ ತೊಡಗಿಕೊಂಡ ಆಂಧ್ರಪ್ರದೇಶ, ಛತ್ತೀಸಗಡದ ಹೆಚ್ಚಿನ ರೈತರು ಫಲ ಕೊಡುವ ಮುನ್ನವೇ ಬೆಳೆ ನಾಶಪಡಿಸಿದ್ದಾರೆ. ಕರ್ನಾಟಕದಲ್ಲಿ 'ಬಂಗಾರದ ಬೆಳೆ' ಎಂದು ರೈತರನ್ನು ಆಕರ್ಷಿಸಿ ಭದ್ರಾ ಅಚ್ಚುಕಟ್ಟು ಪ್ರದೇಶದ ರೈತರನ್ನು ನೆಲಕಚ್ಚಿಸಿದ ದುರಂತ ನಮ್ಮ ಕಣ್ಣಮುಂದಿದೆ. ಆರು ಈಶಾನ್ಯ ರಾಜ್ಯಗಳಲ್ಲಿ 2.18 ಲಕ್ಷ ಹೆಕ್ಟೇರ್ ಪ್ರದೇಶವನ್ನು ಸರ್ಕಾರ ಎಣ್ಣೆ ತಾಳೆ ಬೇಸಾಯಕ್ಕೆ ಗುರುತಿಸಿದ್ದರೂ ಯಾವ ರಾಜ್ಯವೂ ಹೆಚ್ಚಿನ ಆಸಕ್ತಿ ತೋರಲಿಲ್ಲ.

ಹೀಗಿದ್ದೂ ಕೇಂದ್ರ ಸರ್ಕಾರ ಈಗ ರೈತರಿಗೆ ಆರ್ಥಿಕ ಬೆಂಬಲ ಘೋಷಿಸಿ, ನರ್ಸರಿ ಮತ್ತು ಎಣ್ಣೆ ಸಂಸ್ಕರಣಾ ಮಿಲ್‌ಗಳನ್ನು ಸ್ಥಾಪಿಸಲು ಖಾಸಗಿ ಕಂಪನಿಗಳನ್ನು ಆಹ್ವಾನಿಸಿದೆ. ಅದಾನಿ ಮತ್ತು ಪತಂಜಲಿ ಕಂಪನಿಗಳು ಇದರಲ್ಲಿ ತೀವ್ರ ಆಸಕ್ತಿ ತೋರಿ, ವಿವಿಧ ರಾಜ್ಯ ಸರ್ಕಾರಗಳ ಜೊತೆ ಒಪ್ಪಂದಕ್ಕೆ ಸಹಿ ಹಾಕಿವೆ. ಕಾಡು ನಾಶಪಡಿಸದೆ ಎಣ್ಣೆ ತಾಳೆ ಬೇಸಾಯ ಮಾಡಬೇಕಾದರೆ, ಉತ್ಪತ್ತಿ ಕಳೆದುಕೊಂಡಿರುವ ಭತ್ತದ ಗದ್ದೆಗಳನ್ನು ಮತ್ತು ಕಾಡಂಚಿನಲ್ಲಿ ಗಿರಿಜನರು ಬೇಸಾಯ ಮಾಡುವ ಭೂಮಿಯನ್ನು ಬಳಸಬಹುದು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಉಮೇಶ್ ಶ್ರೀನಿವಾಸನ್ ಶಿಫಾರಸು ಮಾಡಿದ್ದಾರೆ! ಪಟ್ಟಣ ಸೇರಿದ ಜಮೀನುದಾರರ ಬೀಳು ಭೂಮಿಗಳನ್ನು ಬಳಸಿಕೊಳ್ಳುವುದಾಗಿ ಆಂಧ್ರಪ್ರದೇಶ ಸರ್ಕಾರ ಹೇಳಿದೆ. ಇದೀಗ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಅಂಡಮಾನ್- ನಿಕೊಬಾರ್‌ಗೆ ದೌಡಾಯಿಸಿ, ಅಲ್ಲಿ ಎಣ್ಣೆ ತಾಳೆ ಬೇಸಾಯಕ್ಕೆ ಇರುವ ಅವಕಾಶಗಳನ್ನು ಶೋಧಿಸುತ್ತಿದೆ. ಒಟ್ಟಿನಲ್ಲಿ ಇವೆಲ್ಲಾ ಪ್ರಹಸನದಂತೆ ಕಾಣುತ್ತಿವೆ.

ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆಯೆಡೆಗೆ ನಡೆಯುವುದು ಭಾರತಕ್ಕೆ ಅಂತಹ ಕಷ್ಟವೇನಲ್ಲ. ನಮ್ಮಲ್ಲಿ ಶೇ 70ಕ್ಕೂ ಹೆಚ್ಚಿರುವ ಮಳೆಯಾಶ್ರಿತ ಪ್ರದೇಶಕ್ಕೆ ಎಣ್ಣೆ ಕಾಳುಗಳು ಹೇಳಿ ಮಾಡಿಸಿದ ಬೆಳೆಗಳು. 1990ರ ದಶಕದಲ್ಲಿ 'ಹಳದಿ ಕ್ರಾಂತಿ'ಯ ಮೂಲಕ ದೇಶದಲ್ಲಿ ಎಣ್ಣೆ ಕಾಳುಗಳ ಉತ್ಪಾದನೆಯನ್ನು ಹೆಚ್ಚು ಮಾಡಲು ಪ್ರಯತ್ನಿಸಿದರೂ, ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ನಿಬಂಧನೆಗಳಿಂದಾಗಿ ಯಶಸ್ಸು ಕಾಣಲಾಗಲಿಲ್ಲ. ಭಾರತ ತನ್ನ ಎಣ್ಣೆಕಾಳು ಬೆಳೆಗಾರರಿಗೆ ಕೊಡುವ (ಅಲ್ಪ) ಸಬ್ಸಿಡಿಯ ಮೇಲೆ ಸದಸ್ಯ ದೇಶಗಳ ಕೆಂಗಣ್ಣು.

ಎಣ್ಣೆಕಾಳು ಫಸಲಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ, ಹೆಚ್ಚು ರಾಸಾಯನಿಕ ಬಳಸದೇ ಉತ್ಪಾದನೆ ಹೆಚ್ಚಳಕ್ಕೆ ಅಗತ್ಯವಾದ ಮಾರ್ಗೋಪಾಯಗಳನ್ನು ಕಂಡುಕೊಂಡರೆ, ದೇಶವು ಖಾದ್ಯತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಅಸಾಧ್ಯವೇನಲ್ಲ.

ಚುರುಮುರಿ



ಯಾರು ಮಾದರಿ?

• ಚಂದ್ರಕಾಂತ ವಡ್ಡು

ತಿಂಗಳೇಶ ಅನೇಕ ವಿಷಯಗಳಲ್ಲಿ ತನಗೆ ತಾನೇ ಮಾದರಿ. ಅವನು ಕದ್ದಾಲಿಸಲು ಪೆಗಾಸಸ್ ಮೊರೆ ಹೋಗಿ ಸಿಕ್ಕಿಬೀಳುವ ಪೈಕಿ ಅಲ್ಲ. ಅವನಿಗೆ ಗೂಢಚರ್ಯೆ ಮಾಡಲು ತನ್ನ ಮನೆಯ ಟೆರೇಸ್ ಸಾಕು. ಅಲ್ಲಿ ವಾಕ್ ಮಾಡುವಾಗ ನೆರೆಮನೆಯವರ ಟಾಕ್‌ಗಳು ತಿಂಗಳೇಶನ ಕಿವಿಯೊಳಗೆ ಉಪ್ಪು, ಹುಳಿ, ಖಾರ, ಸಿಹಿ, ಕಹಿ, ಸಪ್ಪೆ- ಎಲ್ಲಾ ತುಂಬಿಸುತ್ತವೆ. ಬೆಳಿಗ್ಗೆ ಪಕ್ಕದ ಮನೆಯ ಮಧ್ಯಮವರ್ಗದ ಕುಟುಂಬದಲ್ಲಿ ಶುರುವಾಯ್ತು ಸಂಭಾಷಣೆ.

'ರೀ... ಪೇಪರ್ ಓದಿದ್ರಾ...?' ವಾಟ್ಸ್‌ಆ್ಯಪ್‌ನಲ್ಲಿ ತಲ್ಲೀನನಾಗಿದ್ದ ಗಂಡ, 'ಹ್ಞೂಂ' ಎಂದು ಎಂದಿನಂತೆ ಸುಳ್ಳು ಉದುರಿಸಿದ. 'ನೋಡಿ, ಮುಖ್ಯಮಂತ್ರಿಗಳು ವಾಹಿನಿಯಲ್ಲಿ ಮಕ್ಕಳೊಂದಿಗೆ ಖುಷಿಯಿಂದ ಮಾತಾಡಿ ಹಾಡು ಗುನುಗಿದ್ದಾರೆ'.

'ಹೌದ್ಹೌದು, ಅವರಿಗೆ ಹೋದಲ್ಲೆಲ್ಲಾ ಗೌರವ ವಂದನೆ, ಜೀರೊ ಟ್ರಾಫಿಕ್, ಹಾರತುರಾಯಿ ಬೇಡವಂತೆ. ಎಲ್ಲ ಮಂತ್ರಿಗಳಿಗೂ ಮಾದರಿ ಆಗಿದ್ದಾರೆ ನೋಡು'.

'ಮಂತ್ರಿಗಳಿಗೆ ಮಾದರಿ ಅನ್ನೋದನ್ನ ಮಾತ್ರ ನಾನು ಒಪ್ಪೋದಿಲ್ಲ...' ಅಭಿಪ್ರಾಯಭೇದ ನುಸುಳಿತು. 'ಹೋಗಲಿ ಬಿಡು, ಮಕ್ಕಳಿಗಾದರೂ ಮಾದರಿ ಆಗಿದ್ದಾರಲ್ಲ'.

'ಅವರು ಮಕ್ಕಳಿಗೆ ಹೇಗೆ ಮಾದರಿ ಆಗ್ತಾರೆ?' ಭಿನ್ನಮತ ಬಹಿರಂಗವಾಯಿತು. ನೀವು ಮೂರು ಹೊತ್ತೂ ವಾಟ್ಸ್‌ಆ್ಯಪ್‌ನಲ್ಲಿ ಮುಳುಗಿರುತ್ತೀರಿ. ಎಂದಾದರೂ ಫೇಸ್‌ಬುಕ್ ನೋಡೀರೇನು?'

ಮೊನ್ನೆ ಮೊನ್ನೆ ಸ್ಮಾರ್ಟ್ ಫೋನ್ ಕೊಡಿಸಿಕೊಂಡ ಹೆಂಡತಿ ಫೇಸ್‌ಬುಕ್ ತನಕ ಬೆಳೆದಿದ್ದು ತಿಳಿದು ಗಂಡ ಗಾಬರಿಗೊಂಡ.

'ನಮ್ಮ ಮುಖ್ಯಮಂತ್ರಿ ಹಗಲೂರಾತ್ರಿ ಫೇಸ್‌ಬುಕ್ಕಿನಲ್ಲಿ ಆ್ಯಕ್ಟಿವ್ ಆಗಿರ್ತಾರೆ. ಕುಂತಿದ್ದು, ನಿಂತಿದ್ದು, ನೀರು ಕುಡಿದಿದ್ದು, ಉಂಡಿದ್ದು, ಉಸಿರಾಡಿದ್ದು ಎಲ್ಲಾ ಫೋಟೊಗಳನ್ನು ಹಂಚಿಕೊಳ್ಳೋದೇ ಅವರ ಕೆಲಸ. ಅವರ ಮಂತ್ರಿಗಳೂ ಇದನ್ನೇ 'ಮಾದರಿ' ಮಾಡಿಕೊಂಡರೆ ಸರ್ಕಾರ ನಡೆಯೋದು ಹೇಗೆ?'

'ಮಮ್ಮೀ... ಫೇಸ್‌ಬುಕ್ ತೆಗೆದರೆ ನನಗ ಸುಮ್ಮನೆ ಬೈತಿ. ನಮ್ಮ ಮುಖ್ಯಮಂತ್ರಿ ನೋಡಿ ನೀನೂ ಕಲಿ'– ಮಗಳ ಸಲಹೆ ಇಬ್ಬರಿಗೂ ಬ್ರೇಕ್ ತೆಗೆದುಕೊಳ್ಳುವ ಸಮಯ ನೆನಪಿಸಿತು!

ಸಂಗತ

ಹೀಗಿದ್ದರು, ಆ ಗುರುವರ್ಯರು

ನಲ್ಮೆಯ ಗುರುವಿಗೆ ಸಂದ ಆ ಹೃದಯಸ್ಪರ್ಶಿ ವಿದಾಯಕ್ಕೆ ಶತಮಾನ

• ಬಿ.ಎಸ್.ಭಗವಾನ್

ಮೈಸೂರು ವಿಶ್ವವಿದ್ಯಾಲಯದ ಕನ್ನಡದ ಮೊದಲ ಪ್ರೊಫೆಸರ್ ಎಂಬ ಹೆಗ್ಗಳಿಕೆಯ ಟಿ.ಎಸ್.ವೆಂಕಣ್ಣಯ್ಯ ಅವರು ವಿದ್ವತ್ತು, ಸಂಪನ್ನತೆ, ಸರಳತೆ, ಶಿಷ್ಯ ವಾತ್ಸಲ್ಯಕ್ಕೆ ಹೆಸರಾದವರು. ಅವರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆಯೇ ಭಾವಿಸಿದ ಗುರುವರ್ಯರು. ಮನೆಗೆ ಬರುವ ವಿದ್ಯಾರ್ಥಿಗೆ 'ಕೈ ಕಾಲು ತೊಳೆದುಕೊ, ಊಟ ಮಾಡುವಿಯಂತೆ' ಎನ್ನುತ್ತಿದ್ದ ಅವರ ಮನೆ ಗುರುಕುಲವೇ ಆಗಿತ್ತು.

ವೆಂಕಣ್ಣಯ್ಯ, ತೀ.ನಂ.ಶ್ರೀ., ಎ.ಆರ್.ಕೃಷ್ಣಶಾಸ್ತ್ರೀ- ಈ ತ್ರಿಮೂರ್ತಿ ಮಹನೀಯರಿಗೆ ಕನ್ನಡದ ಅಶ್ವಿನಿ ದೇವತೆಗಳೆನ್ನುವುದು ಇಂದಿಗೂ ಮನೆಮಾತು. ಒಮ್ಮೆ ವೆಂಕಣ್ಣಯ್ಯನವರು ಪಂಪನ ಕುರಿತ ಭಾಷಣಕ್ಕೆ ತಯಾರಾಗುತ್ತಿದ್ದುದನ್ನು ಗಮನಿಸಿದ ಅವರ ಆಪ್ತರೊಬ್ಬರು ಅಚ್ಚರಿಯಿಂದ 'ಇದೇನು ಸರ್, ಘನ ಪಾಂಡಿತ್ಯವುಳ್ಳ ನಿಮಗೂ ಪೂರ್ವಸಿದ್ಧತೆಯೇ' ಎಂದು ಪ್ರಶ್ನಿಸಿದರು. 'ಎಂತಹ ಪರಿಶ್ರಮವಿರಲಿ, ಪೂರ್ವಸಿದ್ಧತೆ ಅತ್ಯಗತ್ಯ. ಇಲ್ಲದಿದ್ದರೆ ತಬ್ಬಿಬ್ಬು, ವಿಷಯಾಂತರ ಖಾತರಿ' ಎಂದರಂತೆ ಪ್ರೊಫೆಸರ್.


ತರಗತಿಯಲ್ಲಿ ವಿದ್ಯಾರ್ಥಿಗಳು ಕಲಿಯಲು ಅನುಕೂಲಕರವೂ ಆಸಕ್ತವೂ ಆದ ವಾತಾವರಣ ಸೃಷ್ಟಿಸುವಲ್ಲಿ ಅಧ್ಯಾಪನದ ಶ್ರೇಷ್ಠತೆಯಿದೆ. ಅಧ್ಯಾಪಕರು ತಾಕಲಾಟಕ್ಕೀಡುಮಾಡುವ ಪ್ರಶ್ನೆಗಳನ್ನು ಮಂಡಿಸಿ ಆ ಮೂಲಕ ಹೊಸ ಹೊಳಹುಗಳಿಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು ಮಾದರಿ. ತಾದಾತ್ಮ್ಯದಿಂದ ಜಗತ್ತನ್ನು ಮಕ್ಕಳ ಕಣ್ಣುಗಳ ಮೂಲಕ ನೋಡುವ ಪ್ರವೃತ್ತಿ ಶಿಕ್ಷಕರಿಗಿದ್ದರೆ ತರಗತಿ ಸಜೀವವಾಗುತ್ತದೆ, ಕಳೆಗಟ್ಟುತ್ತದೆ. ಅಧ್ಯಾಪನಕ್ಕೆ ತಿಳಿಹಾಸ್ಯದ ಸ್ಪರ್ಶವಾದರಂತೂ ಮಕ್ಕಳ ತುಟಿಗಳಲ್ಲಿ ನಗು, ಮನಸ್ಸುಗಳು ಹಗುರ.

ತರಗತಿಯೆನ್ನುವುದು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೊತೆಗೂಡಿ ಕಲಿಯುವ ತಾಣ. ಶಿಕ್ಷಕರು ಕಲಿಸುತ್ತಲೇ ಕಲಿತರೆ, ವಿದ್ಯಾರ್ಥಿಗಳು ಕಲಿಯುತ್ತಲೇ ಕಲಿಸುತ್ತಾರೆ. ಹಾಗಾಗಿ ತರಗತಿ ಸಂವಾದಕ್ಕೆ ಒತ್ತು ನೀಡುವ ವೇದಿಕೆಯಾಗಬೇಕೆ ಹೊರತು ಪಠ್ಯಕ್ರಮ, ಪಾಠಕ್ಕೆ ಸೀಮಿತವಾಗಬಾರದು.

ಖಂಡಾಂತರ ವ್ಯಾಧಿ ಕೋವಿಡ್ ಕಾಡುತ್ತಿರುವಾಗ ಆನ್‌ಲೈನ್ ಬೋಧನೆಯಿಂದ ಇನ್ನೂ ಪೂರ್ತಿಯಾಗಿ ಹೊರಬರಲಾಗಿಲ್ಲ. ಆನ್‌ಲೈನ್ ತರಗತಿಯ ಇತಿಮಿತಿಗಳು ಗೊತ್ತೇ ಇದೆ. ಇದರ ನಡುವೆಯೂ ಸಕಾರಾತ್ಮಕವಾಗಿ ಭರವಸೆಯಿಂದಲೇ ಆಲೋಚಿಸೋಣ. ವಿದ್ಯಾರ್ಥಿಗಳಿಗೋ ಮನೆಯ ಸುರಕ್ಷತೆ, ಗುರುವೊಂದಿಗೆ ಹಿರಿಯರ ಸಮ್ಮುಖವೂ ಲಭಿಸಿ ಕೌಶಲ ವೃದ್ಧಿಗೆ ಉತ್ತಮ ಉತ್ತೇಜನ, ಸಮಯದ ಸಮರ್ಥ ವಿನಿಯೋಗ.

ರಾಷ್ಟ್ರಪತಿಯಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ ಸೆಪ್ಟೆಂಬರ್ 5. ಅನುಪಮ ಶಿಕ್ಷಕರಾಗಿದ್ದ ಅವರು ತಮ್ಮ ಜನ್ಮದಿನವನ್ನು ಶಿಕ್ಷಕರ ದಿನವಾಗಿ ಆಚರಿಸಲು ಅಪೇಕ್ಷಿಸಿದರು. 2021ರ ವಿಶೇಷವೆಂದರೆ, ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ವಿದ್ಯಾರ್ಥಿಗಳಿಂದ ಪ್ರದಾನವಾದ ಅಪೂರ್ವ ಬೀಳ್ಕೊಡುಗೆಗೆ ಒಂದು ಶತಮಾನ.

ಡಾ. ರಾಧಾಕೃಷ್ಣನ್ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರ ಬೋಧನೆಯು ವಿದ್ಯಾರ್ಥಿಗಳಿಗೆ ಹಬ್ಬವೆನ್ನಿಸಿತ್ತು. ತತ್ವಶಾಸ್ತ್ರ ಹೇಳಿಕೇಳಿ ಕಬ್ಬಿಣದ ಕಡಲೆ! ಅದನ್ನು ಸರಳಗೊಳಿಸುತ್ತಿದ್ದ ರಾಧಾಕೃಷ್ಣನ್ ಒಬ್ಬ ಜಾದೂಗಾರನಂತೆ ತೋರುತ್ತಿದ್ದರು. ಅವರ ವಿದ್ಯಾರ್ಥಿಯಾಗಿದ್ದ ಎ.ಎನ್. ಮೂರ್ತಿರಾಯರು ತಮ್ಮ 'ಅಲೆಯುವ ಮನ'ದಲ್ಲಿ ರಾಧಾಕೃಷ್ಣನ್ ಅವರ ತರಗತಿಯನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ: 'ಪಾಠ ಆರಂಭಕ್ಕೆ ಮೊದಲು ಸುಮಾರು ಹತ್ತು ನಿಮಿಷ ವಿದ್ಯಾರ್ಥಿಗಳನ್ನು ಮಾತಾಡಿಸಿ, ಕೀಟಲೆ ಮಾಡಿ ನಗಿಸುವುದಕ್ಕೆ ಮೀಸಲು. ಆಗ ಗುರುಶಿಷ್ಯರು ಕಾಫಿ ಒಳ್ಳೆಯದೊ ಅಥವಾ ಟೀನೋ, ಬಂಧನವಿಲ್ಲದ ಸ್ವಾತಂತ್ರ್ಯವುಂಟೇ, ಪ್ರಾಚಾರ್ಯರಂತೆ ಎಲ್ಲರೂ ನಿಲುವಂಗಿ ಧರಿಸಿದರೆ ಹೇಗೆ?... ಇಂಥ ಹತ್ತು ಹಲವು ಪ್ರಶ್ನೆಗಳು. ಹಿಂದಿನ ತರಗತಿಯ ಪಾಠದ ಪುನರಾವರ್ತನೆಯೇ ಒಂದು ಸಮಾರಾಧನೆ. ವಾಕ್‌ಸೌಂದರ್ಯವೂ ವಿಚಾರಸರಣಿಯೂ ಹದವಾಗಿ ಬೆರೆತ ಪಾಕ. ಸಮೃದ್ಧ ವಿವರಣೆ...'



1921, ಒಂದು ದಿನ ವಿದ್ಯಾರ್ಥಿಗಳಿಗೆ ಅರಗಿಸಿಕೊಳ್ಳಲಾಗದ ಸುದ್ದಿ. ತಮ್ಮ ಅಚ್ಚುಮೆಚ್ಚಿನ ಗುರುವರ್ಯರಿಗೆ ಕಲ್ಕತ್ತಾದ ವಿಶ್ವವಿದ್ಯಾಲಯಕ್ಕೆ ವರ್ಗವಾಗಿದೆ ಎನ್ನುವುದು. ತನ್ನ ಇಂಪಾದ ಗಾನ ನಿಲ್ಲಿಸಿ ಸಂಗೀತಪಟುವೊಬ್ಬ ವೇದಿಕೆಯಿಂದ ಕೆಳಗಿಳಿದರೆ ಶ್ರೋತೃಗಳಿಗೆ ಹೇಗಾಗಬೇಡ? ಆದರೆ ಕೋಗಿಲೆಯನ್ನು ಕಳುಹಿಸಿಕೊಡದೆ ಗತ್ಯಂತರವಿಲ್ಲ.

ಅಂದು ಡಾ. ರಾಧಾಕೃಷ್ಣನ್ ಪ್ರಯಾಣಿಸುವ ದಿನ. ಬೆಳಗ್ಗೆ ಹತ್ತೂವರೆ ವೇಳೆಗೆ ವಿದ್ಯಾರ್ಥಿಗಳ ಒಂದು ಗುಂಪು ಲಕ್ಷ್ಮೀಪುರಂನ ಅವರ ಮನೆಯ ಬಳಿ ತೆರಳಿತು. ರಾಧಾಕೃಷ್ಣನ್ ಅವರನ್ನು ರೈಲು ನಿಲ್ದಾಣಕ್ಕೆ ಕರೆದೊಯ್ಯಲು ಸಾರೋಟು ಸಿದ್ಧವಾಗಿ ನಿಂತಿತ್ತು. ವಿದ್ಯಾರ್ಥಿಗಳು ಮಾಡಿದ್ದೇನು? ಕುದುರೆಯನ್ನು ಬಿಚ್ಚಿದರು. ಸಾರೋಟನ್ನು ನೀರಿನಿಂದ ತೊಳೆದು ಹೂಗಳಿಂದ ಅಲಂಕರಿಸಿದರು. ಇನ್ನೊಂದು ಗುಂಪು ಆಗಲೇ ರೈಲು ನಿಲ್ದಾಣಕ್ಕೆ ಹೋಗಿ ರಾಧಾಕೃಷ್ಣನ್ ಪ್ರಯಾಣಿಸಲಿದ್ದ ಬೋಗಿಯನ್ನು ತಳಿರು ತೋರಣಗಳಿಂದ ಶೃಂಗರಿಸಿತ್ತು. ಗುರುವನ್ನು ಕೂರಿಸಿ ಸಾರೋಟನ್ನು ಸ್ವತಃ ವಿದ್ಯಾರ್ಥಿಗಳೇ ಮನೆಯಿಂದ ರೈಲು ನಿಲ್ದಾಣದ ತನಕ ಎಳೆದರು. 'ಮತ್ತೆ ಬರುವೆ' ಅನ್ನುತ್ತ ಗುರುಗಳು ಬೋಗಿ ಏರಿದರು. ರೈಲು ಮರೆಯಾಗುವವರೆಗೆ ಕಣ್ಣೀರುಗರೆಯುತ್ತಿದ್ದ ಶಿಷ್ಯರು, ಅಧ್ಯಾಪಕರು, ಪೋಷಕರು 'ಗುರುಗಳಿಗೆ ಜಯವಾಗಲಿ' ಎನ್ನುತ್ತಿದ್ದರು. ಕೈ ಬೀಸುತ್ತಿದ್ದ ರಾಧಾಕೃಷ್ಣನ್ ಅವರ ಕಣ್ಣಾಲಿಗಳು ತುಂಬದಿರಲು ಸಾಧ್ಯವೇ?

ನಿಸ್ಸಂದೇಹವಾಗಿ ಮೈಸೂರು ಅಂದು 'ಟ್ರಾಫಿಕ್ ಜಾಂ' ಪರಿಚಯಿಸಿಕೊಂಡಿತ್ತು! ರಾಧಾಕೃಷ್ಣನ್ ಈ ಅಪೂರ್ವ ಬೀಳ್ಕೊಡುಗೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದ್ದರು: 'ನನಗೆ ನನ್ನ ಬದುಕಿನಲ್ಲಿ ಏನೆಲ್ಲ ಸನ್ಮಾನ, ಸತ್ಕಾರ, ಪ್ರಶಸ್ತಿಗಳು ಸಂದಿವೆ. ಆದರೆ ಮೈಸೂರಿನಲ್ಲಿ ವಿದ್ಯಾರ್ಥಿಗಳು ನೀಡಿದ ಗೌರವವನ್ನು ಮಾತ್ರ ಮರೆಯಲಾರೆ'.

ವಾಚಕರ ವಾಣಿ

ಭಕ್ತರಿಗೆ ಇಲ್ಲದ ಮನಃಸ್ಥಿತಿ

ಮಥುರಾದಲ್ಲಿ ಮದ್ಯ, ಮಾಂಸಾಹಾರ ಮಾರಾಟ ನಿಷೇಧಕ್ಕೆ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮುಂದಾಗಿದ್ದಾರೆ ಎಂಬ ಸುದ್ದಿಗೆ ಬಾಲಕೃಷ್ಣ ಎಂ.ಆರ್. ಅವರು ಪ್ರತಿಕ್ರಿಯಿಸಿ (ವಾ.ವಾ., ಸೆ. 2) 'ಹೀಗೆ ಮಾಡಿದರೆ ಅಲ್ಲಿಗೆ ಭೇಟಿ ನೀಡುವವರ ಸಂಖ್ಯೆ ಕಡಿಮೆಯಾಗುತ್ತದೆ. ಆದಿತ್ಯನಾಥ ಅವರು ಜನರನ್ನು ಸನ್ಯಾಸಿ ಮಾಡಲು ಹೊರಟಿದ್ದಾರೆ' ಎಂದು ಹೇಳಿರುವುದು ಸರಿಯಲ್ಲ. ಮಾಂಸಾಹಾರ, ಮದ್ಯ ಸೇವಿಸದಿರುವವರೆಲ್ಲ ಸನ್ಯಾಸಿಗಳೇನೂ ಆಗಿರುವುದಿಲ್ಲ. ಮಾಂಸಾಹಾರ, ಮದ್ಯ ಸೇವನೆಗೆ ಧಾರ್ಮಿಕ ಕ್ಷೇತ್ರವೇ ಆಗಬೇಕೆಂದೇನೂ ಇಲ್ಲ. ಅಲ್ಲಿಗೆ ನಾವು ಹೋಗುವುದು ಇಂಥ ದುಶ್ಚಟಗಳ ಆವಾಹನೆಗಲ್ಲ. ಧಾರ್ಮಿಕ ಕ್ಷೇತ್ರದಲ್ಲಿ ಭಕ್ತರು ತಮ್ಮ ತಮ್ಮ ಹರಕೆ ತೀರಿಸಿ, ದೇವರ ಸೇವೆ ಮಾಡಿ, ಪ್ರಸಾದ ಭೋಜನ ಪಡೆದು ಹಿಂದಿರುಗುವ ಪರಂಪರೆ ಲಾಗಾಯ್ತಿನಿಂದಲೂ ಜಾರಿಯಲ್ಲಿದೆ. ಅಷ್ಟಕ್ಕೂ ಧಾರ್ಮಿಕ ಕ್ಷೇತ್ರದಲ್ಲಿ ಇಂಥ ಆಹಾರ, ಮದ್ಯವನ್ನು ಸೇವಿಸಲೇಬೇಕೆಂಬ ಹಟವೂ ಅಲ್ಲಿಗೆ ಬರುವ ಆಸ್ತಿಕ ಭಕ್ತರಿಗೆ ಇರುವುದಿಲ್ಲ! ಮದ್ಯ ಸೇವಿಸಿ ದೇವರಿಗೆ ಪೂಜೆ, ಪುನಸ್ಕಾರ ಸಲ್ಲಿಸುವ ಸಂಸ್ಕೃತಿ ನಮ್ಮಲ್ಲಿಲ್ಲ. ಭಕ್ತರಿಗೆ ಇಲ್ಲದ ಮನಃಸ್ಥಿತಿಯನ್ನು ಅನಗತ್ಯವಾಗಿ ತುಂಬಿ ಗೊಂದಲ ಸೃಷ್ಟಿಸುವುದು ಯಾಕೆಂಬುದು ತಿಳಿಯದು.

ಗಣಪತಿ ಶಿರಳಗಿ, ಸಾಗರ

ಪುಸ್ತಕೋದ್ಯಮಕ್ಕೆ ತೆರಿಗೆ: ಸರಳೀಕರಣ ಬೇಡ

ಪುಸ್ತಕೋದ್ಯಮಕ್ಕೆ ಜಿಎಸ್‌ಟಿ ಬೇಡ ಎಂದು ಮನು ಬಳಿಗಾರ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಸೆ. 3). ಪ್ರಕಾಶನ ಒಂದು ಉದ್ಯಮ. ಅದಕ್ಕೆ ತೆರಿಗೆ ವಿಧಿಸುವುದರಲ್ಲಿ ತರ್ಕ ಇದೆ. ಲೇಖನವನ್ನೇ ಜೀವನೋಪಾಯ ಮಾಡಿಕೊಂಡಿರುವವರು ವಿರಳ. ಹಿಂದೆ ಯು.ಆರ್. ಅನಂತಮೂರ್ತಿ, ಈಗ ಎಸ್.ಎಲ್. ಭೈರಪ್ಪನವರು ಗಣನೀಯ ಪ್ರಮಾಣದಲ್ಲಿ ಗೌರವಧನ ಪಡೆದಿರಬಹುದು. ಅದಕ್ಕೆ ಜಿಎಸ್‌ಟಿ ಇದೆ (ಶೇ 12, ಇದನ್ನು ಪ್ರಕಾಶಕರು ಭರಿಸುತ್ತಾರೆ). ಪುಸ್ತಕ ಮುದ್ರಣವೂ ಒಂದು ಉದ್ಯಮ- ಕಂಟೆಂಟ್ ಅನ್ನು ಪಬ್ಲಿಷರ್ ಕೊಟ್ಟಾಗ, ಕಾಗದ ಇತ್ಯಾದಿಗಳನ್ನು ಪ್ರಿಂಟರ್ ಒದಗಿಸಿದಾಗ ಶೇ 18ರಷ್ಟು ತೆರಿಗೆ ಇದೆ (ಅನ್‌ಕೋಟೆಡ್ ಪೇಪರ್‌ಗೆ ಶೇ 12). ಓದುಗನಿಗೆ ಮುದ್ರಿತ ಪುಸ್ತಕ ಕೊಂಡಾಗ ತೆರಿಗೆ ಹೊರೆ ಇಲ್ಲ. ಆದರೆ ಬೇರೆ ಮುದ್ರಿತ ಸಾಮಗ್ರಿಗೆ (brochure, leaflet) ಶೇ 5ರಷ್ಟು ಜಿಎಸ್‌ಟಿ ಇದೆ. ಈಗ ಟರ್ನ್ ಓವರ್ (ವಹಿವಾಟು) ಮೊತ್ತಗಳನ್ನು ಗಮನಾರ್ಹವಾಗಿ ಹೆಚ್ಚಿಸಿರುವುದರಿಂದ ಪುಸ್ತಕೋದ್ಯಮಕ್ಕೆ ಸಂಬಂಧಿಸಿದ ಸಂಸ್ಥೆಗಳೂ ಅದರ ಲಾಭ ಪಡೆಯುತ್ತಿರಬಹುದು.

ಒಟ್ಟಾರೆ 'ಪ್ರಕಾಶಕರು, ಲೇಖಕರ ಮೇಲೆ ಹೊರೆ' ಎಂದು ಸರಳೀಕರಿಸುವುದು ಸರಿಯಲ್ಲ. ಸಣ್ಣ ಪ್ರಕಾಶಕರು, ಖ್ಯಾತರಲ್ಲದ ಲೇಖಕರು, ಉತ್ತಮ ಹಸ್ತಪ್ರತಿ ಇದ್ದರೂ ಪ್ರಕಾಶಕರು ಸಿಗದೆ ತಮ್ಮ ಖರ್ಚಿನಲ್ಲಿ ಮುದ್ರಿಸಿ ಮಾರಾಟಕ್ಕಾಗಿ ಒದ್ದಾಡುವ ಲೇಖಕರು ಇದ್ದಾರೆ. ಪ್ರಕಾಶಕರ ಸಂಘ ಈ ಬಗೆಗೆ ಏನು ಮಾಡುತ್ತಿದೆ? ಸಗಟು ಖರೀದಿ, ಕೆಲವು ಅನುಕೂಲಸ್ಥ ಬರಹಗಾರರನ್ನೇ ಪ್ರೋತ್ಸಾಹಿಸುವುದು, ಪರಸ್ಪರ ಪ್ರಶಸ್ತಿ ನೀಡಿಕೆ- ಇವೇ ಮುಖ್ಯ ಆದಂತಿದೆ. ಸಣ್ಣವರೂ ಈ ಕೊರೊನಾ ಕಾಲದಲ್ಲಿ ಬದುಕಿಕೊಳ್ಳಲು ಸರ್ಕಾರಗಳು ಕೆಲವು ತೆರಿಗೆ ಕಡಿತ ಮಾಡುವುದು ಉಚಿತ, ಎಲ್ಲರಿಗೂ ಮಾಫಿ ಮಾಡುವ ಅಗತ್ಯ ಇಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪಲಾಯನವಾದದ ಉತ್ತರ ಸರಿಯಲ್ಲ

ಡೀಸೆಲ್, ಪೆಟ್ರೋಲ್ ಬೆಲೆ ಏರಿಕೆ ಕುರಿತ ಸುದ್ದಿಗಾರರ ಪ್ರಶ್ನೆಗೆ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು, 'ಒಂದು ಪೆಟ್ರೋಲ್, ಒಂದು ಟೊಮೆಟೊ, ಒಂದು ಈರುಳ್ಳಿ ಬಗ್ಗೆ ನಾನು ಮಾತನಾಡಲ್ಲ. ಆರ್ಥಿಕ ತಜ್ಞರ ರೀತಿಯಲ್ಲಿ ನೀವು ಪ್ರಶ್ನೆ ಕೇಳಬೇಕು' ಎಂದು ಹೇಳುವ ಮೂಲಕ ಪಲಾಯನವಾದದ ಉತ್ತರ ನೀಡಿದ್ದಾರೆ.

ಪೆಟ್ರೋಲ್, ಡೀಸೆಲ್, ಗ್ಯಾಸ್, ಈರುಳ್ಳಿ, ಟೊಮೆಟೊ ದೇಶದ ಸಾಮಾನ್ಯ ನಾಗರಿಕರು ಪ್ರತಿನಿತ್ಯ ಉಪಯೋಗಿಸುವ ಅಗತ್ಯ ವಸ್ತುಗಳಾಗಿವೆ. ದೇಶದಲ್ಲಿ ಕಡಿಮೆ ಜನರಿಗೆ ನೀಡುತ್ತಿರುವ ಸೌಲಭ್ಯವನ್ನು ದೊಡ್ಡದಾಗಿ ಹೇಳುತ್ತಾ, ಬಹುಪಾಲು ಜನ ಬಳಸುವ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಾ ಹೋಗುವುದು ಸರಿಯಲ್ಲ. ಕೇವಲ ಚುನಾವಣಾ ತಂತ್ರಗಳಿಗೆ ಆಶ್ವಾಸನೆಗಳು ಸೀಮಿತವಾಗದಿರಲಿ. ಜನಸಾಮಾನ್ಯರ ಬವಣೆಗಳ ಕಡೆ ಗಮನವಿರಲಿ.

ಡಾ. ಎಚ್.ಮಲ್ಲತ್ತಹಳ್ಳಿ ತುಕಾರಾಂ, ಬೆಂಗಳೂರು

ಗಣೇಶ ಮಂಡಳಿ: ಉತ್ಸವಕ್ಕಷ್ಟೇ ಸೀಮಿತವಾಗದಿರಲಿ

ಬಾಲಗಂಗಾಧರ ತಿಲಕರು ಪ್ರಾರಂಭಿಸಿದ ಸಾರ್ವಜನಿಕ ಗಣೇಶೋತ್ಸವವನ್ನು 128 ವರ್ಷಗಳಿಂದ ಗಣೇಶ ಮಂಡಳಿಗಳು ಒಂದು ಸಾಂಸ್ಕೃತಿಕ ಪರಂಪರೆಯಾಗಿ ಉಳಿಸಿಕೊಂಡು ಬಂದಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅದು ಅದ್ಧೂರಿ ಉತ್ಸವವಾಗಿ ಮಾತ್ರ ಉಳಿದಿದೆ. ಕೆಲವು ಗಣೇಶ ಮಂಡಳಿಗಳಷ್ಟೇ ರಾಷ್ಟ್ರಪ್ರೇಮ, ಧರ್ಮ ಜಾಗೃತಿ, ಪರಂಪರೆ, ಸಂಸ್ಕೃತಿ, ಕಲೆ, ಸಮಾಜ ಸೇವೆಯಲ್ಲಿ ತೊಡಗಿವೆ. ಹಾಗಾಗಿ ಗಣೇಶ ಮಂಡಳಿಗಳು ಉತ್ಸವಕ್ಕೆ ಮಾತ್ರ ಸೀಮಿತವೇ ಎಂಬ ಪ್ರಶ್ನೆ ಸಹಜವಾಗಿ ಮೂಡಿದೆ.

ರಾಜ್ಯದಲ್ಲಿ ನೋಂದಾಯಿತ ಹಾಗೂ ನೋಂದಾಯಿತವಲ್ಲದ ಒಂದು ಲಕ್ಷಕ್ಕೂ ಅಧಿಕ ಗಣೇಶ ಮಂಡಳಿಗಳಿವೆ. ಇವು ಮನಸ್ಸು ಮಾಡಿದರೆ ಅದ್ವಿತೀಯವಾದುದನ್ನು ಸಾಧಿಸಿ ಸಮಾಜ ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಬಹುದು. ಉತ್ಸವದ ಸಮಯ ಮಾತ್ರವಲ್ಲದೆ ಉಳಿದ ಸಮಯದಲ್ಲೂ ಸೇವಾ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು. ದೇವಸ್ಥಾನಗಳ ಶುಚಿತ್ವ, ಧರ್ಮಶಿಕ್ಷಣ, ಮರಗಿಡಗಳನ್ನು ನೆಟ್ಟು ಪೋಷಿಸುವುದು, ಬಡ ವಿದ್ಯಾರ್ಥಿಗಳಿಗೆ ನೆರವು, ರಕ್ತದಾನ ಶಿಬಿರ, ಶಾಸ್ತ್ರೀಯ ಕಲೆಗಳನ್ನು ಕಲಿಸಲು ಪ್ರೋತ್ಸಾಹ, ಕ್ರಾಂತಿಕಾರಿಗಳ ಹುತಾತ್ಮ ದಿನ ಆಚರಣೆ, ಗೋಸೇವೆ, ಪ್ರಕೃತಿ ವಿಕೋಪ ಹಾಗೂ ಸಾಂಕ್ರಾಮಿಕ ರೋಗದಂತಹ ಸಮಯದಲ್ಲಿ ಸಮಾಜದ ನೆರವಿಗೆ ನಿಂತು ಮಾದರಿಯಾಗಬೇಕು. ಈ ಬಾರಿ ಕೋವಿಡ್ ಮಾರ್ಗಸೂಚಿಗಳನ್ನು ಚಾಚೂ ತಪ್ಪದೆ ಪಾಲಿಸುವುದರೊಂದಿಗೆ, ಲಸಿಕೆ ಅಭಿಯಾನ ಆಯೋಜಿಸುವ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ತಾವು ಸದಾಸಿದ್ಧ ಎಂಬ ಸಂದೇಶ ನೀಡಬೇಕು.

ನಾ.ರ.ಜಯಂತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸೂಕ್ತವಾದ ಸಾಮಾಜಿಕ, ಆರ್ಥಿಕ ವಾತಾವರಣವನ್ನು ಸೃಷ್ಟಿಸುವ ಯೋಜನೆಗಳಿದ್ದಿದ್ದರೆ ಜಾಗತೀಕರಣವು ಮಹಿಳೆಯರನ್ನು ಸಬಲೀಕರಣದ ಕಡೆ ಒಯ್ಯುತ್ತಿದ್ದಿರಬಹುದು. ಆದರೆ ಭಾರತದ ಬಹುಪಾಲು ಮಹಿಳೆಯರು ಸಂಪ್ರದಾಯಕ್ಕೆ ಕಟ್ಟಿಹಾಕಲ್ಪಟ್ಟವರು. ಅನುಕೂಲಕರ ಅಧಿಕಾರ ಹೊಂದಿಲ್ಲದವರು. ಇದ್ದಕ್ಕಿದ್ದಂತೆ ಅವರು ಜಾಗತೀಕರಣವೆಂಬ ಜಾರುಬಂಡಿಯಲ್ಲಿ ಅತಿವೇಗದಿಂದ ಚಲಿಸತೊಡಗಿದಾಗ ಸ್ಥಳಾಂತರ, ಸ್ಥಾನ ಬದಲಾವಣೆಗಳಿಗೆ ಹೊಂದಿಕೊಳ್ಳಲು ಎಲ್ಲರಿಗೂ ಕಷ್ಟವಾಯಿತು. ತಕ್ಷಣದ ಪಲ್ಲಟವು ಕುಟುಂಬ, ದಾಂಪತ್ಯ, ಗಂಡು–ಹೆಣ್ಣಿನ ಸಂಬಂಧಗಳನ್ನು ಬಿಕ್ಕಟ್ಟಿನಲ್ಲಿಟ್ಟಿತು

ಎಲ್ಲಿ ಹೋದರು 'ಚಿನ್ನದ ಹುಡುಗಿ'ಯರು?



• ಡಾ. ಎಚ್. ಎಸ್. ಅನುಪಮಾ



ಕಾಲವನ್ನು ಕೋವಿಡ್ ಪೂರ್ವ, ಕೋವಿಡ್ ನಂತರ ಎಂದು ಅಳೆಯಬೇಕಾದ ಘಟ್ಟದಲ್ಲಿ ನಿಂತಿರುವಾಗ ಭಾರತದ ಎಲ್ಲ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ ಪರಿಹಾರ ಎಂಬಂತೆ ಬಿಂಬಿಸಲಾದ ಜಾಗತೀಕರಣದ ಪರಿಣಾಮಗಳೇನೆಂದು ನಾವು ಮಹಿಳೆಯರು ವಸ್ತುನಿಷ್ಠವಾಗಿ ಚರ್ಚಿಸಬೇಕಿದೆ.

1990ರ ಬಳಿಕ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬಂದಮೇಲೆ ಕಂಡು ಕೇಳರಿಯದ ಉದ್ಯೋಗಗಳಲ್ಲಿ ಮಹಿಳೆಯರು ತೊಡಗಿಕೊಂಡರು. ಮಹಿಳೆಯರ ಶಿಕ್ಷಣ, ಆದ್ಯತೆ, ಆಯ್ಕೆಗಳೇ ಬೇರೆಯಾದವು. ಶ್ರಮವು ಹೊಸ ವ್ಯಾಖ್ಯಾನಕ್ಕೊಳಗಾಯಿತು. ಮಹಿಳೆಯ ಕಾಲಿಗೆರಡು ಕಾಲು, ಕೈಗೆ ನಾಲ್ಕು ಕೈ ಸೇರಿ ಮಲ್ಟಿಟಾಸ್ಕಿಂಗ್ ಕಿರೀಟ ಭಾರವಾಯಿತು. ಸಂಪರ್ಕ ಕ್ರಾಂತಿಯು ತಮ್ಮಿಷ್ಟ ಬಂದದ್ದನ್ನು ನೋಡುವ, ಕೇಳುವ, ಹೇಳುವ, ಮಾಡುವ ಅವಕಾಶಗಳ ಹೊಸಮಾರ್ಗವನ್ನೇ ತೆರೆಯಿತು. ಅಮ್ಮ, ಅಜ್ಜಿಯಂದಿರು 'ನಮ್ಮಂತಲ್ಲ ನಿಮ್ಮ ಪರಿಸ್ಥಿತಿ' ಎನ್ನತೊಡಗಿದರು.

ನಿಜ. ನಮ್ಮ ಸಂವಿಧಾನ, ಮಹಿಳಾ ಚಳವಳಿ ತಂದ ಹಕ್ಕೊತ್ತಾಯಗಳು, ಅದರಿಂದ ರೂಪುಗೊಂಡ ಕಾನೂನುಗಳ ಜೊತೆಗೆ ಜಾಗತೀಕರಣ ಕೊಡಮಾಡಿದ ಅವಕಾಶಗಳು ಒಂದಷ್ಟು ಬದಲಾವಣೆಗೆ ಕಾರಣವಾಗಿವೆ. ಮೊದಲು ಶಾಲೆಯ ಕನಸುಗಳೇ ಬೀಳುವಂತಿರಲಿಲ್ಲ. ಈಗ ಹುಡುಗಿಯರು ಶಾಲೆಗೆ ಬಂದರೆ ಬಹುಮಾನವಿದೆ. ಮಹಿಳಾ ಸಾಕ್ಷರತೆ ಶೇ 65ರಷ್ಟು ಇದೆ. ಬಾಲ್ಯವಿವಾಹಗಳ ಸಂಖ್ಯೆ ಶೇ 21ರಷ್ಟಕ್ಕೆ ಇಳಿದಿದೆ. ಹೆರುವ ಯಂತ್ರಗಳಾಗಿದ್ದ ಮಹಿಳೆಯರಿಗೀಗ ಕುಟುಂಬ ಯೋಜನೆಯ ಅವಕಾಶವಿದೆ. ಅಡುಗೆ ಮನೆಗೆ ಬಂದ ಯಂತ್ರಗಳು ಶ್ರಮವನ್ನು ಮಾನವೀಯಗೊಳಿಸಿವೆ. ಅಷ್ಟಿಷ್ಟು ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ. ಅಭಿವ್ಯಕ್ತಿಗೆ ಹೊಸ ಮಾರ್ಗಗಳು ತೆರೆದುಕೊಂಡಿವೆ. ಕೆಲಸ ಹುಡುಕಿ ವಲಸೆ ಹೋಗಲು ಸಾಧ್ಯವಾಗಿದೆ.

ಮೊದಲೆಲ್ಲ ಹೆಣ್ಣುದುಡಿಮೆ ವೇತನರಹಿತ ಮನೆಗೆಲಸವಾಗಿತ್ತು. ಗಳಿಸಲು ಹೆಣ್ಣು ಹೊಸಿಲು ದಾಟಿದರೆ ಕುಟುಂಬ ಹಾಳಾಗುತ್ತದೆಂಬ ಭಾವವಿತ್ತು. ಈಗವಳು ಹೊರಗೂ ದುಡಿಯಲೇಬೇಕಾದ ಅನಿವಾರ್ಯತೆಯಿದೆ. ಹೆಣ್ಣು ದುಡಿಮೆಯಿಲ್ಲದಿದ್ದರೆ ಬಹುತೇಕ ಕುಟುಂಬಗಳು 'ಬಡವ'ವಾಗುತ್ತವೆ. ಬಡತನದ ಮಹಿಳೀಕರಣದಿಂದ ಉದ್ಯೋಗದ ಮಹಿಳೀಕರಣವಾಗಿದೆ. ಉದ್ಯಮಗಳು ಮಹಿಳಾ ಕಾರ್ಮಿಕರನ್ನು ಹೊಂದಲು; ಸಿಬ್ಬಂದಿ ಕಡಿತವೆಂದು ಗಂಡಸರನ್ನು ತೆಗೆದು ಹೆಣ್ಣುಮಕ್ಕಳನ್ನು ಕೂರಿಸಲು ಉತ್ಸುಕವಾಗಿವೆ.

ಮಹಿಳೆಯರು ಸಂಘಟಿತರಾಗಿ ತಿರುಗಿ ಬೀಳುವ ಸಾಧ್ಯತೆ ಕಡಿಮೆ; ವಿನಯದಿಂದ, ನಿಯತ್ತಿನಿಂದ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ; ಸುಲಭದಲ್ಲಿ ಕೆಲಸದಿಂದ ತೆಗೆಯಬಹುದು; ಅವಶ್ಯಬಿದ್ದರೆ ಲೈಂಗಿಕವಾಗಿ ಬಳಸಿಕೊಳ್ಳಬಹುದು ಮುಂತಾದ ಕಾರಣಗಳು ಇದರ ಹಿಂದಿವೆ. ಇದೇ ಧೋರಣೆಯು ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ, ಸ್ತ್ರೀದ್ವೇಷ, ಅಸಭ್ಯ ನಡವಳಿಕೆಗಳಾಗಿ ಮುಂದುವರಿಯುತ್ತವೆ.


ವರ್ಲ್ಡ್ ಎಕನಾಮಿಕ್ ಫೋರಂ ಬಿಡುಗಡೆ ಮಾಡಿರುವ 'ಜಾಗತಿಕ ಜೆಂಡರ್ ಗ್ಯಾಪ್-2021'ರ ಪ್ರಕಾರ, ಭಾರತದ ದುಡಿಯುವ ವರ್ಗದಲ್ಲಿ ಮಹಿಳೆಯರ ಪ್ರಮಾಣ ಶೇ 22.3ರಷ್ಟು ಇದೆ. ವೃತ್ತಿಪರ ಮತ್ತು ತಾಂತ್ರಿಕ ವಲಯದ ಉದ್ಯೋಗಗಳಲ್ಲಿ ಶೇ 29.2ರಷ್ಟು ಮಹಿಳೆಯರಿದ್ದಾರೆ. ಮೇಲ್ಮಟ್ಟದ ನಿರ್ವಾಹಕ ಹುದ್ದೆಗಳಲ್ಲಿ (ಮ್ಯಾನೇಜೀರಿಯಲ್) ಶೇ14.6ರಷ್ಟು ಇದ್ದಾರೆ. 2017ರಲ್ಲಿ ಎನ್‌ಎಸ್‌ಇಯಲ್ಲಿ ದಾಖಲಾದ 500 ಕಂಪನಿಗಳ ಬೋರ್ಡ್ ರೂಮುಗಳಲ್ಲಿ ಶೇ 14ರಷ್ಟು ಮಹಿಳೆಯರಿದ್ದರು. ಮಹಿಳೆಯರು ಮುಖ್ಯಸ್ಥಾನದಲ್ಲಿದ್ದು ನಡೆಸುವ ಉದ್ಯಮಗಳ ಪ್ರಮಾಣ ಶೇ 8- 9ರಷ್ಟು ಇದೆ. ನಾಲ್ವರಲ್ಲಿ ಒಬ್ಬಳು ಒಂದಲ್ಲ ಒಂದು ಹಂತದಲ್ಲಿ ದೌರ್ಜನ್ಯ ಎದುರಿಸುತ್ತಾಳೆ. `ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೇ-2015'ರ ಪ್ರಕಾರ 2005- 06ರಲ್ಲಿ ಮದುವೆಯ ನಂತರವೂ ದುಡಿಯುವ ಮಹಿಳೆಯರ ಪ್ರಮಾಣ 43ರಷ್ಟು ಇದ್ದದ್ದು 2015ರ ಹೊತ್ತಿಗೆ 31ರಷ್ಟಕ್ಕೆ ಇಳಿದಿದೆ. ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀ–ಪುರುಷರ ನಡುವೆ ವೇತನ ತಾರತಮ್ಯವಿದೆ. ಮಹಿಳೆಯರು ಶೇ 19ರಷ್ಟು ಕಡಿಮೆ ವೇತನ ಪಡೆಯುತ್ತಾರೆ. ಶೇ 95ರಷ್ಟಕ್ಕಿಂತ ಹೆಚ್ಚು ಮಹಿಳೆಯರ ಹೆಸರಿನಲ್ಲಿ ಯಾವುದೇ ಆಸ್ತಿಯಿಲ್ಲ. ರಾಜಕಾರಣದಲ್ಲೂ ಇದು ಮುಂದುವರಿದು 2021ರಲ್ಲಿ ಭಾರತದಾದ್ಯಂತ ಮಹಿಳಾ ಮಂತ್ರಿಗಳು ಶೇ 9.1ರಷ್ಟು ಇದ್ದಾರೆ.

ಮೇಲಿನ ಅಂಕಿಅಂಶಗಳು ಸ್ಪಷ್ಟವಾಗಿ ತಿಳಿಸುವಂತೆ ತಳಹಂತದ ಕೆಲಸಗಳಲ್ಲಿ; ಅಧಿಕಾರ, ಬಡ್ತಿ, ಭತ್ಯೆ, ರಜೆ, ಉನ್ನತೀಕರಣದ ಅವಕಾಶ, ವೇತನ ಕಡಿಮೆಯಿರುವ ಕೆಲಸಗಳಲ್ಲಿ ಹೆಚ್ಚೆಚ್ಚು ಮಹಿಳೆಯರಿದ್ದರೆ, ಶ್ರೇಣಿಯ ಮೇಲೇರುತ್ತ ಹೋದಂತೆ ವಿರಳವಾಗುತ್ತಾರೆ. ನಿರ್ಧಾರಕ, ಅಧಿಕಾರ ಸ್ಥಾನಗಳಲ್ಲಿ ಹೆಣ್ಣುಗಳು ಇಲ್ಲದಿರುವುದರಿಂದ ಎದ್ದು ಕಾಣುತ್ತಾರೆ.

ಶಾಲೆಕಾಲೇಜುಗಳ ಪರೀಕ್ಷೆ, ಸ್ಪರ್ಧೆಗಳಲ್ಲಿ ಹುಡುಗಿಯರೇ ಚಿನ್ನದ ಪದಕ ಗೆಲ್ಲುತ್ತಾ, ಮುಂದಿರುತ್ತಾರಲ್ಲವೇ? ಉದ್ಯೋಗ ಸ್ಥಳದಲ್ಲಿ ಏಕೆ ಹೀಗೆ? ಎಲ್ಲಿ ಹೋದರು ಆ 'ಚಿನ್ನದ ಹುಡುಗಿ'ಯರು? ಗಾಣಕ್ಕೆ ಕಟ್ಟಿದ ಗೋವು ಹುಡುಗಿಯರು ಉನ್ನತ ಶಿಕ್ಷಣಕ್ಕೆ ಹೋಗಬಯಸಿದರೆ ಮನೆಯಲ್ಲಿ ಒಬ್ಬರಲ್ಲ ಒಬ್ಬರಿಂದ 'ನಿನಗಿಂತ ಹೆಚ್ಚು ಓದಿದವನನ್ನು ಎಲ್ಲಿ ಹುಡುಕುವುದು? ಹೆಚ್ಚು ವರದಕ್ಷಿಣೆ ಹೇಗೆ ತೆರುವುದು? ಓದು ಸಾಕು' ಎನ್ನುವ ಮಾತು ಕೇಳಿಬರುತ್ತದೆ. ಮದುವೆಯೇ ಹೆಣ್ಣಿನ ಆತ್ಯಂತಿಕ ಗುರಿ, ಹೆರುವುದೇ ಪರಮೋಚ್ಚ ಸಾಧನೆ ಎಂಬ ಭಾವನೆಯನ್ನು ಉದ್ಯಮಗಳೂ ಮಾರುಕಟ್ಟೆಯೂ ಬೆಳೆಸುತ್ತಿವೆ. ಹೆಂಗಸರಿಗೇ ಮೀಸಲಾದ ಸೋಪು, ಪೌಡರು, ಬಟ್ಟೆ, ಸುಗಂಧ ದ್ರವ್ಯ, ಬಣ್ಣಗಳಿವೆ. ಅವರಿಗೇ ಬೇರೆ ಡಿಸೈನಿನ ವಾಹನ. ಅವರದೇ ಬೇರೆ ಸಲೂನು, ಪಾರ್ಲರ್, ಜಿಮ್. ಅವನ್ನು ಬಳಸದಿದ್ದವರು, ಹಿಮ್ಮಡಿ ಒಡೆದವರು, ಮುಖ ಬೆಳ್ಳಗಿಲ್ಲದವರು, ಮೊಡವೆ ಕಲೆ ಇರುವವರು, ಕಪ್ಪಗಿರುವವರು ಅನರ್ಹ ಹೆಣ್ಣುಗಳು ಎಂದು ಜಾಹೀರಾತುಗಳು ಸಾರುತ್ತವೆ. ಹೆಣ್ಣು, ಹೆಣ್ತನ, ಗರ್ಭಕೋಶ, ಲೈಂಗಿಕತೆ, ಪ್ರೇಮ, ಮದುವೆ, ಕಣ್ಣೀರು ಎಲ್ಲವೂ ಮಾರುಕಟ್ಟೆಗೆ ಮುಖ್ಯವಾಗಿವೆ. ಹೆಣ್ಣುತನದ ಚೌಕಟ್ಟು ತಾಯ್ತನಕ್ಕೂ ಮುಂದುವರಿದಿದೆ. ಮಹಿಳಾ ಆರೋಗ್ಯ ಕ್ಷೇತ್ರಕ್ಕಿಂತ ಹೆಚ್ಚು ಬಂಡವಾಳವನ್ನು ಬಂಜೆತನ ಚಿಕಿತ್ಸೆಯ ಸಂಶೋಧನೆಗಳಿಗೆ ಹೂಡಲಾಗಿದೆ.

ಸಮಾಜ ಹೆಣ್ಣು ಎಂದು ಯಾರನ್ನು ನೋಡುತ್ತಿದೆಯೋ ಅವಳು ನಿಜವಾದ ಹೆಣ್ಣಲ್ಲ. ಪುರುಷಪ್ರಧಾನ ಸಮಾಜ ನಿಯಂತ್ರಿಸುವ ಮಾರುಕಟ್ಟೆಯ ಕಲ್ಪನಾ ವಿಲಾಸ ಹೆಣ್ಣು ಹೇಗಿರಬೇಕೆಂದು ವ್ಯಾಖ್ಯಾನಿಸಿದೆಯೋ ಆ ಚೌಕಟ್ಟಿಗೆ ಸರಿಯಾಗಿ ತನ್ನನ್ನು ಕೂರಿಸಿಕೊಂಡ ಹೆಣ್ಣು. ಗೆರೆಯೆಳೆದು ನಿರ್ಬಂಧಿಸಿರುವವರಲ್ಲಿ ಕುಟುಂಬ-ಜಾತಿ-ಊರುಗಳಷ್ಟೇ ಅಲ್ಲ; ಬಂಡವಾಳಿಗರೂ ಸೇರಿದ್ದಾರೆ. ಚೌಕಟ್ಟನ್ನು ಮೀರುವ, ಅನುಕೂಲೆಯರಾಗದ ಹೆಣ್ಣುಗಳ ಮೇಲೆ ಸ್ತ್ರೀ ದ್ವೇಷ (ಮಿಸೋಜಿನಿ) ಹೆಚ್ಚುತ್ತಿದೆ. ಧರ್ಮ-ಜಾತಿ ಹೆಸರಿನಲ್ಲಿ ಲಿಂಗಾಧಾರಿತ ದೌರ್ಜನ್ಯಗಳು ಸಂಭವಿಸುತ್ತಿವೆ.

ಜಾಗತೀಕರಣ ಕಾಲದ ಮಹಿಳೆಯರು ಗಾಣಕ್ಕೆ ಕಟ್ಟಿದ ಗೋವುಗಳಂತೆ. ಕೆಲವಕ್ಕೆ ಕಣ್ಣೆ ಉದ್ದ, ಕೆಲವಕ್ಕೆ ಗಿಡ್ಡ. ವರ್ಷಕ್ಕೊಂದು ದಿನ ಗೋ ಪೂಜೆ. ಮತ್ತೆಲ್ಲ ನಿರಂತರ ದುಡಿಮೆ. ಒಂದಷ್ಟು ಬೇಲಿಗಳು ತೆರವಾಗಿವೆ, ಮತ್ತೊಂದಷ್ಟು ಕಡಿದು ಬಿಸುಟ ಗೂಟಗಳು ಚಿಗುರಿ ಬಂಧನವನ್ನು ಗಟ್ಟಿಗೊಳಿಸುತ್ತಿವೆ. ಅಂಗೈ ಹುಣ್ಣು ಲಾಭವೇ ಮುಖ್ಯವಾದ ಮಾರುಕಟ್ಟೆಯು ಜಾತಿ-ಧರ್ಮ-ಲಿಂಗ ತಾರತಮ್ಯಗಳನ್ನು ಮರೆತು ಗ್ರಾಹಕ/ಕಿಯರನ್ನೆಲ್ಲ ಒಂದೇ ಆಗಿ ನೋಡಬಹುದೇನೋ ಎಂದು ತಳಸಮುದಾಯಗಳೂ, ಮಹಿಳೆಯರೂ ಆಶಿಸಿದ್ದರು. ಆದರೆ ಗಂಡು ಹಿರಿಮೆಯ ಭಾರತೀಯ ಸಮಾಜವನ್ನು ಜಾಗತೀಕರಣ ಬದಲಿಸಲಿಲ್ಲ, ಬದಲಾಗಿ ಪೋಷಿಸಿಕೊಂಡು ಬಂತು. ಬಾಯಿಮಾತಿಗಷ್ಟೇ ಮಹಿಳಾ ಸ್ನೇಹಿಯಾಗಿರುವ ಬಂಡವಾಳಕ್ಕೆ ಲಿಂಗ ಪೂರ್ವಗ್ರಹ, ಲಿಂಗ ತಾರತಮ್ಯಗಳು ಸಮಸ್ಯೆಯೆಂದು ಅರಿವಾಗದೇ ಹೋಯಿತು. ಹಾಗಾಗಿ ಹೆಣ್ಣು ದುಡಿಮೆಯೊಂದಿಗೆ ಹೆಣ್ಣು ಘನತೆ ಹೆಚ್ಚಾಗಲಿಲ್ಲ.



ಜಾಗತೀಕರಣದ ಬಳಿಕವೂ ಹಲವಾರು ಮಹಿಳಾ ಅಭಿವೃದ್ಧಿ ಸೂಚ್ಯಂಕಗಳು ಉತ್ತಮಗೊಳ್ಳಲಿಲ್ಲ. ಭಾರತದಲ್ಲಿ ಲಿಂಗಾನುಪಾತ ಒಂದೇ ಸಮ ಇಳಿಯುತ್ತಿದೆ. ಸ್ವಾತಂತ್ರ್ಯಾನಂತರ 1951ರಲ್ಲಿ 1000 ಗಂಡುಮಕ್ಕಳಿಗೆ 983 ಹೆಣ್ಣುಮಕ್ಕಳಿದ್ದರು. ಅದು 1991ರಲ್ಲಿ 945ಕ್ಕಿಳಿಯಿತು. 2001ರಲ್ಲಿ 927 ಆದದ್ದು 2011ಕ್ಕೆ 918 ಆಯಿತು. ಕಟ್ಟುನಿಟ್ಟಾದ ಕಾನೂನು ಜಾರಿಯಾದರೂ ಹೆಣ್ಣುಭ್ರೂಣ ಹತ್ಯೆ, ಹೆಣ್ಣುಶಿಶುಹತ್ಯೆ ಮುಂದುವರಿದಿವೆ. ಒಂದು ಅಂದಾಜಿನಂತೆ 50 ಲಕ್ಷಕ್ಕಿಂತ ಹೆಚ್ಚು ಭ್ರೂಣ-ಶಿಶುಗಳು ಹೆಣ್ಣೆಂಬ ಕಾರಣಕ್ಕೆ ಪ್ರತಿವರ್ಷ ಮಾಯವಾಗುತ್ತಿವೆ.

ಶಿಕ್ಷಣವು ಮೂಲಭೂತ ಹಕ್ಕಾದರೂ ಶೇ 34.2ರಷ್ಟು ಮಹಿಳೆಯರು ಅನಕ್ಷರಸ್ಥೆಯರಾಗಿದ್ದಾರೆ. ಶೇ 65ರಷ್ಟು ಭಾರತೀಯ ಗಂಡಸರು ಮನೆ ಸುಸೂತ್ರವಾಗಿ ನಡೆಸಲಿಕ್ಕೆ ಹೆಂಗಸರನ್ನು ಹೊಡೆಯಲೇಬೇಕೆಂದು, ಅದಕ್ಕವರು ಅರ್ಹರೆಂದು ನಂಬಿದ್ದಾರೆ. ಶೇ 38ರಷ್ಟು ಗಂಡಂದಿರು ಹೆಂಡತಿಯನ್ನು ಹೊಡೆಯುತ್ತಾರೆ. ಹೆಣ್ಣುಮಕ್ಕಳು ಜಾತಿ ಮೀರಿ ಪ್ರೇಮಿಸಿದರೆ ಅವರನ್ನು ಕೊಂದಾದರೂ ಜಾತಿ ಮರ್ಯಾದೆ ಉಳಿಸಿಕೊಳ್ಳಬೇಕೆಂದು ಪುರುಷ ಸಂಬಂಧಿಗಳು ಭಾವಿಸುತ್ತಾರೆ. ಜಾತಿದೌರ್ಜನ್ಯಗಳು ಹೆಣ್ಣಿನ ಮೇಲೇ ಜಾಸ್ತಿ ಸಂಭವಿಸುತ್ತಿವೆ. ವರದಕ್ಷಿಣೆಯ ಕಾರಣಕ್ಕೆ ಪ್ರತಿವರ್ಷ 5000 ಹೆಣ್ಣುಗಳ ಜೀವಹರಣವಾಗುತ್ತಿದೆ. ಪ್ರತಿ 20 ನಿಮಿಷಕ್ಕೊಬ್ಬಳು ಅತ್ಯಾಚಾರಕ್ಕೊಳಗಾದ ದೂರು ದಾಖಲಾಗುತ್ತದೆ. ಶೇ 50-75ರಷ್ಟು ಅತ್ಯಾಚಾರಗಳು ದಾಖಲಾಗದೇ ಮುಚ್ಚಿ ಹೋಗುತ್ತವೆ.

ಮುಂದೇನು? ಐಹಿಕ ಸುಖಭೋಗಗಳೇ ಆತ್ಯಂತಿಕ ಸತ್ಯ ಎನ್ನುವ ಮಾರುಕಟ್ಟೆ ಆರ್ಥಿಕತೆ ಒಂದೆಡೆ; ಮೊಲೆಮುಡಿ, ಕಿವಿಬಾಯಿ ಮುಚ್ಚಿಟ್ಟುಕೊಂಡರೆ ಹೆಣ್ಣುಗಳು ಸುರಕ್ಷಿತ ಎಂದು ನಂಬಿಸುವ ಧಾರ್ಮಿಕ ಮೂಲಭೂತವಾದಿಗಳು ಇನ್ನೊಂದು ಕಡೆ; ಕತ್ತಲಾದ ಮೇಲೆ ಮನೆಹೊರಗೆ ಚಂದದ ದಿರಿಸುಟ್ಟು ಬರಬೇಡಿರೆಂದು ಉಪದೇಶಿಸುವ ಮಂತ್ರಿಮಹೋದಯರು ಮಗದೊಂದು ಕಡೆ - ಈ ಬಲೆಯೊಳಗೆ ತಮಗರಿವಿಲ್ಲದೆ ಬೀಳುವ ಮಹಿಳೆಯರಿಗೆ ಲಿಂಗಪ್ರಶ್ನೆಯ ಅರಿವು ಮರೆಗೆ ಸರಿಯುತ್ತಿದೆ.

ಸೂಕ್ತವಾದ ಸಾಮಾಜಿಕ, ಆರ್ಥಿಕ ವಾತಾವರಣವನ್ನು ಸೃಷ್ಟಿಸುವ ಯೋಜನೆಗಳಿದ್ದಿದ್ದರೆ ಜಾಗತೀಕರಣವು ಮಹಿಳೆಯರನ್ನು ಸಬಲೀಕರಣದ ಕಡೆ ಒಯ್ಯುತ್ತಿದ್ದಿರಬಹುದು. ಆದರೆ ಭಾರತದ ಬಹುಪಾಲು ಮಹಿಳೆಯರು ಸಂಪ್ರದಾಯಕ್ಕೆ ಕಟ್ಟಿಹಾಕಲ್ಪಟ್ಟವರು. ಅನುಕೂಲಕರ ಅಧಿಕಾರ ಹೊಂದಿಲ್ಲದವರು. ಇದ್ದಕ್ಕಿದ್ದಂತೆ ಅವರು ಜಾಗತೀಕರಣವೆಂಬ ಜಾರುಬಂಡಿಯಲ್ಲಿ ಅತಿವೇಗದಿಂದ ಚಲಿಸತೊಡಗಿದಾಗ ಸ್ಥಳಾಂತರ, ಸ್ಥಾನ ಬದಲಾವಣೆಗಳಿಗೆ ಹೊಂದಿಕೊಳ್ಳಲು ಎಲ್ಲರಿಗೂ ಕಷ್ಟವಾಯಿತು. ತಕ್ಷಣದ ಪಲ್ಲಟವು ಕುಟುಂಬ, ದಾಂಪತ್ಯ, ಗಂಡು–ಹೆಣ್ಣಿನ ಸಂಬಂಧಗಳನ್ನು ಬಿಕ್ಕಟ್ಟಿನಲ್ಲಿಟ್ಟಿತು. ಹಾಗಾಗಿ ಸಮಾನತೆಯ ಕಡೆಗಿನ ಮಹಿಳೆಯ ತುಡಿತವು ಸಮಾಜದ ಇಚ್ಛೆಯಾಗಿ ಬದಲಾಗದೇ ಹೋಗಿದೆ. ಭಾರತೀಯ ಮಹಿಳೆಯರ ಮೇಲೆ ಉದಾರೀಕರಣದ ಪ್ರಭಾವವು ಮನೆಯೊಳಗೇ ಟ್ರೆಡ್‌ಮಿಲ್ ಇಟ್ಟುಕೊಂಡು ಓಡಿದಂತೆ ಆಗಿದೆ. ಲೆಕ್ಕವಿಟ್ಟು ಸಾವಿರಾರು ಹೆಜ್ಜೆಗಳನ್ನಿಡುವುದು, ಬೆವರಿಳಿಸುವುದು, ಓಡುವುದು. ನಿಲ್ಲದ ಓಟ. ಮುಟ್ಟುವುದೆಲ್ಲಿಗೂ ಇಲ್ಲ!

ಮಹಿಳಾ ಸಮುದಾಯದ ಜೊತೆಗೆ ತನ್ನ ತಾನು ಗುರುತಿಸಿಕೊಂಡು ಸ್ವಾಯತ್ತ, ಘನತೆಯ ಬದುಕನ್ನು ಹೆಣ್ಣು ಸಾಧ್ಯವಾಗಿಸಿಕೊಳ್ಳಬೇಕು. ಆ ಮೂಲಕ ಸಮಾಜವನ್ನೂ ಲಿಂಗಸೂಕ್ಷ್ಮ ಬದಲಾವಣೆಗೆ ಸಿದ್ಧಗೊಳಿಸಿ ನ್ಯಾಯದ ಕಣ್ಣು ತೆರೆಸಬೇಕು. ಆಗ ಮಾತ್ರ ಅಭಿವೃದ್ಧಿಯು ಅರ್ಥಪೂರ್ಣವಾಗಬಲ್ಲುದು.

ಲೇಖಕಿ: ವೈದ್ಯೆ ಮತ್ತು ಸಾಹಿತಿ

ಲೋಕಲ್ ಸರ್ಕಲ್ಸ್ ಸಮೀಕ್ಷೆಯಲ್ಲಿ ಬಹಿರಂಗ

ಮೊಬೈಲ್‌ನಲ್ಲೇ ಗೋಪ್ಯ ಮಾಹಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪ್ರತಿ ಮೂವರು ಭಾರತೀಯರಲ್ಲಿ ಒಬ್ಬರು ತಮ್ಮ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಪಾಸ್‌ವರ್ಡ್ ಮತ್ತು ಆಧಾರ್ ವಿವರಗಳನ್ನು ತಮ್ಮ ಮೊಬೈಲ್‌ನಲ್ಲಿ ಅಥವಾ ಕಂಪ್ಯೂಟರ್ ಅಥವಾ ಇ-ಮೇಲ್‌ನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ. ಇದು ದತ್ತಾಂಶ ಕಳವಿಗೆ ಆಸ್ಪದ ಮಾಡಿಕೊಡುತ್ತದೆ' ಎಂದು ಲೋಕಲ್ ಸರ್ಕಲ್ಸ್ ತನ್ನ ಸಮೀಕ್ಷಾ ವರದಿಯಲ್ಲಿ ಹೇಳಿದೆ.

ಮೊಬೈಲ್‌ಗಳಲ್ಲಿ, ಕಂಪ್ಯೂಟರ್‌ಗಳಲ್ಲಿ ಮತ್ತು ಇ-ಮೇಲ್‌ನಲ್ಲಿ ಈ ವಿವರಗಳನ್ನು ಸಂಗ್ರಹಿಸಿ ಇಡುವುದು, ಅಪಾಯಕ್ಕೆ ಆಹ್ವಾನ ನೀಡಿದಂತೆ. ಬಹುತೇಕ ಹ್ಯಾಕರ್‌ಗಳು ಇ-ಮೇಲ್, ಎಸ್‌ಎಂಎಸ್‌ಗಳ ಮೂಲಕ ಮಾಹಿತಿಗೆ ಕನ್ನ ಹಾಕುತ್ತಾರೆ. ಇಂತಹ ಮಹತ್ವದ ವಿವರವನ್ನು ಹೀಗೆ ಸಂಗ್ರಹಿಸಿ ಇಟ್ಟುಕೊಳ್ಳುವುದು, ಹ್ಯಾಕರ್‌ಗಳಿಗೆ ಬ್ಯಾಂಕ್ ಖಾತೆಯ ನಿರ್ವಹಣೆಗೆ ಅವಕಾಶ ನೀಡಿದ್ದಕ್ಕೆ ಸಮ ಎಂದು ಲೋಕಲ್ ಸರ್ಕಲ್ಸ್ ಕಳವಳ ವ್ಯಕ್ತಪಡಿಸಿದೆ.

ಸಮೀಕ್ಷೆಯಲ್ಲಿ ಭಾಗವಹಿಸಿದವರಲ್ಲಿ ಶೇ 11ರಷ್ಟು ಮಂದಿ ಈ ವಿವರಗಳನ್ನು ತಮ್ಮ ಮೊಬೈಲ್ ಕಾಂಟಾಕ್ಟ್ ಲಿಸ್ಟ್‌ನಲ್ಲಿ ಸಂಗ್ರಹಿಸಿ ಇಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ಬಹುತೇಕ ಅಪ್ಲಿಕೇಷನ್‌ಗಳು ಕಾಂಟಾಕ್ಟ್ ಲಿಸ್ಟ್‌ನ ಆಕ್ಸೆಸ್ ಕೇಳುತ್ತವೆ. ಹೀಗಾಗಿ ಈ ವಿವರಗಳನ್ನು ಕಾಂಟಾಕ್ಟ್ ಲಿಸ್ಟ್‌ನಲ್ಲಿ ಸಂಗ್ರಹಿಸಿ ಇಡುವುದು ಅತ್ಯಂತ ಅಪಾಯಕಾರಿ ಎಂದು ಲೋಕಲ್ ಸರ್ಕಲ್ಸ್ ಕಳವಳ ವ್ಯಕ್ತಪಡಿಸಿದೆ. ಈ ಸಂಬಂಧ ಜನರಲ್ಲಿ ಜಾಗೃತಿ ಮೂಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಲೋಕಲ್ ಸರ್ಕಲ್ಸ್ ಶಿಫಾರಸು ಮಾಡಿದೆ.

ಎಲ್ಲೆಲ್ಲಿ ಸಂಗ್ರಹ


- 33 % ಮೊಬೈಲ್, ಕಂಪ್ಯೂಟರ್, ಇ-ಮೇಲ್‌ನಲ್ಲಿ ಬ್ಯಾಂಕ್, ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ವಿವರ ಸಂಗ್ರಹಿಸಿ ಇಡುತ್ತೇವೆ ಎಂದವರ ಪ್ರಮಾಣ
- 7 % ಮೊಬೈಲ್ ಫೋನ್‌ಗಳಲ್ಲಿ ಈ ವಿವರ ಸಂಗ್ರಹಿಸಿ ಇಡುವವರ ಪ್ರಮಾಣ
- 15 % ಕಂಪ್ಯೂಟರ್ ಅಥವಾ ಇ-ಮೇಲ್‌ಲ್ಲಿ ಸಂಗ್ರಹಿಸಿ ಇಡುವವರ ಪ್ರಮಾಣ
- 11 % ಫೋನ್, ಕಂಪ್ಯೂಟರ್ ಮತ್ತು ಇಮೇಲ್ ಮೂರರಲ್ಲೂ ಸಂಗ್ರಹಿಸಿ ಇಡುತ್ತೇವೆ ಎಂದವರ ಪ್ರಮಾಣ
- 21 % ಇಂತಹ ವಿವರಗಳನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳುತ್ತೇವೆ ಎಂದವರು
- 39 % ಕಾಗದಗಳಲ್ಲಿ ಈ ವಿವರಗಳನ್ನು ಬರೆದು ಇಟ್ಟುಕೊಳ್ಳುತ್ತೇವೆ ಎಂದವರು

ಮೊಬೈಲ್ ಮೊರೆ ಹೋಗಲು ಕಾರಣಗಳು

- ಅತ್ಯಂತ ಕಷ್ಟಕರವಾದ ಪಾಸ್‌ವರ್ಡ್‌ಗಳನ್ನು ರಚಿಸಬಹುದು. ಆದರೆ ಅವುಗಳನ್ನು ನೆನಪಿನಲ್ಲಿ ಇರಿಸಿಕೊಳ್ಳುವುದು ಕಷ್ಟಸಾಧ್ಯ. ಹೀಗಾಗಿ ಮೊಬೈಲ್‌ನಲ್ಲಿ ಅವನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ
- ಹಲವು ಬ್ಯಾಂಕ್ ಖಾತೆಗಳು, ಹಲವು ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಪಾಸ್‌ವರ್ಡ್‌ಗಳನ್ನು ನೆನಪಿನಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಅವನ್ನು ಮೊಬೈಲ್, ಕಂಪ್ಯೂಟರ್ ಅಥವಾ ಇ-ಮೇಲ್‌ನಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ

ಪಾಸ್‌ವರ್ಡ್ ವಿವರ ಹಂಚಿಕೆ

ಶೇ 35ರಷ್ಟು ಜನರು ತಮ್ಮ ಬ್ಯಾಂಕ್, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಪಾಸ್‌ವರ್ಡ್ ವಿವರಗಳನ್ನು ತಮ್ಮ ಹತ್ತಿರದ ಸಂಬಂಧಿಗಳು ಮತ್ತು ಆಪ್ತ ಸಹಾಯಕರ ಜತೆಗೆ ಹಂಚಿಕೊಳ್ಳುತ್ತೇವೆ ಎಂದಿದ್ದಾರೆ



ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಮಸೀದಿಗಳ ರಕ್ಷಣೆ ಕುರಿತು ರಾಜಸ್ಥಾನ ಸರ್ಕಾರವು ಜಾರಿಗೆ ತಂದಿರುವ ತಿದ್ದುಪಡಿ ಕಾಯ್ದೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಸಾರ್ವಜನಿಕ ಆಸ್ತಿ ಕಾಯ್ದೆ 1985ರ ಪ್ರಕಾರ, ಮಸೀದಿಗಳ ಆಸ್ತಿಗೆ ಹಾನಿ ಮಾಡುವುದು, ಮಸೀದಿ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವುದು, ಸಿಬ್ಬಂದಿ ಅಥವಾ ಮಸೀದಿಗೆ ಸಂಬಂಧಿಸಿದವರನ್ನು ಬೆದರಿಸುವುದು ಅಪರಾಧ. ಇದು ಜಾಮೀನು ರಹಿತ ಪ್ರಕರಣ ಎಂಬುದಾಗಿ ಪೋಸ್ಟ್‌ಗಳು ಹರಿದಾಡುತ್ತಿವೆ.



✓ ಮಸೀದಿಗಳ ರಕ್ಷಣೆಗೆಂದೇ ತಿದ್ದುಪಡಿ ಕಾಯ್ದೆ ತಂದಿರುವುದನ್ನು ರಾಜಸ್ಥಾನ ಸರ್ಕಾರ ಅಲ್ಲಗಳೆದಿದೆ. ಸಾರ್ವಜನಿಕ ಆಸ್ತಿ ಕಾಯ್ದೆ 1984 ಸರಿಯಾದ ಮಾಹಿತಿ. ಆದರೆ ಪೋಸ್ಟ್‌ಗಳಲ್ಲಿ 1985 ಎಂಬುದಾಗಿ ಉಲ್ಲೇಖವಾಗಿದೆ. ಕಾಯ್ದೆಯಡಿ ಮಸೀದಿಗಳೂ ಸಾರ್ವಜನಿಕ ಆಸ್ತಿ ಎನಿಸಿಕೊಳ್ಳುತ್ತವೆಯೇ ಹೊರತು ಇವುಗಳನ್ನು ಪ್ರತ್ಯೇಕವಾಗಿ ಗುರುತಿಸಿಲ್ಲ. ಮಸೀದಿಗಳ ರಕ್ಷಣೆಗಾಗಿ ಕಾಯ್ದೆಯ 427ನೇ ಸೆಕ್ಷನ್‌ಗೆ ಸರ್ಕಾರ ತಿದ್ದುಪಡಿ ತಂದಿದೆ ಎಂಬುದು ವಾಸ್ತವಕ್ಕೆ ದೂರ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಉದ್ಧಾರದ ಮಾರ್ಗಗಳು

ಚಾರುದೃಶ್ಯಂಗಳಿಂ ಪ್ರೀತಿ ಹೃದಯವಿಕಾಸ |
ಕ್ರೂರದೌಷ್ಟ್ಯಂಗಳಿಂ ವೀರಾನುಕಂಪ ||
ಭೈರವಾದ್ಭುತಗಳಿಂ ಮೌನದಂತರ್ಮನನ |
ದಾರಿಯುದ್ಧಾರಕಿವು- ಮಂಕುತಿಮ್ಮ || 457 ||

ಪದ-ಅರ್ಥ: ಚಾರುದೃಶ್ಯಂಗಳಿಂ = ಚಾರು(ಸುಂದರವಾದ) + ದೃಶ್ಯಂಗಳಿಂ (ದೃಶ್ಯಗಳಿಂದ), ಕ್ರೂರದೌಷ್ಟ್ಯಂಗಳಿಂ = ಕ್ರೂರ + ದೌಷ್ಟ್ಯಂಗಳಿಂ(ದುಷ್ಟತನಗಳಿಂದ), ವೀರಾನುಕಂಪ = ವೀರ + ಅನುಕಂಪ, ಭೈರವಾದ್ಭುತಗಳಿಂ = ಭೈರವ(ಭಯಂಕರವಾದ) + ಅದ್ಭುತಗಳಿಂ, ಮೌನದಂತರ್ಮನನ = ಮೌನದ + ಅಂತರ್ಮನನ(ಅಂತರೀಕ್ಷಣೆ, ಆಂತರ್ಯದ ಚಿಂತನೆ), ದಾರಿಯುದ್ಧಾರಕಿವು = ದಾರಿ + ಉದ್ಧಾರಕ್ಕೆ + ಇವು.

ವಾಚ್ಯಾರ್ಥ: ಸುಂದರವಾದ ದೃಶ್ಯಗಳಿಂದ ಪ್ರೀತಿ ಮತ್ತು ಹೃದಯದ ವಿಕಾಸ. ಕ್ರೂರತೆಯನ್ನು, ದುಷ್ಟತನವನ್ನು ಕಂಡಾಗ ಹುಟ್ಟುವುದು ವೀರರಸ, ಅದಕ್ಕೆ ಪಾತ್ರರಾದವರನ್ನು ಕಂಡಾಗ ಅನುಕಂಪ, ಭಯಂಕರವಾದ, ಅದ್ಭುತಗಳನ್ನು ಕಂಡಾಗ ಮನ ಮೌನಕ್ಕೆ ಜಾರಿ ಅಂತರೀಕ್ಷಣೆ ಮಾಡುತ್ತದೆ. ಇವೆಲ್ಲ ಉದ್ಧಾರದ ದಾರಿಗಳು.

ವಿವರಣೆ: ಪ್ರಕೃತಿಗೂ, ಮನುಷ್ಯ ಸ್ವಭಾವಕ್ಕೂ ತುಂಬ ಹತ್ತಿರದ ಸಂಬಂಧ. ಸಂಬಂಧ ಮಾತ್ರವಲ್ಲ, ಒಂದು ಮತ್ತೊಂದನ್ನು ಪ್ರಚೋದಿಸುತ್ತದೆ. ನೀವೊಂದು ಸಮುದ್ರತೀರಕ್ಕೆ ಹೋಗಿದ್ದೀರಿ. ಅಲ್ಲಿ ಬೆಳಿಗ್ಗೆ ಸೂರ್ಯೋದಯವಾಗುತ್ತಿದೆ. ಕ್ಷಣಕ್ಷಣಕ್ಕೆ ಬದಲಾಗುವ ಆಕಾಶವರ್ಣಗಳು, ಅವುಗಳ ಪ್ರತಿಫಲನ ತೆರೆಗಳ ಮೇಲೆ ಮೂಡುವುದನ್ನು ಕಂಡಾಗ, ತಾಯಿಯ ತೊಡೆಯ ಮೇಲೆ ಮಲಗಿದ್ದ ಪುಟ್ಟ ಕಂದ ಫಳ್ಳನೇ ನಗುವುದನ್ನು ಕಂಡಾಗ, ಇಪ್ಪತ್ತು ವರ್ಷಗಳ ಕಾಲ ಕಣ್ಣಿನ ಗೊಂಬೆಯಂತೆ ಇದ್ದ ಮಗಳು ಮದುವೆಯಾಗಿ ಗಂಡನ ಮನೆಗೆ ಹೊರಟಾಗ, ಅವಳನ್ನು ತಬ್ಬಿಕೊಂಡು ಮಗುವಿನ ಹಾಗೆ ಬಿಕ್ಕುತ್ತಿದ್ದ ತಂದೆಯನ್ನು ಕಂಡಾಗ, ಇಂತಹ ಹಲವಾರು ಸುಂದರ ದೃಶ್ಯಗಳನ್ನು ನೋಡಿದಾಗ ನಿಮ್ಮ ಮನಸ್ಸಿನಲ್ಲಿ ಯಾವ ತರಹದ ಭಾವನೆಗಳು ಮೂಡುತ್ತವೆ? ಆ ಸಮಯದಲ್ಲಿ ಕೋಪ, ಹತಾಶೆ, ದ್ವೇಷಗಳು ಉಕ್ಕುವುದು ಸಾಧ್ಯವೆ? ಆಗ ಮನಸ್ಸಿನಲ್ಲಿ ಮೂಡುವುದು ಪ್ರೀತಿಯ, ಆನಂದದ, ಸಂತೃಪ್ತಿಯ, ಕೃತಜ್ಞತೆಯ ಭಾವನೆಗಳೇ. ಇವು ಹೃದಯವನ್ನು ವಿಕಸಿಸುವ ಭಾವನೆಗಳು.

ನೀವು ಯುದ್ಧದ ದೃಶ್ಯಗಳನ್ನು ವೀಕ್ಷಿಸುವಾಗ, ಕ್ರೌರ್ಯದ ಸಂದರ್ಭಗಳನ್ನು ನೋಡುತ್ತಿರುವಾಗ, ಭಯಂಕರವಾದ ಭೂಕಂಪದ, ಸುನಾಮಿಯ ಘಟನೆಗಳನ್ನು ಕಾಣುವಾಗ ನಮಗರಿಯದಂತೆ ಮನದಲ್ಲಿ ಕ್ರೌರ್ಯ ತಲೆ ಎತ್ತುತ್ತದೆ, ವೀರಾವೇಶ ಮೂಡುತ್ತದೆ. ಆದರೆ ಕ್ರೌರ್ಯದ, ದೌರ್ಜನ್ಯದ ದವಡೆಯಲ್ಲಿ ಸಿಕ್ಕಿ ನಲುಗಿದವರನ್ನು ಕಂಡಾಗ ಮನ ಕರಗುತ್ತದೆ. ಅವರ ಬಗ್ಗೆ ಅನುಕಂಪ ಮೂಡಿ ಬರುತ್ತದೆ.

ಹಿಮಾಲಯದ ಕೇದಾರನಾಥಕ್ಕೆ ಹೋಗುವಾಗ ಚಿಕ್ಕದಾರಿಯ ಎಡಭಾಗದ ಮಹೋನ್ನತ ಪರ್ವತಗಳನ್ನು ಮತ್ತು ಎಡಗಡೆಗೆ ತಳಕಾಣದ ಪ್ರಪಾತಗಳ ಅದ್ಭುತವನ್ನು ಕಂಡಾಗ, ಪರ್ವತದ ಶಿಖರಗಳೊಳಗೆ ಕುದಿಯುತ್ತಿದ್ದ ಲಾವಾ ಉಕ್ಕಿ ಗಗನಕ್ಕೆ ಚಿಮ್ಮಿದಾಗ, ಬೆಂಕಿಯ ಹೊಳೆ ಹರಿದಂತೆ ಹರಿದು ಇಡೀ ಪರ್ವತವನ್ನೇ ಭಸ್ಮ ಮಾಡಿದ್ದನ್ನು ನೋಡಿದಾಗ, ಯಾಕೆ ಹೀಗಾಗುತ್ತದೆ. ಏನಿದರ ಮರ್ಮ ಎಂದು ಮನಸ್ಸು ಮೌನವಾಗುತ್ತದೆ. ಈ ಅಸಾಮಾನ್ಯವಾದ, ಸೃಷ್ಟಿಯ ಭಯಂಕರವಾದ, ಅದ್ಭುತವಾದ ಮುಖದ ಹಿಂದಿರುವ ಶಕ್ತಿಯ ಬಗ್ಗೆ ಚಿಂತನೆ ಮೂಡುತ್ತದೆ. ಹೀಗೆ ಪ್ರೀತಿ, ಅಂತಃಕರಣಗಳು, ವೀರ, ಕ್ರೌರ್ಯ ಭಾವಗಳು, ಕೊನೆಗೆ ಮೌನದ ಅಂತರೀಕ್ಷಣೆ ಇವುಗಳೇ ನಮ್ಮ ಬದುಕಿನ ಉದ್ಧಾರಕ್ಕೆ ಕಾರಣವಾಗುವ ಪ್ರೇರಣೆಗಳು.

ದಿನ ಭವಿಷ್ಯ

ಸೋಮವಾರ ಸೆಪ್ಟೆಂಬರ್ 6, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ಚತುರ್ದಶಿ ಗಂ. 1-8 (ಬೆ. 6-42) ಸೋಮವಾರ ನಿತ್ಯ ನಕ್ಷತ್ರ ಮಖೆ ಗಂ. 30-14 (ಸಾ. 6-20) ಶಿವ ನಾಮ ಯೋಗ ಗಂ. 4-47 ಶಕುನಿ ಕರಣ ಗಂ. 1-8 ವಿಷ ಶೇಷ ಗಂ.3-55 ವಿಷ ಗಂ. 50-20 ಅಮೃತ ಗಂ. 23-20 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00: ಸೂರ್ಯೋದಯ: 6-12 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 7

ಮೇಷ: ವಿಚಾರಗಳನ್ನು ಭಿನ್ನ ದೃಷ್ಟಿಯಿಂದ ನೋಡಲು ಯತ್ನಿಸುವಿರಿ. ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಧಾವಂತದಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದೀತು.

ವೃಷಭ: ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ. ಎಲ್ಲಾ ವಿಧದಿಂದಲೂ ಸುಖಜೀವನ ನಿಮ್ಮದಾಗಲಿದೆ. ಅವಿವಾಹಿತರಿಗೆ ಬಂಧುಗಳ ಸಹಾಯದಿಂದ ಅನಿರೀಕ್ಷಿತವಾಗಿ ವಿವಾಹ ಯೋಗ. ದೇವಿಯ ಆರಾಧನೆಯಿಂದ ಯಶಸ್ಸು.

ಮಿಥುನ: ಕಲೆ, ಸಂಗೀತ, ಸಿನಿಮಾ ಮುಂತಾದ ಕಲಾಕ್ಷೇತ್ರಗಳಲ್ಲಿ ದುಡಿಯುತ್ತಿರುವವರಿಗೆ ಯಶಸ್ಸು. ಹೋಟೆಲ್ ಉದ್ಯಮಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ವಸ್ತ್ರಾಭರಣ ಖರೀದಿ ಸಾಧ್ಯತೆ.

ಕರ್ಕಾಟಕ: ಕಾರ್ಯಕ್ಷೇತ್ರದಲ್ಲಿ ಕೆಲಸ–ಕಾರ್ಯಗಳು ಸುಸೂತ್ರವಾಗಿ ಸಾಗುತ್ತವೆ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚಿಸಿಕೊಳ್ಳಲಿದ್ದೀರಿ. ಸೂಕ್ತ ವ್ಯಕ್ತಿಗಳಿಂದ ಸಕಾಲದಲ್ಲಿ ಸಲಹೆ ಪಡೆಯುವುದರಿಂದ ಅನುಕೂಲ.

ಸಿಂಹ: ಸರ್ಕಾರಿ ಮಟ್ಟದ ಉದ್ಯೋಗಿಗಳಿಗೆ ಯಶಸ್ಸು. ಮೇಲ್ವರ್ಗದ ಗುತ್ತಿಗೆದಾರರಿಗೆ ಟೆಂಡರ್ ಮೂಲಕ ಗುತ್ತಿಗೆ ಪಡೆಯುವ ಅವಕಾಶ. ಕೃಷಿಕರಿಗೆ, ಕೃಷಿ ಜಮೀನು ವ್ಯಾಪಾರದಲ್ಲಿ ತೊಡಗಿರುವವರಿಗೆ ಉತ್ತಮ ಲಾಭ.

ಕನ್ಯಾ: ಶಿಸ್ತುಬದ್ಧ ಜೀವನದಿಂದಾಗಿ ಎಲ್ಲ ರಂಗಗಳಲ್ಲಿಯೂ ಯಶಸ್ಸು. ಸಕಾರಾತ್ಮಕ ಚಿಂತನೆಗಳಿಂದಾಗಿ ಸಮಸ್ಯೆಗಳು ಕರಗಿಹೋಗಲಿವೆ. ಆಪ್ತ ಮಹಿಳೆಯರಿಂದ ದೊರೆತ ಸಲಹೆಗಳನ್ನು ತಿರಸ್ಕರಿಸುವುದು ಸರಿಯಲ್ಲ.

ತುಲಾ: ಜೀವನದಲ್ಲಿ ಒಂದು ವಿಶೇಷ ತಿರುವನ್ನು ಪಡೆದುಕೊಳ್ಳುವ ಪರ್ವಕಾಲ. ನಿಮ್ಮ ದುಡಿಮೆ, ನಿಷ್ಠೆ, ಆತ್ಮವಿಶ್ವಾಸ ವೃತ್ತಿರಂಗದಲ್ಲಿ ಯಶಸ್ಸಿನೊಂದಿಗೆ ಸಂಪಾದಾಭಿವೃದ್ಧಿಯನ್ನು ಸಾಧಿಸಲಿದ್ದೀರಿ. ಮಂಗಳ ಕಾರ್ಯಗಳಿಗೆ ಚಾಲನೆ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ವಿಶೇಷ ರೀತಿಯ ಸೌಲಭ್ಯಗಳು ದೊರಕುವ ಸಾಧ್ಯತೆ. ಕೃಷಿಕ್ಷೇತ್ರದಲ್ಲಿ ದುಡಿಯುವವರಿಗೆ ಉತ್ತಮ ಆದಾಯ. ದರ್ಜಿಗಳು ಮತ್ತು ಜವಳಿ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಸ್ಥಿರತೆ.

ಧನು: ಸಾಮಾಜಿಕ ರಂಗದಲ್ಲಿ ಸ್ಥಾನಮಾನದೊಂದಿಗೆ ಜನಾನುರಾಗಕ್ಕೂ ಉತ್ತಮ ಅವಕಾಶ. ವಿವಿಧ ರೀತಿಯಲ್ಲಿ ಮನಸ್ಸಂಕಲ್ಪದಂತೆ ಕಾರ್ಯಗಳು ನೆರವೇರಿ ಮುನ್ನಡೆ. ತೈಲೋದ್ಯಮದವರಿಗೆ ಉತ್ತಮ ಆದಾಯ.

ಮಕರ: ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ಬಂದರೂ ಖರ್ಚು ವೆಚ್ಚಗಳ ವಿಚಾರದಲ್ಲಿ ಜಾಗರೂಕತೆ ಅಗತ್ಯ. ಹಿರಿಯರ ಅನುಗ್ರದಿಂದ ನೆಮ್ಮದಿ. ವಿದ್ಯಾರ್ಥಿಗಳಿಗೆ ಬಿಡುವಿನ ದಿನ. ಹೊಸ ಯೋಜನೆಗಳ ವಿಚಾರದಲ್ಲಿ ಚಿಂತನೆ.

ಕುಂಭ: ಹಲವು ಹೊಸಬರ ಪರಿಚಯದಿಂದಾಗಿ ಎಲ್ಲ ರೀತಿಯಿಂದಲೂ ಅನುಕೂಲ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರಕಲಿದೆ. ವಿದ್ಯಾರ್ಥಿಗಳಿಗೆ ಹೊಸ ವಿಷಯಗಳ ಪರಿಚಯ ಸ್ಫೂರ್ತಿತರಲಿದೆ.

ಮೀನ: ಕಾರ್ಯರಂಗದಲ್ಲಿ ಧೈರ್ಯ, ಪ್ರಯತ್ನಬಲ, ಆತ್ಮವಿಶ್ವಾಸದ ಪ್ರವೃತ್ತಿಗಳಿಂದಾಗಿ ಸಮಸ್ಯೆಗಳು ದೂರವಾಗಲಿವೆ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚುವುದರ ಜೊತೆಗೆ ಗೌರವ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ನಿಮ್ಮ ಜನ್ಮದಿನ 6-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಹಿಂದಿನ ಬದುಕಿನ ಅನುಭವಗಳು ಸಹಾಯಕವಾಗಿ ಪರಿಣಮಿಸಲಿವೆ. ಹೊಸ ಉತ್ಸಾಹದಿಂದ ಕೆಲಸ ಪ್ರಾರಂಭಿಸಿ. ಮನಸ್ಸಿನ ಏಕಾಗ್ರತೆಯಿಂದ ಜಯ ಖಂಡಿತ. ಮನೆಯವರ ಬೆಂಬಲದಿಂದಾಗಿ ಆತ್ಮವಿಶ್ವಾಸ ವೃದ್ಧಿಯಾಗಲಿದೆ.

ಪದಬಂಧ 4711


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಸುವಿನಲ್ಲಿದೆಯೇ ಕೈಗೂಡದ ಆಸೆ? (6)
4.ಮಹಮ್ಮದೀಯ ಬೈರಾಗಿ (4)
5.ಈ ಬಡವ ಹಿಂದಿಯವ! (3)
7.ಪ್ರತೀ ಬಾರಿ ಕಾಣಿಸುತ್ತಿರುವ ಪ್ರತಿಬಿಂಬ (3)
9. ಮನಸ್ಸಿನ ಒಲವು (3)
12.ಕರಿಯ ಮರಿ ಬಿದ್ದಿರುವ ಗುಂಡಿ (3)
13.ಈಕೆ ಬೇರೆಯವರ ಹೆಂಡತಿ (4)
15.ಇದು ಹಣೆಬರಹ (6)

ಮೇಲಿಂದ ಕೆಳಕ್ಕೆ

1.ತೀಕ್ಷ್ಣದೃಷ್ಟಿಯನ್ನು ಹೀಗೂ ಹೇಳುವರು (4)
2.ಸುಮುಖದಲ್ಲಿರುವ ಆನಂದ (2)
3.ಬೇಡಿ ಪಡೆದಿದ್ದು (3)
6.ಕ್ಷಾಮದ ಕಾಲವಿದು (4)
7.ಹರಿಯನ್ನು ಸ್ಮರಿಸುವ ಕಾವಲುಗಾರ (3)
8.ಈತ ಲೆಕ್ಕ ಬರೆಯುವವನು (4)
10.ಚೆನ್ನಾಗಿ ಗುರುತುಳ್ಳವನು (4)
11.ಕಾಯಕ್ಲೇಷಾದಿಗಳಿಂದ ದೇಹದಂಡಿಸಿ ಧ್ಯಾನ ಮಾಡುವುದು (3)
14.ತಿಕ್ಕಲ ಹಿಡಿದಿರುವ ಎಳ್ಳು (2)



4710ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
2.ಸನ್ನಿ
4.ವಿವಾಹ5.ಸಮಾಧಾನ
6.ಗಡಿಯಾರ7.ನವ9.ತವಿ
13.ವಾಸಸ್ಥಾನ14.ಸಹವಾಸ
15.ಯಾಚಕ16.ಸ್ನಾನ

ಮೇಲಿಂದ ಕೆಳಕ್ಕೆ
1.ನವಿರೆಳೆ
2.ಸಹಗಮನ3.ಪ್ರಧಾನ
5.ಸರಸ್ವತಿ8.ವನವಾಸ
10.ವಿಮಾನಯಾನ11.ಆಶುಕವಿ
12.ಮಹಲು

ಸುಡೊಕು 5097

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5096 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಹಬ್ಬದ ಋತುವಿನಲ್ಲಿ ವಾಹನಗಳಿಗೆ ಉತ್ತಮ ಬೇಡಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಈ ಬಾರಿಯ ಹಬ್ಬದ ಋತುವಿನಲ್ಲಿ ವಾಹನಗಳ ಮಾರಾಟವು ಕಳೆದ ವರ್ಷಕ್ಕಿಂತಲೂ ಉತ್ತಮವಾಗಿರಲಿದೆ ಎಂಬ ನಿರೀಕ್ಷೆಯನ್ನು ಮಾರುತಿ ಸುಜುಕಿ, ಟೊಯೋಟ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಗಳು ಹೊಂದಿವೆ.

ಸೆಮಿಕಂಡಕ್ಟರ್ ಚಿಪ್ ಕೊರತೆ ಮುಂದುವರಿದಿದ್ದು, ಕಂಪನಿಗಳಿಗೆ ನಿಗದಿಯಂತೆ ತಯಾರಿಕೆ ಮುಂದುವರಿಸುವುದು ದೊಡ್ಡ ಸವಾಲಾಗಿದೆ. ಹೀಗಿದ್ದರೂ ಮಾರಾಟ ಉತ್ತಮವಾಗಿರುವ ನಿರೀಕ್ಷೆಯನ್ನು ಇವು ವ್ಯಕ್ತಪಡಿಸಿವೆ.

‘ಸದ್ಯ ಬೇಡಿಕೆಯು ತಕ್ಕಮಟ್ಟಿಗೆ ಇದೆ. ಕಳೆದ ವರ್ಷಕ್ಕಿಂತ ತುಸು ಉತ್ತಮವಾಗಿದೆ. ಬುಕಿಂಗ್, ಹೊಸ ವಾಹನ ಖರೀದಿಗಾಗಿ ಗ್ರಾಹಕರು ವಿಚಾರಣೆ ನಡೆಸುವುದು ಹೆಚ್ಚುತ್ತಿದೆ. ಪೂರೈಕೆ ದೃಷ್ಟಿಯಿಂದ ಕೆಲವೊಂದಿಷ್ಟು ಸಮಸ್ಯೆಗಳಿವೆ’ ಎಂದು ಮಾರುತಿ ಸುಜುಕಿ ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ನವರಾತ್ರಿ ವೇಳೆಗೆ ಬೇಡಿಕೆಯಲ್ಲಿ ಭಾರಿ ಏರಿಕೆ ಕಂಡುಬರಲಿದ್ದು, ಅದಕ್ಕೂ ಮುನ್ನವೇ ವಾಹನಗಳ ದಾಸ್ತಾನು ಹೆಚ್ಚಿಸಲು ಕಂಪನಿ ಉದ್ದೇಶಿಸಿದೆ. ಆದರೆ, ಸೆಮಿಕಂಡಕ್ಟರ್ ಪೂರೈಕೆ ಪರಿಸ್ಥಿತಿಯ ಮೇಲೆ ಅದು ನಿರ್ಧಾರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಮಾರಾಟವು ಕಳೆದ ವರ್ಷಕ್ಕಿಂತ ಹೆಚ್ಚಾಗುವ ನಿರೀಕ್ಷೆ ಇದೆಯಾದರೂ ಅದು 2017–19ರಲ್ಲಿ ಆಗಿದ್ದಂತ ಹೆಚ್ಚಿನ ಮಟ್ಟವನ್ನು ತಲುಪಲು ಸಾಧ್ಯವಾಗಲಾರದು ಎಂದು ಅವರು ಹೇಳಿದ್ದಾರೆ.


‘ಒಟ್ಟಾರೆ ಹಬ್ಬದ ಬೇಡಿಕೆಯಲ್ಲಿ ಯುಟಿಲಿಟಿ ವಾಹನಗಳ ಸಂಖ್ಯೆ ಹೆಚ್ಚಿಗೆ ಇರಲಿದೆ. ಪ್ರಯಾಣಿಕ ವಾಹನಗಳ ವಿಭಾಗದಲ್ಲಿ ಇದರ ಕೊಡುಗೆಯು ಬಹುತೇಕ ಅರ್ಧದಷ್ಟಾಗಲಿದೆ’ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಸಿಇಒ ವಿಜಯ್ ನಕ್ರಾ ಹೇಳಿದ್ದಾರೆ.

ಬೇಡಿಕೆ ಕ್ರಮೇಣ ಹೆಚ್ಚಾಗುತ್ತಿದ್ದು, ಕಂಪನಿಯು ತನ್ನ ಗ್ರಾಹಕರ ಅಗತ್ಯಗಳನ್ನು ಪೂರೈಸಲು ಉದ್ದೇಶಿಸಿದೆ ಎಂದು ಟೊಯೋಟ ಕಿರ್ಲೋಸ್ಕರ್ ಮೋಟರ್‌ನ ಸಹಾಯಕ ವ್ಯವಸ್ಥಾಪಕ ನಿರ್ದೇಶಕ ವಿಸ್ಲೈನ್ ಸಿಗಮಣಿ ಹೇಳಿದ್ದಾರೆ.


‘ಆಲದಮರ’ದಡಿ ‘ಬೇಂದ್ರೆ ಹಾಡು–ಪಾಡು’ ಕಾರ್ಯಕ್ರಮದಲ್ಲಿ ಕಾವ್ಯದ ಸೋನೆ ಮಳೆ

ಶ್ರಾವಣ ಕವಿಯು ಕಾವ್ಯಕ್ಕೆ ಕಿವಿಯಾದರು...

ಪ್ರಜಾವಾಣಿ ವಾರ್ತೆ


ಡಾ ಜಿ ಕೃಷ್ಣಪ್ಪ


ಡಾ. ಶಮಿತಾ ಮಲ್ನಾಡ್


ಪ್ರಹ್ಲಾದ್ ಬಿ.ಮಹಿಷಿ


ಎಂ.ಡಿ.ಪಲ್ಲವಿ


ಬಸವಲಿಂಗಯ್ಯ ಹಿರೇಮಠ

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): ಹೆಚ್ಚಿನವರು ವಸಂತ ಮಾಸದ ಕವಿಗಳು. ದ.ರಾ. ಬೇಂದ್ರೆ ಅವರು ಶ್ರಾವಣದ ಕವಿ. ಕಿವಿಯನ್ನು ಕಣ್ಣಾಗಿಸಿ ಪ್ರಕೃತಿ, ಬದುಕನ್ನು ಆಸ್ವಾದಿಸಿದ ಕವಿ....

–ಇದು ಬೇಂದ್ರೆ ಕಾವ್ಯ ಪರಿಚಾರಕ ಡಾ.ಜಿ. ಕೃಷ್ಣಪ್ಪ ಅವರ ಭಾವುಕ ಮಾತು. ‘ಆಲದಮರ’ದ ಅಡಿಯಲ್ಲಿ ಭಾನುವಾರ ಬೆಳಿಗ್ಗೆಯಿಂದ ‘ಬೇಂದ್ರೆ ಹಾಡು–ಪಾಡು’ ಕಾರ್ಯಕ್ರಮದಲ್ಲಿ ಕಾವ್ಯದ ಸೋನೆ ಮಳೆಯೇ ಹರಿಯಿತು. ಶ್ರಾವಣ ಬಂತು ನಾಡಿಗೆ... ಹಾಡಿಗೆ ಗಾಯಕಿ ಎಂ.ಡಿ. ಪಲ್ಲವಿ ಅವರು ಧ್ವನಿಯಾಗಿ ನಾಂದಿ ಹಾಡಿದರು.

‘ಶ್ರಾವಣವನ್ನು ಧ್ಯಾನಿಸುವ ಕವಿ ಬೇಂದ್ರೆ. ರಸವೇ ಜೀವನ–ವಿರಸವೇ ಮರಣ–ಸಮರಸವೇ ಜೀವನ ಎಂಬ ಅನುಭಾವವನ್ನು ಜಗತ್ತಿಗೆ ಕೊಟ್ಟಿದ್ದಾರೆ’ ಎಂದು ಕೃಷ್ಣಪ್ಪ ನೆನಪಿಸಿದರು.

‘ಮೂಡಲ ಮನೆಯ ಮುತ್ತಿನ ನೀರಿನ ಎರಕವಾ ಹೊಯ್ದ...’ ಹಾಡು ಡಾ.ಶಮಿತಾ ಮಲ್ನಾಡ್ ಧ್ವನಿಯಲ್ಲಿ ಮೂಡಿಬಂದಿತು.

‘ಬೇಂದ್ರೆ ಅವರು ಶಬ್ದಗಳನ್ನು ಹೂವು, ತರಕಾರಿ ಮಾರುವವರು, ಶ್ರೀಸಾಮಾನ್ಯರಿಂದಲೇ ಪಡೆದಿದ್ದಾರೆ. ಹೀಗಾಗಿಯೇ ಅವರ ಕಾವ್ಯಸೃಷ್ಟಿ ಗಟ್ಟಿಯಾಗಿದೆ’ ಎಂದರು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಪ್ರಹ್ಲಾದ ಬಿ. ಮಹಿಷಿ.

ಉಪರಾಷ್ಟ್ರಪತಿಗೆ ಹಾವು ತೋರಿಸಿದ್ದು!: ‘ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಹಾವಾಡಿಗನೊಬ್ಬನನ್ನು ಸಮಾರಂಭದ ಸ್ಥಳಕ್ಕೆ ಕರೆತಂದಿದ್ದ ಬೇಂದ್ರೆ ಅವರು, ವೈವಿಧ್ಯಮಯ ಹಾವುಗಳನ್ನು ಉಪರಾಷ್ಟ್ರಪತಿಯವರಿಗೆ ತೋರಿಸಬೇಕು ಎಂದು ಪಟ್ಟು ಹಿಡಿದಿದ್ದರು. ಕೊನೆಗೂ ಹಾವಾಡಿಗನಿಗೆ ಉಪರಾಷ್ಟ್ರಪತಿಯವರಿಗೆ ಹಾವು ತೋರಿಸಲು ಬಿಟ್ಟೆವು’ ಎಂದು ನೆನಪಿಸಿದರು ಪ್ರಹ್ಲಾದ ಮಹಿಷಿ.

‘ನೀ ಹಿಂಗ ನೋಡಬ್ಯಾಡ ನನ್ನ... ಈ ಹಾಡಿನ ಹಿಂದೆ ಬೇಂದ್ರೆಯವರ ಅಪಾರ ದುಃಖವಿದೆ. ಲಲಿತಾ ಎಂಬ ಮಗು ಸಾವಿನ ಅಂಚಿನಲ್ಲಿದ್ದಾಗ ಪುಣೆಯಿಂದ ಬರುತ್ತಿದ್ದ ಅವರು ಭಾವತೀವ್ರತೆಯಲ್ಲಿ ಬರೆದ ಹಾಡು ಅದು’ ಎಂದರು ಜಿ.ಕೃಷ್ಣಪ್ಪ.

‘ಬೇಂದ್ರೆ ಅವರಿಗೆ ಡಾಕ್ಟರೇಟ್ ಸಿಕ್ಕಾಗ, ನಾನು ಹುಟ್ಟಾನೆ ಡಿ.ಆರ್. ಬೇಂದ್ರೆ (ದತ್ತಾತ್ರೇಯ ರಾಮಚಂದ್ರ ಬೇಂದ್ರೆ). ಇದರಲ್ಲೇನು ವಿಶೇಷ ಎಂದರಂತೆ’ ಎಂದು ಬೇಂದ್ರೆ ಮಾತನ್ನು ನೆನಪಿಸಿದರು ಪ್ರಹ್ಲಾದ ಮಹಿಷಿ.

ಪ್ರಜಾವಾಣಿ ಆಲದಮರ

ಗಾಯಕ ಬಸವಲಿಂಗಯ್ಯ ಹಿರೇಮಠ, ಬೇಂದ್ರೆಯವರ ‘ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ....’ ಗೀತೆ ಹಾಡಿದರು.

ಕಿನ್ನರಿ ಆಡಿಯೊ ಸಂಸ್ಥೆ ಮಾಲೀಕರಾದ ಪದ್ಮಪಾಣಿ ಜೋಡಿದಾರ್ ಮಾತನಾಡಿ, ‘ಬೇಂದ್ರೆಯವರ ಹಾಡುಗಳ ಕ್ಯಾಸೆಟ್ ಹೊರತಂದಾಗ ದಕ್ಷಿಣ ಕನ್ನಡ, ಕಾಸರಗೋಡಿನಲ್ಲಿ ಸಾಕಷ್ಟು ಮಾರಾಟ ಆದವು. ಆದರೆ, ಧಾರವಾಡದಲ್ಲಿ ಎರಡೇ ಕ್ಯಾಸೆಟ್ ಮಾರಾಟವಾದವು’ ಎಂದು ಸ್ಮರಿಸಿದರು.

ಬೇಂದ್ರೆ ಅವರ ಎರಡು ಕವನಗಳನ್ನು ನಾನು ಬರೆದಿದ್ದೇನೆ (ಅವರು ಹೇಳಿದ್ದನ್ನು ಬರೆದುಕೊಟ್ಟದ್ದು) ಎಂದರು ಪದ್ಮಪಾಣಿ.

ನಾಕುತಂತಿ ಕವನಸಂಕಲನದ ಹಾಡಿನೊಂದಿಗೆ ಕಾರ್ಯಕ್ರಮಕ್ಕೆ ತೆರೆ ಬಿತ್ತು. ಸಾಹಿತಿಗಳಾದ ಉಷಾ ಪಿ. ರೈ, ಎಂ.ಆರ್. ಕಮಲಾ ಸೇರಿದಂತೆ ನೂರಾರು ಕೇಳುಗರು ಭಾಗವಹಿಸಿದ್ದರು. ಪ್ರಜಾವಾಣಿ ಸಹ ಸಂಪಾದಕ ಬಿ.ಎಂ. ಹನೀಫ್ ಕಾರ್ಯಕ್ರಮ ನಡೆಸಿಕೊಟ್ಟರು.

27ರಂದು ‘ಕೈಗಾರಿಕಾ ಅದಾಲತ್’: ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಇಲಾಖೆಯಲ್ಲಿ ದೀರ್ಘ ಅವಧಿಯಿಂದ ಬಾಕಿ ಉಳಿದಿರುವ ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಮತ್ತೆ ‘ಕೈಗಾರಿಕಾ ಅದಾಲತ್’ ಆರಂಭಿಸಲು ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಮುಂದಾಗಿದ್ದಾರೆ. ಜೊತೆಗೆ, ‘ಉದ್ಯಮಿಯಾಗು- ಉದ್ಯೋಗ ನೀಡು’ ಯೋಜನೆಗೂ ಚಾಲನೆ ಸಿಗಲಿದೆ.

ಇದೇ ತಿಂಗಳ 27ರಂದು ಬೆಂಗಳೂರಿನಲ್ಲಿ ಕೈಗಾರಿಕಾ ಅದಾಲತ್, ಮರುದಿನ ‘ಉದ್ಯಮಿಯಾಗು, ಉದ್ಯೋಗ ನೀಡು’ ಕಾರ್ಯಕ್ರಮ ನಡೆಯಲಿದೆ.

2008– 2013 ರಲ್ಲಿ ಕೈಗಾರಿಕಾ ಸಚಿವರಾಗಿದ್ದ ವೇಳೆ ಮೊದಲ ಬಾರಿಗೆ ಕೈಗಾರಿಕಾ ಅದಾಲತ್ ಎಂಬ ಪರಿಕಲ್ಪನೆಯನ್ನು ನಿರಾಣಿ ಜಾರಿಗೆ ತಂದಿದ್ದರು. ಗಣಿ ಮತ್ತು ಕಲ್ಲಿದ್ದಲು ಸಚಿವರಾಗಿದ್ದ ವೇಳೆಯೂ ಒಂದೇ ಸೂರಿನಡಿ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಜಿಲ್ಲಾ ಮಟ್ಟದಲ್ಲಿ ‘ಗಣಿ ಅದಾಲತ್’ ನಡೆಸಲು ಅವರು ಮುಂದಾಗಿದ್ದರು.

ರಾಜ್ಯದಾದ್ಯಂತ ಹಲವು ಕೈಗಾರಿಕಾ ವ್ಯಾಜ್ಯಗಳು ಅನೇಕ ವರ್ಷಗಳಿಂದ ಬಗೆಹರಿಯದೆ ಉಳಿದಿವೆ. ಅವುಗಳನ್ನು ದಾವೆದಾರರ ಸಮಕ್ಷಮದಲ್ಲಿ ಸುಲಭವಾಗಿ ಬಗೆಹರಿಸಿಕೊಳ್ಳಬಹುದು. ಶೇ 75 ರಷ್ಟು ಸಮಸ್ಯೆಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸಿಕೊಳ್ಳಬಹುದು. ಇದರಿಂದ ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಸಹಾಯಕವಾಗಲಿದೆ ಎಂಬ ನಿರೀಕ್ಷೆ ನಿರಾಣಿ ಅವರದ್ದು.

ಬಿಡದಿ, ಹಾರೋಹಳ್ಳಿ, ಜಿಗಣಿ, ದಾಬಸ್ ಪೇಟೆ, ತುಮಕೂರಿನ ವಸಂತ ನರಸಾಪುರದಲ್ಲಿರುವ ಆಹಾರ ಸಂಸ್ಕರಣಾ ಘಟಕ ಸೇರಿದಂತೆ ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಿದಾಗ ಬಾಕಿ ಇರುವ ಪ್ರಕರಣಗಳ ಬಗ್ಗೆ ದೂರುಗಳು ಕೇಳಿಬಂದಿದ್ದವು. ಹೀಗಾಗಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಇ.ವಿ. ರಮಣರೆಡ್ಡಿ, ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಮತ್ತು ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ರೇವಣ್ಣ ಗೌಡ ಸೇರಿದಂತೆ ಹಲವು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ ನಿರಾಣಿ, ಹಲವು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕಾರ್ಯೋನ್ಮುಖರಾಗುವಂತೆ ಸೂಚಿಸಿದ್ದರು.

ಯುವಕರು ಉದ್ಯಮಿಗಳಾಗುವಂತೆ ಪ್ರೋತ್ಸಾಹಿಸಲು ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ನಗರಗಳಲ್ಲಿ ‘ಕೈಗಾರಿಕಾ ಅದಾಲತ್’ ನಡೆದ ಮರುದಿನ ಕಾರ್ಯಾಗಾರ ಹಮ್ಮಿಕೊಳ್ಳಲು ನಿರಾಣಿ ನಿರ್ಧರಿಸಿದ್ದಾರೆ.

ಈ ವರ್ಷ ಪಾವತಿಸಬೇಕಿರುವ ಮೊತ್ತ ₹ 10 ಸಾವಿರ ಕೋಟಿ

ತೈಲ ಬಾಂಡ್ ಮೊತ್ತಕ್ಕಿಂತ ಮೂರು ಪಟ್ಟು ಹೆಚ್ಚು ಸುಂಕ ಸಂಗ್ರಹ

ನವದೆಹಲಿ (ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕದಿಂದ ಕೇಂದ್ರ ಸರ್ಕಾರ ಸಂಗ್ರಹಿಸಿದ ಮೊತ್ತವು ಪ್ರಸಕ್ತ ಹಣಕಾಸು ವರ್ಷದ ಮೊದಲ ನಾಲ್ಕು ತಿಂಗಳುಗಳಲ್ಲಿ ಶೇಕಡ 48ರಷ್ಟು ಹೆಚ್ಚಳ ಆಗಿದೆ. ನಾಲ್ಕು ತಿಂಗಳಲ್ಲಿ ಸಂಗ್ರಹವಾಗಿರುವ ಹೆಚ್ಚುವರಿ ಮೊತ್ತವು ಕೇಂದ್ರ ಸರ್ಕಾರವು ತೈಲ ಬಾಂಡ್‌ಗಳಿಗೆ ಪ್ರತಿಯಾಗಿ ಈ ಇಡೀ ವರ್ಷದಲ್ಲಿ ಕೊಡಬೇಕಿರುವುದಕ್ಕಿಂತ ಮೂರು ಪಟ್ಟು ಹೆಚ್ಚು!

ಕೇಂದ್ರ ಹಣಕಾಸು ಸಚಿವಾಲಯದ ಲೆಕ್ಕಪತ್ರಗಳ ಮಹಾ ನಿಯಂತ್ರಕರ ಬಳಿ ಇರುವ ಅಂಕಿ–ಅಂಶಗಳ ಪ್ರಕಾರ, ಈ ವರ್ಷದ ಏಪ್ರಿಲ್‌ನಿಂದ ಜುಲೈವರೆಗೆ ಸಂಗ್ರಹ ಆಗಿರುವ ಎಕ್ಸೈಸ್ ಸುಂಕದ ಮೊತ್ತವು ₹ 1 ಲಕ್ಷ ಕೋಟಿಯನ್ನು ದಾಟಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 67,895 ಕೋಟಿ ಸಂಗ್ರಹ ಆಗಿತ್ತು.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ, ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಮತ್ತು ನೈಸರ್ಗಿಕ ಅನಿಲದ ಮೇಲೆ ಮಾತ್ರ ಎಕ್ಸೈಸ್ ಸುಂಕ ವಿಧಿಸಲಾಗುತ್ತಿದೆ.

ಏಪ್ರಿಲ್–ಜುಲೈ ಅವಧಿಯಲ್ಲಿ ಆಗಿರುವ ₹ 32,492 ಕೋಟಿಯಷ್ಟು ಹೆಚ್ಚುವರಿ ಎಕ್ಸೈಸ್ ಸುಂಕ ಸಂಗ್ರಹವು, ಹಾಲಿ ಹಣಕಾಸು ವರ್ಷದಲ್ಲಿ ತೈಲ ಬಾಂಡ್‌ಗಳಿಗೆ ಪ್ರತಿಯಾಗಿ ಪಾವತಿ ಮಾಡಬೇಕಿರುವ ₹ 10 ಸಾವಿರ ಕೋಟಿಗಿಂತ ಮೂರು ಪಟ್ಟು ಜಾಸ್ತಿ. ಯುಪಿಎ ಸರ್ಕಾರದ ಅವಧಿಯಲ್ಲಿ ಸಬ್ಸಿಡಿ ದರದಲ್ಲಿ ಇಂಧನ ಒದಗಿಸುವ ಉದ್ದೇಶಕ್ಕೆ ತೈಲ ಬಾಂಡ್ ನೀಡಲಾಗಿತ್ತು.

ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದಲೇ ಹೆಚ್ಚಿನ ಪ್ರಮಾಣದ ಎಕ್ಸೈಸ್ ಸುಂಕ ಸಂಗ್ರಹ ಆಗಿದೆ. ಎಲ್‌ಪಿಜಿ, ಸೀಮೆಎಣ್ಣೆ ಹಾಗೂ ಡೀಸೆಲ್‌ಅನ್ನು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡಲು, ಯುಪಿಎ ಸರ್ಕಾರವು ಒಟ್ಟು ₹ 1.34 ಲಕ್ಷ ಕೋಟಿ ಮೌಲ್ಯದ ತೈಲ ಬಾಂಡ್‌ಅನ್ನು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ನೀಡಿದೆ. ಈ ಮೊತ್ತದಲ್ಲಿ ₹ 10 ಸಾವಿರ ಕೋಟಿಯನ್ನು ಕೇಂದ್ರ ಸರ್ಕಾರವು ಕಂಪನಿಗಳಿಗೆ ಈ ವರ್ಷ ಪಾವತಿಸಬೇಕಿದೆ.

₹32,492 ಕೋಟಿ
ಏಪ್ರಿಲ್–ಜುಲೈ ಅವಧಿಯಲ್ಲಿ ಎಕ್ಸೈಸ್ ಸುಂಕದಿಂದ ಸಂಗ್ರಹವಾಗಿರುವ ಹೆಚ್ಚುವರಿ ಮೊತ್ತ

₹10,000 ಕೋಟಿ
ಈ ವರ್ಷ ತೈಲ ಬಾಂಡ್‌ಗಳಿಗೆ ಪ್ರತಿಯಾಗಿ ಪಾವತಿಸಬೇಕಿರುವ ಮೊತ್ತ

ಇಂಧನ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ್ದರೂ, ಅವುಗಳ ಬೆಲೆ ತಗ್ಗಿಸಿ ಜನಸಾಮಾನ್ಯರ ಮೇಲಿನ ಹೊರೆಯನ್ನು ತಗ್ಗಿಸಲು ಸಾಧ್ಯವಾಗುತ್ತಿಲ್ಲದಿರುವುದಕ್ಕೆ ಕಾರಣ ತೈಲ ಬಾಂಡ್‌ಗಳು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕೇಂದ್ರ ಇಂಧನ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದರು.

ಈ ಹಿಂದೆ ಇಂಧನವನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡಲಾಗಿತ್ತು. ಅದರ ಪರಿಣಾಮವಾಗಿ ಈಗ ಪಾವತಿ ಮಾಡಬೇಕಿರುವ ತೈಲ ಬಾಂಡ್ ಹಣವು, ಈಗ ಇಂಧನ ದರ ತಗ್ಗಿಸಲು ಅವಕಾಶ ಕೊಡುತ್ತಿಲ್ಲ. ಹಾಗಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ತಗ್ಗಿಸಲು ಆಗದು ಎಂದು ನಿರ್ಮಲಾ ಅವರು ಈಚೆಗೆ ಹೇಳಿದ್ದರು.

75 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ‘ಫಾರಂ 12ಬಿಬಿಎ’

ನವದೆಹಲಿ (ಪಿಟಿಐ): 75 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು 2021-22ರ ಆರ್ಥಿಕ ವರ್ಷಕ್ಕೆ ಐ.ಟಿ. ವಿವರ ಸಲ್ಲಿಸುವುದರಿಂದ ವಿನಾಯಿತಿ ಪಡೆಯಲು ಬ್ಯಾಂಕ್‌ಗಳಿಗೆ ಸಲ್ಲಿಸಬೇಕಿರುವ ಅರ್ಜಿ ನಮೂನೆ ‘ಫಾರಂ 12ಬಿಬಿಎ’ಅನ್ನು ಆದಾಯ ತೆರಿಗೆ ಇಲಾಖೆಯು ಭಾನುವಾರ ಬಿಡುಗಡೆ ಮಾಡಿದೆ.

ಒಂದೇ ಬ್ಯಾಂಕ್‌ನಲ್ಲಿ ಪಿಂಚಣಿ ಆದಾಯ ಮತ್ತು ನಿಶ್ಚಿತ ಠೇವಣಿಯ ಬಡ್ಡಿ ಪಡೆಯುತ್ತಿರುವ 75 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು ಏಪ್ರಿಲ್ 1ರಿಂದ ಐ.ಟಿ. ವಿವರ ಸಲ್ಲಿಸುವ ಅವಶ್ಯಕತೆ ಇಲ್ಲ. ಅವರ ಆದಾಯಕ್ಕೆ ತಕ್ಕಂತೆ ಬ್ಯಾಂಕ್ ತೆರಿಗೆ ಕಡಿತ ಮಾಡಲಿದೆ ಎಂದು ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹437

ಎಷ್ಟಿರಬೇಕು ಮ್ಯೂಚುವಲ್ ಫಂಡ್ ಹೂಡಿಕೆ?


ಹಣಕಾಸು ಸಾಕ್ಷರತೆ
ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಎಷ್ಟು ಹಣ ಹೂಡಿಕೆ ಮಾಡಬೇಕು ಎನ್ನುವುದು ಪ್ರತಿ ಹೂಡಿಕೆದಾರನ ಪ್ರಶ್ನೆ. ಒಬ್ಬೊಬ್ಬರ ಅಗತ್ಯಗಳು, ಆದಾಯ ಮಟ್ಟ, ಖರ್ಚು-ವೆಚ್ಚಗಳು ಭಿನ್ನವಾಗಿರುವುದರಿಂದ ಈ ಪ್ರಶ್ನೆಗೆ ಎಲ್ಲರಿಗೂ ಒಪ್ಪಿಗೆಯಾಗುವ ನಿರ್ದಿಷ್ಟ ಉತ್ತರವಿಲ್ಲ. ಆದಾಯದ ಇಂತಿಷ್ಟೇ ಭಾಗವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು ಎನ್ನುವ ಸೂತ್ರವೂ ಇಲ್ಲ. ಆದರೆ ಮ್ಯೂಚುವಲ್ ಫಂಡ್‌ಗಳಲ್ಲಿ ಎಷ್ಟು ಹೂಡಿಕೆ ಮಾಡಬೇಕು ಎಂಬುದನ್ನು ಕಂಡುಕೊಳ್ಳಲು ಕೆಲವು ಲೆಕ್ಕಾಚಾರಗಳಿವೆ. ಅವನ್ನು ಅರಿತು ಮುನ್ನಡೆದರೆ ನಿಮ್ಮ ಹೂಡಿಕೆಯ ಹಾದಿ ಸುಗಮ.

1) ನಿಮ್ಮ ಗುರಿ ತೀರ್ಮಾನಿಸಿ: ಪ್ರತಿ ವ್ಯಕ್ತಿಗೂ ಜೀವನದಲ್ಲಿ ಒಂದಿಷ್ಟು ಗುರಿಗಳಿರುತ್ತವೆ. ಕಾರು ಖರೀದಿ, ಮನೆ ಕಟ್ಟಿಸುವುದು, ಮಕ್ಕಳ ಶಿಕ್ಷಣಕ್ಕಾಗಿ ಹಣ ಹೊಂದಿಸುವುದು, ನಿವೃತ್ತಿ ನಂತರದ ಜೀವನಕ್ಕಾಗಿ ಹೂಡಿಕೆ ಮಾಡುವುದು... ಹೀಗೆ ಹಲವು ಆಸೆಗಳು ಇರುತ್ತವೆ. ಹಣಕಾಸು ನಿರ್ವಹಣೆಯ ಭಾಷೆಯಲ್ಲಿ ಇವನ್ನು ‘ಆರ್ಥಿಕ ಗುರಿ’ಗಳು ಎಂದು ಕರೆಯುತ್ತಾರೆ. ವ್ಯಕ್ತಿ ತನ್ನ ಗುರಿಗಳನ್ನು ಪಟ್ಟಿ ಮಾಡಿದ ನಂತರ, ಯಾವ ಗುರಿಯನ್ನು ತಲುಪಲು ಎಷ್ಟು ಸಮಯವಿದೆ, ಹೂಡಿಕೆಗೆ ಎಷ್ಟು ಮೊತ್ತ ಲಭ್ಯವಿದೆ, ಎಷ್ಟು ವರ್ಷ ಹೂಡಿಕೆ ಮಾಡಬೇಕಾಗುತ್ತದೆ ಎಂಬುದನ್ನು ಅಂದಾಜು ಮಾಡಿಕೊಳ್ಳಬೇಕು.

ಉದಾಹರಣೆಗೆ, ನಿಮಗೆ 10 ವರ್ಷಗಳ ನಂತರ ಮಗಳ ವಿದ್ಯಾಭ್ಯಾಸಕ್ಕಾಗಿ ₹ 30 ಲಕ್ಷ ಬೇಕು ಎಂದಿಟ್ಟುಕೊಳ್ಳಿ. ಆ ₹ 30 ಲಕ್ಷ ಹೊಂದಿಸಲು ಈಗಿನಿಂದ ನೀವು ಎಷ್ಟು ಮೊತ್ತ ಹೂಡಿಕೆ ಮಾಡಬೇಕು ಎಂದು ಲೆಕ್ಕಹಾಕಿ ಅದನ್ನು ಅನುಷ್ಠಾನಕ್ಕೆ ತರಬೇಕು. ಹೂಡಿಕೆ ಗುರಿಗಳನ್ನು ಮೂರು ರೀತಿಯಲ್ಲಿ ವಿಂಗಡಿಸಿಕೊಳ್ಳುವುದು ಉತ್ತಮ. ಅಲ್ಪಾವಧಿ ಅಂದರೆ, ಒಂದು ವರ್ಷದೊಳಗಿನ ಗುರಿ; ಮಧ್ಯಮ ಅವಧಿ ಅಂದರೆ ಸುಮಾರು ಐದು ವರ್ಷಗಳೊಳಗಿನ ಗುರಿ ಮತ್ತು ದೀರ್ಘಾವಧಿ ಅಂದರೆ 10 ವರ್ಷ ಮೇಲ್ಪಟ್ಟು ಸಮಯವಿರುವ ಗುರಿ. ಹೀಗೆ ವಿಂಗಡಣೆ ಮಾಡಿಕೊಳ್ಳುವುದರಿಂದ ಹಣಕಾಸಿನ ಗುರಿ ತಲುಪಲು ಅನುಕೂಲ ಆಗುತ್ತದೆ.

2) ಗುರಿಗಳಲ್ಲಿ ಆದ್ಯತೆ ಇರಲಿ: ನಮಗೆ ಹತ್ತಾರು ಗುರಿಗಳಿದ್ದರೂ ಆ ಎಲ್ಲಾ ಗುರಿಗಳನ್ನು ಈಡೇರಿಸಿಕೊಳ್ಳಲು ಅಗತ್ಯ ಹಣ ಇಲ್ಲದಿರಬಹುದು. ಹಾಗಾಗಿ ಗುರಿಗಳಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕು ಎನ್ನುವುದನ್ನು ಅರಿಯುವುದು ಮುಖ್ಯ. ಉದಾಹರಣೆಗೆ, ಅವಧಿಗೂ ಮುನ್ನ ಗೃಹಸಾಲ ಮರುಪಾವತಿಯೋ, ವಿದೇಶ ಪ್ರವಾಸವೋ ಎನ್ನುವ ಪ್ರಶ್ನೆ ಇದ್ದಾಗ ಗೃಹಸಾಲ ಮರುಪಾವತಿ ಮೊದಲ ಆದ್ಯತೆಯ ಗುರಿಯಾಗಬೇಕು. ಮಕ್ಕಳ ಶಿಕ್ಷಣ, ನಿವೃತ್ತಿ ನಂತರದ ಜೀವನಕ್ಕಾಗಿ ಹೂಡಿಕೆ ಮಾಡುವುದು ನಮ್ಮ ದೀರ್ಘಾವಧಿ ಗುರಿಗಳ ಭಾಗವಾಗಿರುವುದು ಮುಖ್ಯ.

3) ತಿಂಗಳ ಹೂಡಿಕೆ ಲೆಕ್ಕಾಚಾರ: ಒಮ್ಮೆ ಆದ್ಯತೆಯ ಗುರಿಗಳನ್ನು ಪಟ್ಟಿಮಾಡಿದ ಬಳಿಕ ಆ ಗುರಿ ಈಡೇರಿಸಿಕೊಳ್ಳಲು ಪ್ರತಿ ತಿಂಗಳು ಎಷ್ಟು ಹೂಡಿಕೆ ಮಾಡಬೇಕು ಎನ್ನುವ ಅಂದಾಜು ಮಾಡಬೇಕು. ಪ್ರತಿ ಗುರಿ ತಲುಪಲು ಎಷ್ಟು ಹಣ ಅಗತ್ಯವಿದೆ ಎಂದು ಲೆಕ್ಕಾಚಾರ ಮಾಡಿ ಹೂಡಿಕೆ ಶುರು ಮಾಡಬೇಕು. ಪಟ್ಟಿಯಲ್ಲಿರುವಂತೆ, ಉದಾಹರಣೆಗೆ ನಿಮ್ಮ ಮಾಸಿಕ ವೇತನ ₹ 60 ಸಾವಿರ ಎಂದು ಭಾವಿಸೋಣ. ನಿಮಗೆ ಮೂರು ಆದ್ಯತೆಯ ಗುರಿಗಳಿದ್ದು, ನಾಲ್ಕು ವರ್ಷಗಳ ನಂತರ ಕಾರು ಖರೀದಿಸಬೇಕು, 15 ವರ್ಷಗಳ ನಂತರ ಮಗಳ ಶಿಕ್ಷಣಕ್ಕೆ ಹಣ ಬೇಕು, 30 ವರ್ಷಗಳ ನಂತರ ನಿವೃತ್ತಿಗಾಗಿ ಹಣ ಬೇಕು ಎಂದು ಭಾವಿಸೋಣ. ಮಗಳ ಶಿಕ್ಷಣ ಮತ್ತು ನಿವೃತ್ತಿಗಾಗಿ ಹೂಡಿಕೆ ಮಾಡಲು ಸಾಕಷ್ಟು ಸಮಯ ಇರುವುದರಿಂದ ಶೇ 12ರಷ್ಟು ವಾರ್ಷಿಕ ಸರಾಸರಿ ಲಾಭಾಂಶ ಸಿಗಬಹುದು ಎಂಬ ಅಂದಾಜಿನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಪರಿಗಣಿಸಬಹುದು. ಕಾರು ಖರೀದಿಗೆ ಕಡಿಮೆ ಸಮಯ ಇರುವುದರಿಂದ ಶೇ 9ರಷ್ಟು ವಾರ್ಷಿಕ ಸರಾಸರಿ ಲಾಭಾಂಶ ಲಭಿಸಬಹುದು ಎಂಬ ಲೆಕ್ಕಾಚಾರದಲ್ಲಿ ಹೈಬ್ರೀಡ್ ಫಂಡ್ ಪರಿಗಣಿಸುವುದು ಒಳಿತು.

ಅದರಂತೆ ಕಾರು ಖರೀದಿಗಾಗಿ ₹ 8,500, ಮಗಳ ಉನ್ನತ ಶಿಕ್ಷಣಕ್ಕಾಗಿ ₹ 5,000 ಮತ್ತು ನಿವೃತ್ತಿ ನಂತರದ ಜೀವನಕ್ಕಾಗಿ ₹ 8,500 ಅಂದರೆ ಮಾಸಿಕ ಒಟ್ಟು ₹ 22 ಸಾವಿರವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು. ಇನ್ನುಳಿದ ₹ 38 ಸಾವಿರದಲ್ಲಿ ತಿಂಗಳ ಖರ್ಚು-ವೆಚ್ಚ ನಿಭಾಯಿಸಿಕೊಳ್ಳಬೇಕು.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಹೊಸ ದಾಖಲೆ ಬರೆದ ಸೂಚ್ಯಂಕಗಳು



ಷೇರುಪೇಟೆಯಲ್ಲಿ ಗೂಳಿ ಓಟ ಜೋರಾಗಿದೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಹೊಸ ದಾಖಲೆ ಬರೆದಿವೆ. ಸೆಪ್ಟೆಂಬರ್ 3ಕ್ಕೆ ಕೊನೆಗೊಂಡ ವಾರದಲ್ಲಿ 58,129 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ಶೇಕಡ 3.57ರಷ್ಟು ಏರಿಕೆಯಾಗಿದ್ದರೆ, 17,323 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3.70ರಷ್ಟು ಜಿಗಿದಿದೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 4.8ರಷ್ಟು ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.9ರಷ್ಟು ಹೆಚ್ಚಳವಾಗಿವೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 10ರಷ್ಟು ಜಿಗಿದಿದೆ. ತೈಲ-ಅನಿಲ ಸೂಚ್ಯಂಕ ಮತ್ತು ಮೂಲಸೌಕರ್ಯ ಸೂಚ್ಯಂಕ ಶೇ 5ರಷ್ಟು ಹೆಚ್ಚಳ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,867.73 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,421.12 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ನಿಫ್ಟಿಯಲ್ಲಿ ಶ್ರೀ ಸಿಮೆಂಟ್ ಶೇ 13.29ರಷ್ಟು, ಏರ್‌ಟೆಲ್ ಶೇ 1.21ರಷ್ಟು, ಟೈಟನ್ ಶೇ 2.65ರಷ್ಟು, ಏಷ್ಯನ್ ಪೇಂಟ್ಸ್ ಶೇ 9.87ರಷ್ಟು ಮತ್ತು ಐಷರ್ ಮೋಟರ್ಸ್ ಶೇ 8.79ರಷ್ಟು ಜಿಗಿತ ಕಂಡಿವೆ.

ಮುನ್ನೋಟ: ಕಳೆದ ವಾರ ಷೇರುಪೇಟೆ ಸೂಚ್ಯಂಕಗಳು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದು ನಿಫ್ಟಿಯಲ್ಲಿರುವ 50 ಕಂಪನಿಗಳ ಪೈಕಿ 47 ಕಂಪನಿಗಳು ಜಿಗಿತ ಕಂಡಿವೆ. ನಿಫ್ಟಿ ಬ್ಯಾಂಕ್ ಸೂಚ್ಯಂಕ ಸತತ ಎರಡನೆಯ ವಾರ ಸಕಾರಾತ್ಮಕ ಫಲಿತಾಂಶ ಕೊಟ್ಟಿದೆ. ಜಾಗತಿಕ ವಿದ್ಯಮಾನಗಳು ಪೂರಕವಾಗಿರುವುದು, ಅರ್ಥ ವ್ಯವಸ್ಥೆಯಲ್ಲಿ ನಗದು ಹರಿವು ಉತ್ತಮವಾಗಿರುವುದು, ದೇಶದ ಜಿಡಿಪಿ ಬೆಳವಣಿಗೆ ದರ ಸುಧಾರಿಸಿರುವುದು, ಜಿಎಸ್‌ಟಿ ಸಂಗ್ರಹ ಆಗಸ್ಟ್ ತಿಂಗಳಲ್ಲಿ ₹ 1 ಲಕ್ಷ ಕೋಟಿ ದಾಟಿರುವುದು, ಲಸಿಕೆ ನೀಡುವ ಕೆಲಸಕ್ಕೆ ವೇಗ ಸಿಕ್ಕಿರುವುದು, ಕೋವಿಡ್ ಕಾರಣಕ್ಕಾಗಿ ಹೇರಿದ್ದ ಮಿತಿಗಳನ್ನು ಸಡಿಲಿಸಿರುವುದು ಸೇರಿದಂತೆ ಹಲವು ಬೆಳವಣಿಗೆಗಳು ಷೇರುಪೇಟೆ ಏರಿಕೆಗೆ ಕಾರಣವಾಗಿವೆ. ಸೂಚ್ಯಂಕಗಳು ನಿರೀಕ್ಷೆಗೂ ಮೀರಿ ಏರಿಕೆ ಕಾಣುತ್ತಿರುವಾಗ ಹೂಡಿಕೆಯಲ್ಲಿ ಅತಿ ಹೆಚ್ಚು ಎಚ್ಚರಿಕೆ ವಹಿಸಬೇಕು. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಒಳ್ಳೆಯ ಭವಿಷ್ಯವಿರುವ ಕಂಪನಿಗಳನ್ನು ಮಾತ್ರ ಹೂಡಿಕೆಗೆ ಪರಿಗಣಿಸಬೇಕು. ಐಪಿಒಗಳಲ್ಲಿ ಹೂಡಿಕೆ ಮಾಡುವಾಗ ಒಳ್ಳೆಯ ಕಂಪನಿಗಳಿಗೆ ಮಾತ್ರ ಬಿಡ್ ಸಲ್ಲಿಸಬೇಕು.

ಗುರಿಗಳು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆ ಮೊತ್ತ

ಗುರಿಗಳು	ಕಾರು	ಮಗಳ ಉನ್ನತ ಶಿಕ್ಷಣ	ನಿವೃತ್ತ ಜೀವನಕ್ಕೆ
ಬೇಕಿರುವ ಮೊತ್ತ	₹ 5 ಲಕ್ಷ	₹ 25 ಲಕ್ಷ	₹ 3 ಕೋಟಿ
ಬಾಕಿ ಇರುವ ಸಮಯ	4 ವರ್ಷ	15 ವರ್ಷ	30 ವರ್ಷ
ಸರಾಸರಿ ವಾರ್ಷಿಕ ಲಾಭಾಂಶ	ಶೇ 9	ಶೇ 12	ಶೇ 12
ಮಾಸಿಕ ಹೂಡಿಕೆ (ಎಸ್‌ಐಪಿ)	₹ 8,500	₹ 5000	₹ 8,500
ತಿಂಗಳಿಗೆ ಒಟ್ಟು ಮ್ಯೂಚುವಲ್ ಫಂಡ್ ಹೂಡಿಕೆ ₹ 22,000			


ಕಲಾವಿದರ ನೃತ್ಯ –ರಾಯಿಟರ್ಸ್ ಚಿತ್ರ




ಕಾರ್ಯಕ್ರಮದಲ್ಲಿ ಬೆಳಕಿನ ಚಿತ್ತಾರ –ಎಎಫ್‌ಪಿ ಚಿತ್ರ

ಸಮಾರೋಪ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ –ರಾಯಿಟರ್ಸ್ ಚಿತ್ರ

ಟೋಕಿಯೊ ಪ್ಯಾರಾಲಿಂಪಿಕ್ಸ್: ಪುರುಷರ ಬ್ಯಾಡ್ಮಿಂಟನ್ ಫೈನಲ್ ಪಂದ್ಯದಲ್ಲಿ ಛಲದಿಂದ ಕಾದಾಡಿದ ನಗಾರ್

ಚಿನ್ನ ಗೆದ್ದ ಕೃಷ್ಣ; ಕನ್ನಡಿಗನ ಮಂದಹಾಸ

ಬೆಂಗಳೂರು: ಟೋಕಿಯೊದಲ್ಲಿ ಸುಹಾಸ್ ಯತಿರಾಜ್ ಬೆಳ್ಳಿ ಪದಕ ಜಯಿಸಿದ ನಂತರ ಅವರು ಬೆಳೆದ ಊರು ಶಿವಮೊಗ್ಗದಲ್ಲೂ ಸೇವೆ ಸಲ್ಲಿಸುತ್ತಿರುವ ಉತ್ತರಪ್ರದೇಶದ ನೋಯ್ಡಾದಲ್ಲೂ ಬೆಂಗಳೂರಿನಲ್ಲಿರುವ ಸಹೋದರನ ಮನೆಯಲ್ಲೂ ಭಾನುವಾರ ಸಂಭ್ರಮವೋ ಸಂಭ್ರಮ.

ಪ್ಯಾರಾಲಿಂಪಿಕ್ಸ್‌ನ ಕೊನೆಯ ದಿನ ಫ್ರಾನ್ಸ್‌ನ ಲೂಕಾಸ್ ಮಜುರ್ ವಿರುದ್ಧ ಸೋತರೂ ಸುಹಾಸ್ ಅವರು ಸೇವೆಯಲ್ಲಿರುವಾಗಲೇ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಮೊದಲ ಭಾರತೀಯ ಅಧಿಕಾರಿ ಎನಿಸಿಕೊಂಡರು.

‘ನಮ್ಮ ತಂದೆ–ತಾಯಿ ಶಿಕ್ಷಣಕ್ಕೂ ಕ್ರೀಡೆಗೆ ಸಮಾನ ಸ್ಥಾನ ಕಲ್ಪಿಸಿದ್ದರು. ಸುಹಾಸ್ ಕಲಿಕೆಯ ಜೊತೆಯಲ್ಲಿ ಎಲ್ಲ ಕ್ರೀಡಾ ಚಟುವಟಿಕೆಯಲ್ಲೂ ಸಕ್ರಿಯರಾಗಿದ್ದರು’ ಎಂದು ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸದಲ್ಲಿರುವ ಸಹೋದರ ಶರತ್ ಹೇಳಿದರು.

ಸುಹಾಸ್ ಅವರ ತಂದೆ ದಿವಂಗತ ಯತಿರಾಜ್ ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದರು. ಅವರಿಗೆ ವರ್ಗಾವಣೆ ಆದಾಗಲೆಲ್ಲ ಸುಹಾಸ್ ಕೂಡ ಬೇರೆ ಬೇರೆ ಕಡೆಗಳಿಗೆ ಹೋಗಬೇಕಾಯಿತು. ಹಾಸನದಲ್ಲಿ ಜನಿಸಿದ ಸುಹಾಸ್ ಅವರು ಮಂಡ್ಯ ಮತ್ತು ಶಿವಮೊಗ್ಗದಲ್ಲಿ ಶಿಕ್ಷಣ ಪೂರೈಸಿದರು. ದಕ್ಷಿಣ ಕನ್ನಡದ ಸುರತ್ಕಲ್‌ನ ಎನ್‌ಐಟಿಯಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಮಾಡಿದರು. ಆಮೇಲೆ ಉತ್ತರ ಪ್ರದೇಶ ಕೇಡರ್‌ನಲ್ಲಿ ಐಎಎಸ್ ಮಾಡಿದರು. ಈಗ ಅಲ್ಲಿ ಜಿಲ್ಲಾಧಿಕಾರಿಯಾಗಿದ್ದಾರೆ.

ಛಲದಿಂದ ಕಾದಾಡಿದ ಕೃಷ್ಣ (ಟೋಕಿಯೊ/ಪಿಟಿಐ): ಕೃಷ್ಣ ನಗಾರ್ ಹಾಂಕಾಂಗ್‌ನ ಚೂ ಮನ್ ಕಾಯ್ ಎದುರು ಜಯ ಗಳಿಸಿ ಬ್ಯಾಡ್ಮಿಂಟನ್‌ನಲ್ಲಿ ದೇಶಕ್ಕೆ ಎರಡನೇ ಚಿನ್ನ ಗಳಿಸಿಕೊಟ್ಟರು. ಎರಡನೇ ಗೇಮ್‌ನಲ್ಲಿ ಹಿನ್ನಡೆ ಕಂಡ ಕೃಷ್ಣ ನಂತರ ಛಲದಿಂದ ಕಾದಾಡಿ ಗೆದ್ದರು.

ಭಾರತ: ಯಾವ ಕ್ರೀಡೆಯಲ್ಲಿ ಎಷ್ಟು ಪದಕ?

ಕ್ರೀಡೆ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಥ್ಲೆಟಿಕ್ಸ್	1	5	2	8
ಶೂಟಿಂಗ್	2	1	2	5
ಬ್ಯಾಡ್ಮಿಂಟನ್	2	1	1	4
ಟೇಬಲ್ ಟೆನಿಸ್	-	1	-	1
ಆರ್ಚರಿ	-	-	1	1

ಪದಕ ಪಟ್ಟಿಯಲ್ಲಿ ಅಗ್ರ 5 ಸ್ಥಾನಗಳು

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	96	60	51	207
ಬ್ರಿಟನ್	41	38	45	124
ಅಮೆರಿಕ	37	36	31	104
ರಷ್ಯಾ	36	33	49	118
ನೆದರ್ಲೆಂಡ್ಸ್	25	17	17	59


ಸುಹಾಸ್ ಯತಿರಾಜ್ –ಎಪಿ ಚಿತ್ರ

ಛಲಗಾರನಿಗೆ ಒಲಿದ ಫಲ: ಜಯಶ್ರೀ

ಐಎಎಸ್‌ನಷ್ಟೇ ಕ್ರೀಡೆಯಲ್ಲೂ ಆಸಕ್ತಿ ಇತ್ತು. ಅದಕ್ಕೆ ತಕ್ಕ ಛಲವೂ ಇತ್ತು. ಪರಿಶ್ರಮಪಟ್ಟು ತಮ್ಮ ಕನಸು ನನಸು ಮಾಡಿದ್ದಾರೆ ಎಂದು ಸುಹಾಸ್ ಅವರ ತಾಯಿ ಜಯಶ್ರೀ ‘ಪ್ರಜಾವಾಣಿ’ಗೆ ತಿಳಿಸಿದರು. ’ದೇಶಕ್ಕಾಗಿ ಪದಕ ಗೆದ್ದುಕೊಟ್ಟಿದ್ದಕ್ಕೆ ತುಂಬ ಖುಷಿ ಇದೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಅಧಿಕಾರಿ ಎಂಬ ದಾಖಲೆ ಮಾಡಿದ್ದರಿಂದ ಖುಷಿ ಇನ್ನಷ್ಟು ಹೆಚ್ಚಿದೆ’ ಎಂದು ಅವರು ನುಡಿದರು.


ಕೃಷ್ಣ ನಗಾರ್ –ಪಿಟಿಐ ಚಿತ್ರ


ದೇಶದ ಶ್ರೇಷ್ಠ ಸಾಧನೆ; ಮುರಿದು ಬಿದ್ದ ದಾಖಲೆ

ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಈ ಬಾರಿ ಶ್ರೇಷ್ಠ ಸಾಧನೆ ಮಾಡಿತು. ಐದು ಚಿನ್ನ ಸೇರಿದಂತೆ 19 ಪದಕಗಳನ್ನು ಗಳಿಸಿದ ದೇಶದ ಪ್ಯಾರಾ ಅಥ್ಲೀಟ್‌ಗಳು ಅನೇಕ ವಿಭಾಗಗಳಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದು ದಾಖಲೆಗಳನ್ನೂ ಮುರಿದಿದ್ದಾರೆ.

‘ಚಲನೆಯಲ್ಲಿ ರಣೋತ್ಸಾಹ’ ಎಂಬ ಘೋಷಣೆಯೊಂದಿಗೆ ಭಾರತದ ಕ್ರೀಡಾಪಟುಗಳು ಕಣಕ್ಕೆ ಇಳಿದಿದ್ದರು. 54 ಮಂದಿಯ ಪೈಕಿ 17 ಮಂದಿಯ ಕೊರಳಿನಲ್ಲಿ ಪದಕಗಳ ಹೊಳಪು ಇತ್ತು. ಶೂಟರ್‌ಗಳಾದ ಅವನಿ ಲೇಖರಾ ಮತ್ತು ಸಿಂಘರಾಜ್ ಅಡಾನ ತಲಾ ಎರಡು ಪದಕಗಳನ್ನು ಗೆದ್ದುಕೊಂಡರು. ಒಂದೇ ಕೂಟದಲ್ಲಿ ನಾಲ್ಕು ಪದಕ ಗಳಿಸಿದ್ದು ಭಾರತದ ಈ ವರೆಗಿನ ಗರಿಷ್ಠ ಸಾಧನೆಯಾಗಿತ್ತು.

ಅವನಿ, ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಮಹಿಳೆಯಾಗಿದ್ದಾರೆ. ಹರ್ವಿಂದರ್ ಸಿಂಗ್ ಆರ್ಚರಿಯಲ್ಲಿ ದೇಶಕ್ಕೆ ಮೊದಲ ಪದಕ (ಕಂಚು) ತಂದುಕೊಟ್ಟರು. ಭಾವಿನಾ ಬೆನ್ ಪಟೇಲ್ ಟೇಬಲ್ ಟೆನಿಸ್‌ನಲ್ಲಿ ಚೊಚ್ಚಲ ಪದಕ ಗಳಿಸಿಕೊಟ್ಟರು. ಇದೇ ಮೊದಲ ಬಾರಿ ಸೇರ್ಪಡೆಗೊಂಡಿರುವ ಬ್ಯಾಡ್ಮಿಂಟನ್‌ನಲ್ಲಿ ಎರಡು ಚಿನ್ನದ ಪದಕಗಳು ಬಂದವು. ಹೈಜಂಪ್‌ನಲ್ಲಿ ಬೆಳ್ಳಿ ಗಳಿಸಿದ ಪ್ರವೀಣ್ ಕುಮಾರ್ ಭಾರತದ ಅತಿ ಕಿರಿಯ (18 ವರ್ಷ) ಪದಕ ವಿಜೇತ ಅಥ್ಲೀಟ್ ಎನಿಸಿಕೊಂಡರು.


ಜಪಾನ್ ವಿರುದ್ಧದ ವ್ಹೀಲ್ ಚೇರ್ ಬ್ಯಾಸ್ಕೆಟ್‌ಬಾಲ್ ಫೈನಲ್ ಪಂದ್ಯದಲ್ಲಿ ಅಮೆರಿಕದ ಮ್ಯಟ್ ಸ್ಕಾಟ್ ಚೆಂಡಿನೊಂದಿಗೆ ಮುನ್ನುಗ್ಗಿದರು –ರಾಯಿಟರ್ಸ್ ಚಿತ್ರ


ಸಮಾರೋಪ ಸಮಾರಂಭದ ಸಂದರ್ಭದಲ್ಲಿ ಕ್ರೀಡಾಜ್ಯೋತಿಯ ಕಾಲ್ಡ್ರನ್ ಕಂಡುಬಂದದ್ದು ಹೀಗೆ – ರಾಯಿಟರ್ಸ್ ಚಿತ್ರ

ಟೋಕಿಯೊಗೆ ವಿದಾಯ ಹೇಳಿದ ಅಥ್ಲೀಟ್ಸ್

13 ದಿನಗಳ ಪ್ಯಾರಾಲಿಂಪಿಕ್ ಕೂಟಕ್ಕೆ ವರ್ಣರಂಜಿತ ಸಮಾರಂಭದಲ್ಲಿ ಭಾನುವಾರ ತೆರೆ ಬಿತ್ತು. ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಗವಿಕಲರು ಮತ್ತು ವೈಕಲ್ಯ ಇಲ್ಲದವರು ನೃತ್ಯದ ಮೂಲಕ ರಂಜಿಸಿದರು. ‘ಪ್ಯಾರಾಲಿಂಪಿಕ್ಸ್‌ನಿಂದ ವಿಶ್ವಕ್ಕೆ ಪ್ರೇರಣೆ; ಇಲ್ಲಿ ಭಿನ್ನತೆಯಲ್ಲೂ ಹೊಸಬೆಳಕು’ ಎಂಬ ಘೋಷಣೆಯಡಿ ನಡೆದ ಕಾರ್ಯಕ್ರಮದಲ್ಲಿ ಜಪಾನ್ ರಾಜ ನರುಹಿಟೊ ಮತ್ತು ರಾಜಕುಮಾರ ಅಕಿಶಿನೊ ಪಾಲ್ಗೊಂಡಿದ್ದರು.

‘ಇದು ಚಾರಿತ್ರಿಕ ಮತ್ತು ಅತಿಮನೋಹರ ಕ್ರೀಡಾಕೂಟವಾಗಿತ್ತು’ ಎಂದು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ಸ್ ಸಮಿತಿ ಮುಖ್ಯಸ್ಥ ಆ್ಯಂಡ್ರ್ಯೂ ಪಾರ್ಸನ್ಸ್ ಅಭಿಪ್ರಾಯಪಟ್ಟರು. ‘ದೊಡ್ಡ ಸಮಸ್ಯೆಗಳಿಲ್ಲದೆ ಕ್ರೀಡಾಕೂಟ ಮುಕ್ತಾಯಗೊಂಡಿದೆ’ ಎಂದು ಪ್ಯಾರಾಲಿಂಪಿಕ್ಸ್ ಆಯೋಜನಾ ಸಮಿತಿ ಅಧ್ಯಕ್ಷ ಸೀಕೊ ಹಾಶಿಮೊಟೊ ಹೇಳಿದರು.

ಅವನಿ ಲೇಖರಾ ಅವರು ಭಾರತದ ಧ್ವಜಧಾರಿಯಾದರು.

ಧನಾತ್ಮಕ ಆಟಕ್ಕೆ ಆದ್ಯತೆ ನೀಡಲಾಗಿತ್ತು. ಹೀಗಾಗಿ ಹೆಚ್ಚು ತಪ್ಪುಗಳು ಆಗಲಿಲ್ಲ. ಎರಡನೇ ಗೇಮ್ ಸೋತಾಗ ವಿಚಲಿತನಾಗಿದೆ. ನಂತರ ಸುಧಾರಿಸಿಕೊಂಡೆ.
ಕೃಷ್ಣ ನಗಾರ್ ಚಿನ್ನ ಗೆದ್ದ ಬ್ಯಾಡ್ಮಿಂಟನ್ ಪಟು

ಏಕಕಾಲದಲ್ಲಿ ಇಷ್ಟೊಂದು ಸಂತೋಷ ಮತ್ತು ಬೇಸರ ಈ ಹಿಂದೆ ಎಂದೂ ಅನುಭವಿಸಿಲ್ಲ. ಬೆಳ್ಳಿ ಗೆದ್ದದ್ದಕ್ಕೆ ಖುಷಿಯಾಯ್ತು. ಚಿನ್ನದ ಪದಕ ಕೈಚೆಲ್ಲಿದ್ದಕ್ಕೆ ದುಃಖವಾಗುತ್ತಿದೆ.
ಸುಹಾಸ್ ಬೆಳ್ಳಿ ಗೆದ್ದ ಬ್ಯಾಡ್ಮಿಂಟನ್ ಪಟು



ಪ್ರತಿಭಾವಂತ ಅಥ್ಲೀಟ್‌ಗಳನ್ನು ಗುರುತಿಸುವುದಕ್ಕಾಗಿ ಯುವಜನ ಯೋಜನೆ ಹಾಕಿಕೊಳ್ಳಲಾಗುವುದು. ಸದ್ಯದ ಪ್ರಮುಖ ಕೂಟಗಳಿಗೆ ಅವರನ್ನು ಅಣಿಗೊಳಿಸಲಾಗುವುದು.
ದೀಪಾ ಮಲಿಕ್ ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷೆ

ಅಂಗವಿಕಲರ ಕ್ರೀಡಾಸಂಸ್ಥೆಯಲ್ಲಿ ಸೇರ್ಪಡೆ: ರೈಫಲ್ ಸಂಸ್ಥೆಯಿಂದ ದೂರ

ಪ್ಯಾರಾ ಶೂಟಿಂಗ್ ಸಂಸ್ಥೆ ಅಸ್ತಿತ್ವಕ್ಕೆ

• ಪ್ರಮೋದ

ಹುಬ್ಬಳ್ಳಿ: ಅಂಗವಿಕಲರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ರಾಜ್ಯದಲ್ಲಿ ಕರ್ನಾಟಕ ಶೂಟಿಂಗ್ ಪ್ಯಾರಾ ಸ್ಪೋರ್ಟ್ಸ್ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಇದು ರಾಜ್ಯದ ಶೂಟಿಂಗ್ ಕ್ರೀಡೆಯಲ್ಲಿ ಹೊಸ ಅಲೆ ಎಬ್ಬಿಸುವ ನಿರೀಕ್ಷೆ ಗರಿಗೆದರಿದೆ.

ಮೊದಲು ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ ಅಡಿಯಲ್ಲಿ ಪ್ಯಾರಾ ಶೂಟರ್‌ಗಳು ಟೂರ್ನಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಈಗ ರೈಫಲ್ ಸಂಸ್ಥೆಯಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಸಂಸ್ಥೆ ಆರಂಭಿಸಲಾಗಿದ್ದು, ಕರ್ನಾಟಕ ರಾಜ್ಯ ಅಂಗವಿಲಕರ ಕ್ರೀಡಾ ಸಂಸ್ಥೆ ಅಧೀನದಲ್ಲಿ ಕಾರ್ಯನಿರ್ವಹಿಸಲಿದೆ. ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, ಹುಬ್ಬಳ್ಳಿಯಲ್ಲಿ ಕಚೇರಿಯಿದೆ.

ಹಂತಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ ಸಂಸ್ಥೆಯ ಘಟಕಗಳನ್ನು ಆರಂಭಿಸಿ, ಪದಾಧಿಕಾರಿಗಳನ್ನು ನೇಮಿಸಿ ನಿರಂತರವಾಗಿ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ಗಳನ್ನು ಆಯೋಜಿಸಲು ರಾಜ್ಯ ಸಂಸ್ಥೆ ನಿರ್ಧರಿಸಿದೆ.

ಅಂತರರಾಷ್ಟ್ರೀಯ ಶೂಟರ್ ಹಾಗೂ ಒಲಿಂಪಿಯನ್ ಬೆಂಗಳೂರಿನ ಪಿ.ಎನ್. ಪ್ರಕಾಶ್ ಅವರು ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ (ಎಚ್‌ಎಸ್‌ಸಿಎ) ಮುಖ್ಯಸ್ಥ, ಶೂಟರ್ ರವಿಚಂದ್ರ ಬಾಲೆಹೊಸೂರ ಕಾರ್ಯದರ್ಶಿಯಾಗಿದ್ದಾರೆ. ಹೊಸ ಸಂಸ್ಥೆ ಸೆ.12ರಂದು ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಮೊದಲ ಪ್ಯಾರಾ ಶೂಟಿಂಗ್ ಟೂರ್ನಿ ಆಯೋಜಿಸಿದೆ.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಸ್ವರೂಪ್ ಉನಲಕರ್ ಇಲ್ಲಿನ ಟೂರ್ನಿಯಲ್ಲಿ ಭಾಗಿಯಾಗಲಿದ್ದಾರೆ. 10 ಮೀ. ಏರ್ ರೈಫಲ್, ಪಿಸ್ತೂಲ್, ಪುರುಷರ ಹಾಗೂ ಮಹಿಳೆಯರ 177 ಓಪನ್ ಸೈಟ್ ರೈಫಲ್ ವಿಭಾಗದಲ್ಲಿ ಪ್ರತ್ಯೇಕವಾಗಿ ಸ್ಪರ್ಧೆಗಳು ಜರುಗಲಿವೆ.

‘ಕರ್ನಾಟಕದಲ್ಲಿ ಸಾಕಷ್ಟು ಅಂಗವಿಕಲ ಶೂಟರ್‌ಗಳಿದ್ದರೂ ಅವರಿಗೆ ಸರಿಯಾದ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ಸಿಗುತ್ತಿಲ್ಲ. ನೀವೂ ಸಾಧಿಸಬಲ್ಲಿರಿ ಎನ್ನುವ ಆತ್ಮವಿಶ್ವಾಸವನ್ನು ಅವರಲ್ಲಿ ತುಂಬುವ ಕೆಲಸ ಮಾಡಬೇಕಾಗಿದೆ. ಟೋಕಿಯೊ ಒಲಿಂಪಿಕ್ಸ್ ಹಾಗೂ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳನ್ನು ನೋಡಿ ನಾವೂ ಅವರಂತೆ ಸಾಧನೆ ಮಾಡಬೇಕೆಂದು ಬಹಳಷ್ಟು ಪ್ಯಾರಾ ಶೂಟರ್‌ಗಳು ಹಾತೊರೆಯುತ್ತಿದ್ದಾರೆ. ಅವರಿಗೆ ವೇದಿಕೆ ಒದಗಿಸಲು ಸಂಸ್ಥೆ ಹುಟ್ಟುಹಾಕಿದ್ದೇವೆ. ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತರಿಗೆ ಸ್ಫೂರ್ತಿ ತುಂಬುತ್ತೇವೆ’ ಎಂದು ರವಿಚಂದ್ರ ಬಾಲೆಹೊಸೂರ ಹೇಳಿದರು.

ಮುಖ್ಯಾಂಶಗಳು
- ಸೆ.12ರಂದು ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಟೂರ್ನಿ
- ಪ್ಯಾರಾ ಶೂಟಿಂಗ್ ಸ್ಪರ್ಧೆಗೆ ಸ್ವರೂಪ್ ಉನಲಕರ್
- ಜಿಲ್ಲಾ ಮಟ್ಟದಲ್ಲಿ ಸಂಸ್ಥೆಯ ಘಟಕ ಆರಂಭಕ್ಕೆ ನಿರ್ಧಾರ



ಅಂಗವಿಕಲ ಶೂಟರ್‌ಗಳಲ್ಲಿ ಮನೋಸ್ಥೈರ್ಯ ತುಂಬಿ, ನೀವೂ ಸಾಧಿಸಬಲ್ಲಿರಿ ಎನ್ನುವ ಆತ್ಮವಿಶ್ವಾಸ ಬೆಳೆಸಲು ಸಂಸ್ಥೆ ಹುಟ್ಟುಹಾಕಿದ್ದೇವೆ.
ಪಿ.ಎನ್. ಪ್ರಕಾಶ್ ರಾಜ್ಯ ಶೂಟಿಂಗ್ ಪ್ಯಾರಾ ಸ್ಪೋರ್ಟ್ಸ್ ಸಂಸ್ಥೆ ಅಧ್ಯಕ್ಷ

ಸುಹಾಸ್ ಹುಟ್ಟೂರಲ್ಲಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಹಾಸನ: ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿರುವ ಸುಹಾಸ್ ಯತಿರಾಜ್ ಅವರ ಹುಟ್ಟೂರು ಅರಸೀಕೆರೆ ತಾಲ್ಲೂಕಿನ ಲಾಳನಕೆರೆ ಗ್ರಾಮದಲ್ಲಿ ಭಾನುವಾರ ಸಂಭ್ರಮ ಮನೆ ಮಾಡಿತ್ತು. ಗ್ರಾಮಸ್ಥರು ಸಿಹಿ ಹಂಚಿ, ಕುಣಿದು ಕುಪ್ಪಳಿಸಿದರು.

ಸುಹಾಸ್ ತಮ್ಮ ಸಾಧನೆ ಮೂಲಕ ಹಳ್ಳಿಯನ್ನೂ ಜಗತ್ತಿಗೆ ಪರಿಚಯಿಸಿದ್ದು, ಊರಿನ ಜನರ ಸಂಭ್ರಮವನ್ನು ಇಮ್ಮಡಿಗೊಳಿಸಿದೆ.

‘ನಮ್ ಹುಡುಗ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದು, ಗ್ರಾಮದ ಗೌರವ ಹೆಚ್ಚಿಸಿದ್ದಾನೆ’ ಎಂದು ಗುಣಗಾನ ಮಾಡಿದರು.

‘ದೇಶ ಹಾಗೂ ಜಿಲ್ಲೆಗೆ ಸುಹಾಸ್ ಕೀರ್ತಿ ತಂದಿದ್ದಾರೆ. ಅವರನ್ನು ನಮ್ಮೂರಿಗೆ ಕರೆಸಿ, ಸನ್ಮಾನ ಮಾಡಬೇಕು. ಇದು ನಮ್ಮೂರ ಮಗನಿಗೆ ಕೊಡುವ ಗೌರವವಾಗಬೇಕು’ ಎಂದು ಗ್ರಾಮಸ್ಥ ರಾಜೇಗೌಡ ಹೇಳಿದರು.

ಹಾಸನದಲ್ಲೇ ಪ್ರಾಥಮಿಕ ಶಿಕ್ಷಣ ಆರಂಭಿಸಿದ ಸುಹಾಸ್, ಶಿವಮೊಗ್ಗದ ಡಿವಿಎಸ್ ಶಾಲೆಯಲ್ಲಿ ಪ್ರೌಢಶಿಕ್ಷಣ ಪಡೆದರು. ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿರುವ ಎನ್‌ಐಟಿಯಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ಪೂರೈಸಿದರು.


ಹ್ಯಾಂಡ್‌ಬಾಲ್ ತಂಡ: ಕೆಳಗಿನ ಸಾಲು (ಎಡದಿಂದ): ಮಮ್ತಾಜ್ ಅರ್ಫ, ಡಿ.ಕೆ. ರಂಜಿತಾ, ಸಾನಿಯಾ, ಸಿ.ಜಿ. ದೀಪಾ, ಸುಕನ್ಯಾ (ಮೇಲಿನ ಸಾಲು): ಪಲ್ಲವಿ, ಎಚ್‌.ಆರ್‌. ಸ್ವಾತಿ, ನಿಖಿತಾ, ಸುಶ್ಮಿತಾ, ಹಿಂದುಶ್ರೀ, ಫಿರ್ಝಾ ಕೌಸರ್, ಕೆ.ಎಸ್. ನಂದಿತಾ, ಸಫಿಯಾ, ತನುಜಾ, ಎಸ್. ಮೇಘಾ, ಪೂನಂ.

ಹ್ಯಾಂಡ್‌ಬಾಲ್: ರಾಜ್ಯ ತಂಡಕ್ಕೆ ಪಲ್ಲವಿ ನಾಯಕಿ

ಚಿತ್ರದುರ್ಗ: ಉತ್ತರಪ್ರದೇಶದಲ್ಲಿ ಇದೇ 8ರಿಂದ 12ರವರೆಗೆ ನಡೆಯಲಿರುವ 20 ವರ್ಷದೊಳಗಿನ ಬಾಲಕಿಯರ 44ನೇ ರಾಷ್ಟ್ರೀಯ ಹ್ಯಾಂಡ್‌ಬಾಲ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡವನ್ನು ಭಾನುವಾರ ಆಯ್ಕೆ ಮಾಡಲಾಯಿತು. ಚಿತ್ರದುರ್ಗದ ಕೆ.ಎಸ್. ನಂದಿತಾ, ಸಾನಿಯಾ (ಉಪನಾಯಕಿ), ಫಿರ್ಝಾ ಕೌಸರ್, ಸಫಿಯಾ ಜೋಯಾ ಹುಸೇನ್, ದಾವಣಗೆರೆಯ ಡಿ.ಕೆ. ರಂಜಿತಾ, ಎಚ್.ಆರ್.ಸ್ವಾತಿ, ಪಲ್ಲವಿ ವನ್ನೂರ್ (ನಾಯಕಿ), ಧಾರವಾಡದ ಸುಕನ್ಯಾ ಎಸ್. ಮಡಿವಾಳರ, ಸುಶ್ಮಿತಾ ಎಸ್. ಪಲೋಟೆ, ಬೆಳಗಾವಿಯ ಎಸ್. ಮೇಘಾ, ಹಾವೇರಿಯ ಪೂನಂ ಖೋಡೆ, ಮೈಸೂರಿನ ಹಿಂದುಶ್ರೀ, ಬೆಂಗಳೂರಿನ ಮಮ್ತಾಜ್ ಅರ್ಫ, ರಾಣೆಬೆನ್ನೂರಿನ ಸಿ.ಎಲ್.ತನುಜಾ, ಬಾಗಲಕೋಟೆಯ ನಿಖಿತಾ, ಬೆಳಗಾವಿಯ ಪಲ್ಲವಿ, ಶಿವಮೊಗ್ಗದ ಸಿ.ಜಿ. ದೀಪಾ ಆಯ್ಕೆಯಾಗಿದ್ದಾರೆ.

ಬ್ಯಾಡ್ಮಿಂಟನ್: ಸೈನಾ, ಪ್ರಣೀತ್‌ಗೆ ನಾಯಕತ್ವ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಮತ್ತು ಬಿ. ಸಾಯಿಪ್ರಣೀತ್ ಅವರು ಮುಂದಿನ ತಿಂಗಳು ಡೆನ್ಮಾರ್ಕ್‌ನಲ್ಲಿ ನಡೆಯಲಿರುವ ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್‌ನಲ್ಲಿ ಕ್ರಮವಾಗಿ ಭಾರತದ ಮಹಿಳಾ ಮತ್ತು ಪುರುಷ ತಂಡಗಳನ್ನು ಮುನ್ನಡೆಸಲಿದ್ದಾರೆ.

ಪಿ.ವಿ. ಸಿಂಧು ವಿಶ್ರಾಂತಿಯಲ್ಲಿದ್ದು ಈ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ.

ಅ. 9ರಿಂದ 17ರವರೆಗೆ ಥಾಮಸ್ ಮತ್ತು ಊಬರ್ ಕಪ್ ಟೂರ್ನಿ ನಡೆಯುವುದು. ಮಹಿಳೆಯರ ತಂಡದಲ್ಲಿ ಹತ್ತು ಆಟಗಾರ್ತಿಯರು ಇದ್ದಾರೆ. ಸೈನಾ ನೆಹ್ವಾಲ್, ಮಾಳವಿಕಾ ಬನ್ಸೋದ್, ಅದಿತಿ ಭಟ್ ಮತ್ತು ತಸ್ನೀಮ್ ಮೀರ್ ಸಿಂಗಲ್ಸ್‌ನಲ್ಲಿದ್ದಾರೆ. ಡಬಲ್ಸ್‌ನಲ್ಲಿ ತನಿಶಾ ಕ್ರಸ್ಟೊ ಮತ್ತು ಋತುಪರ್ಣಾ ಇದ್ದಾರೆ.

ಹೈದರಾಬಾದ್ ರೇಸ್

ಅಶ್ವ ರಾಡೀ ಗೆಲ್ಲುವ ನಿರೀಕ್ಷೆ

ಹೆಲೆನ್ ಆಫ್ ಟ್ರಾಯ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ರಾಡೀ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ರಿಂದ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗಾಲ್ವಾನ್ 7, ಜೀನ್ ಲೆಫೆಟ್ಟೆ 2, ಬ್ಯುರಾನೊ 6
2ನೇ ರೇಸ್: ಅಶ್ವ ರಾಡೀ 1, ಹಾರ್ಡ್ ಟು ಟಾಸ್ 3, ವಾಚ್ ಮೈ ಸ್ಟ್ರೈಡ್ 6
3ನೇ ರೇಸ್: ಜೀಯಸ್ 6, ಬೋಲ್ಡ್ ಬಿಡ್ಡಿಂಗ್ 9, ಏಬಲ್ ಲವ್ 7
4ನೇ ರೇಸ್: ಎನ್.ಆರ್.ಐ ಗಿಫ್ಟ್ 7, ಶೆಲ್ಡಾನ್ 9, ಸ್ಟಾರ್ ಬೇಬ್ 5
5ನೇ ರೇಸ್: ಮೊರಿಂಗ 5, ಎನ್.ಆರ್.ಐ ಟಚ್ 7, ಫ್ಯಾಷನ್ ಯೂನಿವರ್ಸ್ 4
6ನೇ ರೇಸ್: ಟಾಪ್ ಇನ್ ಕ್ಲಾಸ್ 4, ಫ್ಲೆಮಿಂಗೊ ಫ್ಲೇಮ್ 2, ಕ್ಯಾಲಿಫೋರ್ನಿಯಾ ಬ್ಯೂಟಿ 1

ಉತ್ತಮ ಬೆಟ್: ಗಾಲ್ವಾನ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಕ್ರಿಕೆಟ್: ನ್ಯೂಜಿಲೆಂಡ್ ತಂಡಕ್ಕೆ ಗೆಲುವು

ಢಾಕಾ (ಪಿಟಿಐ): ಏಜಾಜ್ ಪಟೇಲ್ (16ಕ್ಕೆ4) ಮತ್ತು ಕೋಲ್ ಮೆಕೆಂಚಿ (15ಕ್ಕೆ3) ಅವರ ಅಮೋಘ ಬೌಲಿಂಗ್ ಬಲದಿಂದ ನ್ಯೂಜಿಲೆಂಡ್ ತಂಡ ಮೂರನೇ ಟಿ20 ಪಂದ್ಯದಲ್ಲಿ 52 ರನ್‌ಗಳಿಂದ ಬಾಂಗ್ಲಾ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 5ಕ್ಕೆ128 (ಹೆನ್ರಿ ನಿಕೊಲ್ಸ್ ಔಟಾಗದೆ 36, ಟಾಮ್ ಬ್ಲಂಡೆಲ್ ಔಟಾಗದೆ 30, ಸೈಫುದ್ದೀನ್ 28ಕ್ಕೆ2), **ಬಾಂಗ್ಲಾದೇಶ:** 19.4 ಓವರ್‌ಗಳಲ್ಲಿ 76 (ಮುಷ್ಫೀಕುರ್ ರಹೀಮ್ ಔಟಾಗದೆ 20, ಏಜಾಜ್ ಪಟೇಲ್ 16ಕ್ಕೆ4, ಕೋಲ್ ಮೆಕೆಂಚಿ 15ಕ್ಕೆ3) **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 52 ರನ್‌ಗಳ ಜಯ.

ಪಾಕಿಸ್ತಾನ: ಆತ್ಮಾಹುತಿ ಬಾಂಬ್ ದಾಳಿ: ಮೂವರ ಸಾವು

ಕ್ವೆಟ್ಟಾ (ಪಾಕಿಸ್ತಾನ): ‘ನೈರುತ್ಯ ಪಾಕಿಸ್ತಾನದ ಕ್ವೆಟ್ಟಾದಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಅರೆಸೇನಾಪಡೆಯ ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಫ್ರಾಂಟಿಯರ್ ಕಾನ್‌ಸ್ಟಾಬ್ಯುಲರಿ ಗಾರ್ಡ್ಸ್ ಅನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಅಫ್ಗಾನಿಸ್ತಾನ ಗಡಿಯ ಬಳಿಯಿರುವ ನಗರದ ಮಿಯಾನ್ ಗುಂಡಿಯಲ್ಲಿ ಮೋಟರ್ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದಾನೆ. ಇದರಲ್ಲಿ ಮೂವರು ಮೃತಪಟ್ಟಿದ್ದು, ನಾಗರಿಕರು ಸೇರಿದಂತೆ 20 ಮಂದಿಗೆ ಗಾಯಗಳಾಗಿವೆ’ ಎಂದು ಹಿರಿಯ ಪೊಲೀಸ್ ಅಧಿಕಾರಿ ಅಜರ್ ಅಕ್ರಮ್ ಮಾಹಿತಿ ನೀಡಿದರು.

ಇರಾಕ್‌ನಲ್ಲಿ ಐಎಸ್ ದಾಳಿ: 13 ಪೊಲೀಸ್ ಅಧಿಕಾರಿಗಳ ಸಾವು

ಕಿರ್‌ಕುಕ್ (ಇರಾಕ್): ‘ಇರಾಕ್‌ನ ಕಿರ್‌ಕುಕ್‌ನ ಬಳಿಯಿರುವ ಚೆಕ್‌ಪಾಯಿಂಟ್‌ನಲ್ಲಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಘಟನೆ ಭಾನುವಾರ ಮುಂಜಾನೆ ದಾಳಿ ನಡೆಸಿದ್ದು, ಇದರಲ್ಲಿ 13 ಮಂದಿ ಪೊಲೀಸ್ ಅಧಿಕಾರಿಗಳು ಮೃತಪಟ್ಟಿದ್ದಾರೆ’ ಎಂದು ವೈದ್ಯಕೀಯ ಮತ್ತು ಭದ್ರತಾ ಮೂಲಗಳು ತಿಳಿಸಿವೆ.

‘ಫೆಡರಲ್ ಪೊಲೀಸ್ ಚೆಕ್ ಪಾಯಿಂಟ್ ಅನ್ನು ಗುರಿಯಾಗಿಸಿಕೊಂಡು ಇಸ್ಲಾಮಿಕ್ ಸ್ಟೇಟ್‌ನ ಉಗ್ರರು ದಾಳಿ ನಡೆಸಿದ್ದಾರೆ. ಆದರೆ, ಈ ದಾಳಿಯ ಹೊಣೆಯನ್ನು ಯಾವ ಸಂಘಟನೆಯೂ ಹೊತ್ತಿಲ್ಲ’ ಎಂದು ಅವರು ತಿಳಿಸಿದರು.

‘ಈ ಪ್ರದೇಶದಲ್ಲಿ ಇರಾಕ್ ಸೇನೆ ಮತ್ತು ಪೊಲೀಸರನ್ನು ಗುರಿಯಾಗಿಸಿಕೊಂಡು ಹಲವು ಬಾರಿ ಇಸ್ಲಾಮಿಕ್ ಸ್ಟೇಟ್‌ನ ಉಗ್ರರು ದಾಳಿ ನಡೆಸಿದ್ದಾರೆ. ಇದು ಈ ವರ್ಷದ ಅತ್ಯಂತ ಮಾರಣಾಂತಿಕ ದಾಳಿಯಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಎಎಫ್‌ಪಿಗೆ ಮಾಹಿತಿ ನೀಡಿದರು.

ಅಮೆರಿಕ ಓಪನ್: 4ನೇ ಸುತ್ತಿಗೆ ಜ್ವೆರೆವ್

ನ್ಯೂಯಾರ್ಕ್ (ರಾಯಿಟರ್ಸ್/ಪಿಟಿಐ): ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೆವ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ನಾಲ್ಕನೇ ಸುತ್ತಿಗೆ ಕಾಲಿಟ್ಟಿದ್ದಾರೆ.

ಇಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಜರ್ಮನಿಯ ಆಟಗಾರ, ಅಮೆರಿಕದ ಜಾಕ್ ಸ್ಯಾಕ್ ಎದುರು ಕಣಕ್ಕಿಳಿದಿದ್ದರು. ಅದರೆ ಜ್ವೆರೆವ್ 3-6 6-2 6-3 2-1ರಿಂದ ಗಾಯದ ಕಾರಣ ಹಿಂದೆ ಸರಿದರು.

ಬಿಯಾಂಕಾಗೆ ಜಯ: ಕೆನಡಾದ ಬಿಯಾಂಕಾ ಆ್ಯಂಡ್ರಿಸ್ಕ್ಯೂ ಅವರು ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ನಾಲ್ಕನೇ ಸುತ್ತು ತಲುಪಿದರು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರು 6-1, 6-2ರಿಂದ ಗ್ರೇಟ್ ಬ್ರಿಟನ್‌ನ ಗ್ರೀಟ್ ಮಿನ್ನೆನ್ ಅವರನ್ನು ಮಣಿಸಿದರು.

ಪ್ರೀಕ್ವಾರ್ಟರ್‌ಫೈನಲ್‌ಗೆ ಬೋಪಣ್ಣ–ದೊಡಿಗ್: ಭಾರತದ ರೋಹನ್ ಬೋಪಣ್ಣ ಹಾಗೂ ಕ್ರೊವೇಷ್ಯಾದ ಇವಾನ್ ದೊಡಿಗ್ ಅವರು ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ 16ರ ಘಟ್ಟ ತಲುಪಿದ್ದಾರೆ. ಶನಿವಾರ ಅವರು 6-3 4-6 6-4ರಿಂದ ಮೊನಾಕೊದ ಹ್ಯೂಗೊ ನಿಸ್ ಮತ್ತು ಫ್ರಾನ್ಸ್‌ನ ಅರ್ಥರ್ ರಿಂಡರ್‌ಕ್ನೆಚ್ ಎದುರು ಜಯಿಸಿದರು. ಮುಂದಿನ ಪಂದ್ಯದಲ್ಲಿ ಅವರು ಅಮೆರಿಕದ ರಾಜೀವ್ ರಾಮ್ ಮತ್ತು ಗ್ರೇಟ್ ಬ್ರಿಟನ್‌ನ ಜೊ ಸ್ಯಾಲಿಸ್ಬರಿ ಎದುರು ಆಡಲಿದ್ದಾರೆ.


ಅಲೆಕ್ಸಾಂಡರ್ ಜ್ವೆರೆವ್ ಆಟದ ವೈಖರಿ– ಎಎಫ್‌ಪಿ ಚಿತ್ರ


ರಿಷಭ್ ಪಂತ್ –ಎಎಫ್‌ಪಿ ಚಿತ್ರ


ಶಾರ್ದೂಲ್ ಠಾಕೂರ್ –ಎಪಿ/ಪಿಟಿಐ ಚಿತ್ರ

ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್ ಪಂದ್ಯ: ಕಠಿಣ ಸವಾಲೊಡ್ಡಿದ ಭಾರತ ತಂಡ

ಪಂತ್–ಶಾರ್ದೂಲ್ ಜೊತೆಯಾಟ

ಲಂಡನ್ (ಪಿಟಿಐ): ಕೆನಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಈಗ ಕುತೂಹಲ ಗರಿಗೆದರಿದೆ.

ಇಲ್ಲಿ ನಡೆಯುತ್ತಿರುವ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾನುವಾರ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ (60; 72ಎಸೆತ) ಮತ್ತು ರಿಷಭ್ ಪಂತ್ (50; 106ಎ) ಶತಕದ ಜೊತೆಯಾಟದಿಂದಾಗಿ ಭಾರತ ತಂಡಕ್ಕೆ ಗೆಲುವಿನ ಅವಕಾಶದ ಬಾಗಿಲು ತೆಗೆದಿದೆ. ಮೊದಲ ಇನಿಂಗ್ಸ್ ಮುನ್ನಡೆ ಪಡೆದಿದ್ದ ಆತಿಥೇಯ ತಂಡಕ್ಕೆ ಭಾರತವು 369 ರನ್‌ಗಳ ಸವಾಲಿನ ಗುರಿ ಒಡ್ಡಿದೆ.

ಇಂಗ್ಲೆಂಡ್ ತಂಡವು ಈ ಗುರಿಯನ್ನು ಮೀರಿ ಜಯಿಸಬೇಕಿದೆ ಅಥವಾ ಪಂದ್ಯ ಡ್ರಾ ಮಾಡಿಕೊಂಡು ಸೋಲು ತಪ್ಪಿಸಿಕೊಳ್ಳಬೇಕಿದೆ.

ಗುರಿ ಬೆನ್ನತ್ತಿರುವ ಇಂಗ್ಲೆಂಡ್ ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೆ 77 ರನ್ ಗಳಿಸಿತ್ತು. ಹಸೀಬ್ ಹಮೀದ್ (ಬ್ಯಾಟಿಂಗ್ 43) ಮತ್ತು ರೋರಿ ಬರ್ನ್ಸ್ (ಬ್ಯಾಟಿಂಗ್ 31) ಕ್ರೀಸ್‌ನಲ್ಲಿದ್ದರು.

ಪಂದ್ಯದ ಕೊನೆಯ ಹಾಗೂ ಐದನೇ ದಿನವಾದ ಸೋಮವಾರದ ಆಟ ಕುತೂಹಲ ಕೆರಳಿಸಿದೆ. ಐದು ಪಂದ್ಯಗಳ ಸರಣಿಯಲ್ಲಿ ಎರಡೂ ತಂಡಗಳು 1–1ರ ಸಮಬಲ ಸಾಧಿಸಿವೆ. ಸರಣಿ ಜಯದ ಅವಕಾಶವನ್ನು ಜೀವಂತವಾಗಿಟ್ಟುಕೊಳ್ಳಲು ಉಭಯ ತಂಡಗಳಿಗೂ ಈ ಪಂದ್ಯದ ಜಯ ಮುಖ್ಯವಾಗಿದೆ.

ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿಯೂ ಅರ್ಧಶತಕ ಗಳಿಸಿದ ಶ್ರೇಯಕ್ಕೆ ಪಾತ್ರರಾದ ಶಾರ್ದೂಲ್ ಮತ್ತು ಪಂತ್ ಏಳನೇ ವಿಕೆಟ್ ಜೊತೆಯಾಟದಲ್ಲಿ 100 ರನ್ ಸೇರಿಸಿದರು. ಇದರಿಂದಾಗಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಭಾರತ 148.2 ಓವರ್‌ಗಳಲ್ಲಿ 466 ರನ್ ಗಳಿಸಿತು.


ಕ್ರಿಸ್ ವೋಕ್ಸ್– ರಾಯಿಟರ್ಸ್ ಚಿತ್ರ

ಇನಿಂಗ್ಸ್‌ನ ಕೊನೆಯಲ್ಲಿ ಉಮೇಶ್ ಯಾದವ್ (25) ಮತ್ತು ಜಸ್‌ಪ್ರೀತ್ ಬೂಮ್ರಾ (24ರನ್) 9ನೇ ವಿಕೆಟ್‌ಗೆ 36 ರನ್ ಸೇರಿಸಿ, ತಂಡದ ಮೊತ್ತ ಹಿಗ್ಗಿಸಲು ಕಾಣಿಕೆ ನೀಡಿದರು.

ಜೋ ರೂಟ್ ಬಳಗವು ಶನಿವಾರ ಮೊದಲ ಇನಿಂಗ್ಸ್‌ನಲ್ಲಿ 99 ರನ್‌ಗಳ ಮುನ್ನಡೆ ಸಾಧಿಸಿತ್ತು. ಆದರೆ ರೋಹಿತ್ ಶರ್ಮಾ ಅಮೋಘ ಶತಕ ಮತ್ತು ಚೇತೇಶ್ವರ್ ಪೂಜಾರ ಅವರ ಅರ್ಧಶತಕದ ಬಲದಿಂದ ದಿನದಾಟದ ಕೊನೆಯಲ್ಲಿ ಭಾರತವು 138 ರನ್‌ಗಳ ಮುನ್ನಡೆ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ನಾಯಕ ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜ 4ನೇ ದಿನದಾಟದ ಆರಂಭದಲ್ಲಿ ಬೌಲರ್‌ಗಳ ಸವಾಲಿಗೆ ತಾಳ್ಮೆಯಿಂದ ಉತ್ತರಿಸಿದರು. ಈ ಜೋಡಿಯು ನಾಲ್ಕನೇ ವಿಕೆಟ್‌ಗೆ 59 ರನ್ ಸೇರಿಸಿತು. ವೇಗಿ ಕ್ರಿಸ್ ವೋಕ್ಸ್ ಎಸೆತದಲ್ಲಿ ರವೀಂದ್ರ ಜಡೇಜ ಔಟಾಗುವುದರೊಂದಿಗೆ ಜೊತೆಯಾಟ ಮುರಿದುಬಿತ್ತು. ತಮ್ಮ ಇನ್ನೊಂದು ಓವರ್‌ನಲ್ಲಿ ವೋಕ್ಸ್ ಬೀಸಿದ ಎಲ್‌ಬಿ ಬಲೆಗೆ ಅಜಿಂಕ್ಯ ರಹಾನೆ ಬಿದ್ದರು. ಖಾತೆ ತೆರೆಯದೇ ಮರಳಿದರು.

ಸ್ವಲ್ಪ ಹೊತ್ತಿನ ನಂತರ ವಿರಾಟ್ (44 ರನ್) ಸ್ಪಿನ್ನರ್ ಮೊಯಿನ್ ಅಲಿ ಎಸೆತದಲ್ಲಿ ಔಟಾದರು. ಇದರಿಂದಾಗಿ ಊಟದ ವಿರಾಮಕ್ಕೆ ತಂಡವು 118 ಓವರ್‌ಗಳಲ್ಲಿ 329 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು.

ರೋಹಿತ್–ಪೂಜಾರಗೆ ಗಾಯ: ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಮತ್ತು ಚೇತೇಶ್ವರ್ ಪೂಜಾರ ಅವರು ಗಾಯಗೊಂಡಿದ್ದು ಭಾನುವಾರ ಫೀಲ್ಡಿಂಗ್ ಮಾಡಲಿಲ್ಲ.

ಬ್ಯಾಟಿಂಗ್ ಮಾಡುವ ವೇಳೆ ರೋಹಿತ್ ಮೊಣಕಾಲಿಗೆ ಗಾಯವಾಗಿತ್ತು. ಪೂಜಾರ ಹಿಮ್ಮಡಿ ಉಳುಕಿತ್ತು. ಇದರಿಂದಾಗಿ ಅವರು ವಿಶ್ರಾಂತಿ ಪಡೆದರು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಬದಲೀ ಆಟಗಾರರು ಅವರಿಬ್ಬರ ಬದಲಿಗೆ ಫೀಲ್ಡಿಂಗ್ ಮಾಡಿದರು.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 191 (61.3ಓವರ್)

ಇಂಗ್ಲೆಂಡ್ (ಮೊದಲ ಇನಿಂಗ್ಸ್) 290 (84 ಓವರ್)

ಭಾರತ (ಎರಡನೇ ಇನಿಂಗ್ಸ್) 466 (148.2 ಓವರ್)(ಶನಿವಾರ 92 ಓವರ್‌ಗಳಲ್ಲಿ 3 ವಿಕೆಟ್‌ಗೆ 270)

ವಿರಾಟ್ ಸಿ ಓವರ್ಟನ್ ಬಿ ಅಲಿ 44 (96ಎ, 4X7) ಜಡೇಜ ಎಲ್‌ಬಿಡಬ್ಲ್ಯು ಬಿ ವೋಕ್ಸ್ 17 (59ಎ, 4X3), ರಹಾನೆ ಎಲ್‌ಬಿಡಬ್ಲ್ಯು ಬಿ ವೋಕ್ಸ್ 0 (8ಎ), ರಿಷಭ್ ಸಿ ಮತ್ತು ಬಿ ಅಲಿ 50 (106ಎ, 4X4), ಶಾರ್ದೂಲ್ ಸಿ ಓವರ್ಟನ್ ಬಿ ರೂಟ್ 60 (72ಎ, 4X7, 6X1), ಉಮೇಶ್ ಸಿ ಅಲಿ ಬಿ ಓವರ್ಟನ್ 25 (23ಎ, 4X1, 6X2), ಬೂಮ್ರಾ ಸಿ ಅಲಿ ಬಿ ವೋಕ್ಸ್ 24 (38ಎ, 4X4), ಸಿರಾಜ್ ಔಟಾಗದೆ 3 (6ಎ)

ಇತರೆ (ಲೆಗ್‌ಬೈ 7, ನೋಬಾಲ್ 2) 9

ವಿಕೆಟ್ ಪತನ: 4–296 (ರವೀಂದ್ರ ಜಡೇಜ, 101.2), 5–296 (ಅಜಿಂಕ್ಯ ರಹಾನೆ, 103.4), 6–312 (ವಿರಾಟ್ ಕೊಹ್ಲಿ, 110.6), 7–412 (ಶಾರ್ದೂಲ್ ಠಾಕೂರ್, 136.5), 8–414 (ರಿಷಭ್ ಪಂತ್, 137.3), 9–450 (ಜಸ್‌ಪ್ರೀತ್ ಬೂಮ್ರಾ, 145.6), 10–466 (ಉಮೇಶ್ ಯಾದವ್, 148.2).

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 33–10–79–1, ಒಲಿ ರಾಬಿನ್ಸನ್ 32–7–105–2, ಕ್ರಿಸ್ ವೋಕ್ಸ್ 32–8–83–3, ಕ್ರೇಗ್ ಓವರ್ಟನ್ 18.2–3–58–1, ಮೋಯಿನ್ ಅಲಿ 26–0–118–2, ಜೊ ರೂಟ್ 7–1–16–1

ಇಂಗ್ಲೆಂಡ್ (ಎರಡನೇ ಇನಿಂಗ್ಸ್) ವಿಕೆಟ್ ನಷ್ಟವಿಲ್ಲದೆ 77 (32 ಓವರ್)

ರೋರಿ ಬ್ಯಾಟಿಂಗ್ 31 (109ಎ, 4X2) ಹಸೀಬ್ ಬ್ಯಾಟಿಂಗ್ 43 (85ಎ, 4X6)

ಇತರೆ (ಲೆಗ್‌ಬೈ 1, ನೋಬಾಲ್ 2) 3

ಬೌಲಿಂಗ್: ಉಮೇಶ್ ಯಾದವ್ 6–2–13–0, ಜಸ್‌ಪ್ರೀತ್ ಬೂಮ್ರಾ 7–3–11–0, ರವೀಂದ್ರ ಜಡೇಜ 13–4–28–0, ಮೊಹಮ್ಮದ್ ಸಿರಾಜ್ 6–0–24–0

ಕೋಚ್ ರವಿಶಾಸ್ತ್ರಿಗೆ ಕೋವಿಡ್

ಲಂಡನ್ (ಪಿಟಿಐ): ಭಾರತ ತಂಡದ ಮುಖ್ಯ ಕೋಚ್ ರವಿ ಶಾಸ್ತ್ರಿ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಖಚಿತವಾಗಿದೆ. ಆದ್ದರಿಂದ ಅವರು ಮತ್ತು ನಾಲ್ವರು ನೆರವು ಸಿಬ್ಬಂದಿಯನ್ನು ಪ್ರತ್ಯೇಕ ವಾಸದಲ್ಲಿರಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ) ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

'ರವಿ ಶಾಸ್ತ್ರಿ, ಬೌಲಿಂಗ್ ಕೋಚ್ ಬಿ. ಅರುಣ್, ಫೀಲ್ಡಿಂಗ್ ಕೋಚ್ ಆರ್. ಶ್ರೀಧರ್, ಫಿಸಿಯೊ ನಿತಿನ್ ಪಟೇಲ್ ಅವರನ್ನು ವೈದ್ಯಕೀಯ ತಂಡವು ಪ್ರತ್ಯೇಕ ವಾಸದಲ್ಲಿರಿಸಿದೆ' ಎಂದು ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರತ್ಯೇಕವಾಸದಲ್ಲಿರುವವರು ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಟ್ಟಿದ್ದು ಹೋಟೆಲ್‌ನಲ್ಲಿಯೇ ಇರಲಿದ್ದಾರೆ. ವೈದ್ಯಕೀಯ ತಂಡವು ಮುಂದಿನ ಸೂಚನೆ ನೀಡುವವರೆಗೂ ತಂಡದೊಂದಿಗೆ ಪ್ರಯಾಣಿಸುವುದಿಲ್ಲ. ತಂಡದ ಉಳಿದ ಸದಸ್ಯರು ಆರೋಗ್ಯವಾಗಿದ್ದಾರೆ ಎಂದು ಬಿಸಿಸಿಐ ಹೇಳಿದೆ.

ತೀರ್ಪಿಗೆ ಅಸಮಾಧಾನ: ರಾಹುಲ್‌ಗೆ ದಂಡ

ಲಂಡನ್(ಪಿಟಿಐ): ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ವೇಳೆ ಅಂಪೈರ್ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿದ ಭಾರತದ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಅವರಿಗೆ ಪಂದ್ಯ ಶುಲ್ಕದ ಶೇ 15ರಷ್ಟು ದಂಡ ವಿಧಿಸಲಾಗಿದೆ.


ಕೆ.ಎಲ್. ರಾಹುಲ್

ಭಾರತದ ದ್ವಿತೀಯ ಇನ್ನಿಂಗ್ಸ್ ವೇಳೆಯಲ್ಲಿ ಇಂಗ್ಲೆಂಡ್ ವೇಗಿ ಜೇಮ್ಸ್ ಆ್ಯಂಡರ್ಸನ್ ದಾಳಿಯಲ್ಲಿ ರಾಹುಲ್ 46 ರನ್ ಗಳಿಸಿದ್ದಾಗ ಔಟ್ ಆಗಿದ್ದರು. ಇಂಗ್ಲೆಂಡ್ ಆಟಗಾರರ ಮನವಿಯನ್ನು ಫೀಲ್ಡ್ ಅಂಪೈರ್ ಪುರಸ್ಕರಿಸಿರಲಿಲ್ಲ. ಆಗ ಇಂಗ್ಲೆಂಡ್ ಡಿಆರ್‌ಎಸ್ ಅವಕಾಶ ಪಡೆಯಿತು. ಮೂರನೇ ಅಂಪೈರ್ ಔಟ್ ತೀರ್ಪು ನೀಡಿದ್ದರು. ಅಂಪೈರ್ ತೀರ್ಪಿನ ವಿರುದ್ಧ ರಾಹುಲ್ ಅಸಮಾಧಾನಗೊಂಡಿದ್ದರು. ಅಂಪೈರ್ ನಿರ್ಣಯಕ್ಕೆ ಅಸಮ್ಮತಿ ಸೂಚಿಸುವುದು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ನಿಯಮಗಳಿಗೆ ವಿರುದ್ಧವಾದದ್ದು. ಹೀಗಾಗಿ ಕ್ರಮ ಕೈಗೊಳ್ಳಲಾಗಿದೆ. ದಂಡ ಪಾವತಿಸಲು ರಾಹುಲ್ ಒಪ್ಪಿಕೊಂಡಿರುವುದರಿಂದ ವಿಚಾರಣೆ ನಡೆಸುವ ಅಗತ್ಯವಿಲ್ಲ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.


ಬೆಂಗಳೂರಿನ ಜಯನಗರದ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಭಾನುವಾರ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಮಹಿಳಾ ಕ್ರೀಡಾಪಟುಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಸಂಸದ ತೇಜಸ್ವಿ ಸೂರ್ಯ ಮತ್ತು ರಾಜ್ಯ ಯುವಜನ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಇದ್ದರು– ಪ್ರಜಾವಾಣಿ ಚಿತ್ರ

ವಾಲಿಬಾಲ್: ಸಂಸದರ ಎದುರು ಗೆದ್ದ ಸಚಿವ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಮತ್ತು ಸಂಸದರ ತಂಡಗಳ ನಡುವಿನ ಪೈಪೋಟಿಯಲ್ಲಿ ಸಚಿವರ ತಂಡಕ್ಕೆ ಜಯ ಒಲಿಯಿತು.

ಇದಕ್ಕೆ ಸಾಕ್ಷಿಯಾಗಿದ್ದು ಇಲ್ಲಿಯ ಜಯನಗರದ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರದರ್ಶನ ವಾಲಿಬಾಲ್ ಪಂದ್ಯ. ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಪಂದ್ಯವನ್ನು ಆಡಿದವರು.

ಭಾರತ ವಾಲಿಬಾಲ್ ಆಟಗಾರರನ್ನು ಆರು ಮಂದಿಯ ಎರಡು ತಂಡಗಳಾಗಿ ವಿಭಜಿಸಿ ಒಂದರಲ್ಲಿ ಸಚಿವ ಠಾಕೂರ್ ಆಡಿದರೆ ಮತ್ತೊಂದು ತಂಡದ ಪರ ಸಂಸದ ತೇಜಸ್ವಿ ಸೂರ್ಯ ಕಣಕ್ಕಿಳಿದರು. ಪಂದ್ಯದಲ್ಲಿ ಅನುರಾಗ್ ಅವರ ತಂಡವು 25–22ರಿಂದ ಸಂಸದರಿದ್ದ ತಂಡವನ್ನು ಮಣಿಸಿತು. ಸಚಿವ ಮತ್ತು ಸಂಸದ ಇಬ್ಬರೂ ಪಂದ್ಯ ಮುಗಿಯುವವರೆಗೂ ಉತ್ಸಾಹದಿಂದ ಆಡಿದ್ದು ಗಮನಸೆಳೆಯಿತು.

ಇದೇ ವೇಳೆ ಅನುರಾಗ್ ಠಾಕೂರ್ ಅವರು ಕ್ರೀಡಾಪಟುಗಳೊಂದಿಗೆ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹಾಜರಿದ್ದರು.

'ಪ್ಯಾರಾಲಿಂಪಿಕ್ಸ್ ತಂಡಕ್ಕೂ ಪ್ರಧಾನಿ ಮೋದಿ ಆತಿಥ್ಯ'

ಒಲಿಂಪಿಕ್ಸ್ ತಂಡಕ್ಕೆ ಆತಿಥ್ಯ ನೀಡಿದಂತೆ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಅಥ್ಲೀಟ್‌ಗಳಿಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಭಿನಂದನಾ ಕಾರ್ಯಕ್ರಮ ಆಯೋಜಿಸಲಿದ್ದಾರೆ ಎಂದು ಠಾಕೂರ್ ಇದೇ ವೇಳೆ ತಿಳಿಸಿದರು. ಈ ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ನಾವು 19 ಪದಕಗಳನ್ನು ಗೆದ್ದಿದ್ದೇವೆ. 2016ರ ಪ್ಯಾರಾಲಿಂಪಿಕ್ಸ್‌ಗಿಂತ ಇದು ಐದು ಪಟ್ಟು ಹೆಚ್ಚು ಎಂದು ಅವರು ನುಡಿದರು.